# ಯೋಬನ ಗ್ರಂಥ

## ಮುನ್ನುಡಿ

ಈ ಗ್ರಂಥವು ಪಾಪ-ಪ್ರಾಯಶ್ಚಿತ್ತ ಕುರಿತ ಒಂದು ಕವನ. ಒಬ್ಬನು ಸತ್ಯವಂತನಾಗಿದ್ದರೂ ಕಷ್ಟದುಃಖಗಳಿಗೆ ಏಕೆ ಈಡಾಗಬೇಕು? ಯೋಬನು ಒಬ್ಬ ಶ್ರೀಮಂತ ಹಾಗೂ ಸತ್ಪುರುಷ. ಆದರೂ ನಾನಾ ಅನಾಹುತಗಳಿಗೆ ಈಡಾಗುತ್ತಾನೆ. ಮಡದಿ ಮಕ್ಕಳನ್ನು ಕಳೆದುಕೊಳ್ಳುತ್ತಾನೆ. ಅವನ ಆಸ್ತಿಪಾಸ್ತಿಯೆಲ್ಲ ನಾಶವಾಗುತ್ತದೆ; ಅದು ಮಾತ್ರವಲ್ಲ, ಅವನ ದೇಹ ಭೀಕರ ವ್ಯಾಧಿಗೆ ತುತ್ತಾಗುತ್ತದೆ. ಇಂಥ ಅನ್ಯಾಯಕ್ಕೆ ಯೋಬನ ಹಾಗೂ ಅವನ ಗೆಳೆಯರ ಪ್ರತಿಕ್ರಿಯೆ ತದ್ವಿರುದ್ದವಾಗಿರುತ್ತದೆ. ಅವರ ಪ್ರತಿಕ್ರಿಯೆಗಳನ್ನು ಗ್ರಂಥಕರ್ತನು ಕವನ ರೂಪದಲ್ಲಿ ಸಂವಾದ ಶೈಲಿಯಲ್ಲಿ ವ್ಯಕ್ತಪಡಿಸುತ್ತಾನೆ. ಮಾನವ ಜೀವನದ ಆಗುಹೋಗುಗಳಲ್ಲಿ ದೇವರ ಪಾತ್ರವೇನು ಎಂಬುದು ಈ ಸಂವಾದಗಳ ಮುಖ್ಯ ಅಂಶ. ಅಂತಿಮವಾಗಿ ದೇವರೇ ಯೋಬನಿಗೆ ಪ್ರತ್ಯಕ್ಷರಾಗುತ್ತಾರೆ.

ಯೋಬನಿಗೆ ಒದಗಿದ ಕಷ್ಟಕಾರ್ಪಣ್ಯಗಳಿಗೆ ಕಾರಣವನ್ನು ಅವನ ಗೆಳೆಯರು ಸಂಪ್ರದಾಯಿಕ ಮಾತುಕತೆಗಳಲ್ಲಿ ವಿವರಿಸುತ್ತಾರೆ. ದೇವರು ಯಾವಾಗಲೂ ಸತ್ಕಾರ್ಯಗಳಿಗೆ ಸಂಭಾವನೆಯನ್ನೂ ದುಷ್ಕೃತ್ಯಗಳಿಗೆ ದಂಡನೆಯನ್ನೂ ನೀಡುವವರಾಗಿದ್ದಾರೆ. ಆದುದರಿಂದ ಘೋರ ಕಷ್ಟನಷ್ಟಗಳನ್ನು ಅನುಭವಿಸುತ್ತಿರುವ ಯೋಬನು ಪಾಪಿಷ್ಟನೇ ಆಗಿರಬೇಕು ಎಂಬುದು ಮಿತ್ರರ ತೀರ್ಮಾನ. ಆದರೆ ನಿಜಕ್ಕೂ ತನ್ನ ಜೀವನ ನೀತಿಯುತವಾದುದು, ಸತ್ಯಸಮಂಜಸವಾದುದು ಎಂಬ ಪ್ರಜ್ಞೆಯಿಂದ ಕೂಡಿದ ಯೋಬನಿಗೆ ಅವರ ವಾದ ಹಿಡಿಸುವುದಿಲ್ಲ. ತನ್ನಂಥ ಸತ್ಪುರುಷನಿಗೆ ಇಂಥ ಕ್ರೂರವಾದ ಕೇಡನ್ನು ದೇವರು ಹೇಗೆ ತಾನೇ ಬರಮಾಡಬಲ್ಲರು? ಆದರೆ, ಇಂಥ ಪರಿಸ್ಥಿತಿಯಲ್ಲೂ ಅವನು ದೇವರಲ್ಲಿ ನಂಬಿಕೆಯನ್ನು ಕಳೆದುಕೊಳ್ಳುವುದಿಲ್ಲ. ತನಗೆ ನ್ಯಾಯ ದೊರಕಬೇಕೆಂದು ಹಂಬಲಿಸುತ್ತಾನೆ. ಸತ್ಪುರುಷನಿಗೆ ಸಲ್ಲತಕ್ಕ ಪ್ರತಿಫಲ ತನಗೆ ದೊರಕಬೇಕೆಂದು ಹಾತೊರೆಯುತ್ತಾನೆ.

ದೇವರು ಯೋಬನ ಪ್ರಶ್ನೆಗಳಿಗೆ ನೇರವಾದ ಉತ್ತರ ಕೊಡುವುದಿಲ್ಲ. ಬದಲಿಗೆ ಅವನ ವಿಶ್ವಾಸವನ್ನು ಮೆಚ್ಚಿಕೊಳ್ಳುತ್ತಾರೆ; ತಮ್ಮ ದೈವಶಕ್ತಿಯನ್ನೂ ಜ್ಞಾನಸ್ವರೂಪವನ್ನೂ ಕವನ ರೂಪದಲ್ಲಿ ವರ್ಣಿಸುತ್ತಾರೆ. ಆಗ ಯೋಬನು ದೇವರ ಮಹತ್ವಕ್ಕೂ ಜ್ಞಾನಸಂಪೂರ್ಣತೆಗೂ ತಲೆಬಾಗಿ ತಾನು ಆಡಿದ ರೋಷಭರಿತ ಮಾತುಗಳಿಗಾಗಿ ವಿಷಾದಿಸುತ್ತಾನೆ, ಕ್ಷಮೆ ಕೋರುತ್ತಾನೆ.

ಕಟ್ಟಕಡೆಗೆ ಯೋಬನು ತನಗೆ ಮೊದಲಿದ್ದ ಸೌಭಾಗ್ಯವನ್ನು ಮರಳಿ ಪಡೆಯುತ್ತಾನೆ. ಅದಕ್ಕೂ ಇಮ್ಮಡಿ ಹೆಚ್ಚಾಗಿ ಪಡೆಯುತ್ತಾನೆ. ಯೋಬನ ಕಷ್ಟದುಃಖಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ಹೋದ ಅವನ ಮಿತ್ರರನ್ನು ದೇವರು ಖಂಡಿಸುತ್ತಾರೆ. ಎಲ್ಲ ಸನಾತನ ಧರ್ಮಗಳಿಗಿಂತಲೂ ತರ್ಕಬದ್ಧ ವಿಚಾರಗಳಿಗಿಂತಲೂ ದೇವರು ದೊಡ್ಡವರು ಎಂಬುದು ಯೋಬನಿಗೆ ಮನದಟ್ಟಾಗುತ್ತದೆ.

## ಪರಿವಿಡಿ


| | | | | |
|---|---|---|---|---|
| ಪೀಠಿಕೆ | – | 1.1 | – | 2.13 |
| ಯೋಬ ಮತ್ತು ಮಿತ್ರರು | – | 3.1 | – | 31.40 |
| 1) ಯೋಬನ ದೂರು | – | 3.1 | – | 3.26 |
| 2) ಮೊದಲನೇ ಸಂವಾದ | – | 4.1 | – | 14.22 |
| 3) ಎರಡನೇ ಸಂವಾದ | – | 15.1 | – | 21.34 |
| 4) ಮೂರನೇ ಸಂವಾದ | – | 22.1 | – | 27.23 |
| 5) ದೈವಜ್ಞಾನದ ಸ್ತುತಿ | – | 28.1 | – | 28.28 |
| 6) ಯೋಬನ ಕೊನೆಯ ಹೇಳಿಕೆ | – | 29.1 | – | 31.40 |

| | | | | |
|---|---|---|---|---|
| 7) ಎಲೀಹುವಿನ ಭಾಷಣ | – | 32.1 | – | 37.24 |
| 8) ಯೋಬನಿಗೆ ದೇವರಿತ್ತ ಉತ್ತರ | – | 38.1 | – | 42.6 |
| 9) ಸಮಾಪ್ತಿ | – | 42.7 | – | 42.17 |


# ಯೋಬನ ಗ್ರಂಥ

## ಯೋಬನ ಪರೀಕ್ಷೆ

**1** ‘ಊಚ್’ ಎಂಬ ನಾಡಿನಲ್ಲಿ ‘ಯೋಬ’ ಎಂಬ ಒಬ್ಬ ವ್ಯಕ್ತಿಯಿದ್ದ. ಆತನು ದೋಷರಹಿತ, ಸತ್ಯವಂತ, ದೇವರಲ್ಲಿ ಭಯಭಕ್ತಿ ಉಳ್ಳವನು, ಕೆಟ್ಟದ್ದನ್ನು ತೊರೆದು ಬಾಳಿದವನು. 2ಆತನಿಗೆ ಏಳು ಗಂಡು, ಮೂರು ಹೆಣ್ಣು ಮಕ್ಕಳು ಇದ್ದರು. 3ಏಳು ಸಾವಿರ ಕುರಿಗಳು, ಮೂರು ಸಾವಿರ ಒಂಟೆಗಳು, ಐನೂರು ಜೋಡಿ ಎತ್ತುಗಳು, ಮತ್ತು ಐನೂರು ಕತ್ತೆಗಳು ಅವನಿಗಿದ್ದವು. ಜೊತೆಗೆ, ಆತನಿಗಿದ್ದ ಸೇವಕರೋ ಹಲವಾರು. ಮೂಡಣ ನಾಡಿನವರಲ್ಲಿ ಆತನೇ ದೊಡ್ಡ ಐಶ್ವರ್ಯವಂತ.

4 ಆತನ ಗಂಡು ಮಕ್ಕಳು ಒಂದೊಂದು ದಿನ ಒಬ್ಬೊಬ್ಬನ ಮನೆಯಲ್ಲಿ ಔತಣವನ್ನು ಏರ್ಪಡಿಸುತ್ತಿದ್ದರು. ತಮ್ಮ ಮೂವರು ತಂಗಿಯರನ್ನೂ ಆ ಭೋಜನಕ್ಕೆ ಆಹ್ವಾನಿಸುತ್ತಿದ್ದರು. 5ಔತಣದ ಸರದಿ ತೀರಿದ ಬಳಿಕ, ಯೋಬನು ತನ್ನ ಮಕ್ಕಳು ಒಂದು ವೇಳೆ ಪಾಪಮಾಡಿ ಮನದಲ್ಲೇ ದೇವರನ್ನು ದೂಷಿಸಿರಬಹುದೆಂದುಕೊಂಡು, ಅವರನ್ನು ಕರೆಸಿ ಶುದ್ಧೀಕರಣ ಮಾಡಿಸುತ್ತಿದ್ದನು. ಬೆಳಿಗ್ಗೆ ಎದ್ದು ಅವರೊಬ್ಬೊಬ್ಬರಿಗಾಗಿ ದಹನಬಲಿಗಳನ್ನು ಅರ್ಪಿಸುತ್ತಿದ್ದನು; ಇದು ಯೋಬನ ದೈನಂದಿನ ವಾಡಿಕೆಯಾಗಿತ್ತು.

6 ಒಮ್ಮೆ ಸ್ವರ್ಗನಿವಾಸಿಗಳು ಸರ್ವೇಶ್ವರ ಸ್ವಾಮಿಯ ಸನ್ನಿಧಿಯಲ್ಲಿ ಓಲಗಿಸಿದ್ದರು. ಸೈತಾನನೂ ಅಲ್ಲಿಗೆ ಬಂದನು. 7ಸರ್ವೇಶ್ವರ ಸೈತಾನನನ್ನು ನೋಡಿ, “ಎಲ್ಲಿಂದ ಬಂದೆ?” ಎಂದು ಕೇಳಿದರು. ಅದಕ್ಕೆ ಅವನು, “ಭೂಲೋಕದಲ್ಲಿ ಗಸ್ತುತಿರುಗಿ ಬಂದಿದ್ದೇನೆ” ಎಂದನು. 8ಆಗ ಸರ್ವೇಶ್ವರ, “ನನ್ನ ದಾಸ ಯೋಬನನ್ನು ಗಮನಿಸಿದೆಯಾ? ಆತನು ದೋಷರಹಿತ, ಸತ್ಯವಂತ, ದೇವರಲ್ಲಿ ಭಯಭಕ್ತಿ ಯುಳ್ಳವನು, ಕೆಟ್ಟದ್ದನ್ನು ತೊರೆದು ಬಾಳುವವನು. ಆತನಿಗೆ ಸರಿ ಸಮಾನನು ಭೂಲೋಕದಲ್ಲಿ ಎಲ್ಲಿಯೂಸಿಗನು,” ಎಂದು ಹೇಳಿದರು. 9ಅದಕ್ಕೆ ಸೈತಾನನು ಹೀಗೆ ಎಂದನು: “ಲಾಭವಿಲ್ಲದೆ ಯೋಬನು ನಿಮ್ಮಲ್ಲಿ ಭಯಭಕ್ತಿ ಇಟ್ಟಿದ್ದಾನೆಯೇ? 10ನೀವು ಆತನಿಗೂ ಆತನ ಎಲ್ಲ ಆಸ್ತಿಪಾಸ್ತಿಗೂ ಬೇಲಿ ಹಾಕಿ ಭದ್ರಪಡಿಸಿದ್ದೀರಲ್ಲವೇ? ಆತನು ಕೈ ಹಾಕಿದ ಕೆಲಸ ಸಫಲವಾಗುವಂತೆ ಮಾಡಿದ್ದೀರಲ್ಲವೆ? ಎಂದೇ ಆತನ ಸಿರಿ ಸಂಪತ್ತು ಈ ನಾಡಿನಲ್ಲಿ ಬೆಳೆಯುತ್ತಾ ಬಂದಿದೆ. 11ಆದರೆ ನೀವು ಕೈಹಾಕಿ ಆತನ ಸೊತ್ತನ್ನೆಲ್ಲಾ ಅಳಿಸಿಬಿಡಿ. ಆಗ ಆತನು ನಿಮ್ಮನ್ನು ಮುಖಾಮುಖಿಯಾಗಿ ನಿಂದಿಸುತ್ತಾನೋ ಇಲ್ಲವೋ ಎಂದು ನೋಡುವಿರಂತೆ!” ಎಂದನು.

12 ಸರ್ವೇಶ್ವರ ಸೈತಾನನಿಗೆ, “ನೋಡು, ಆತನ ಆಸ್ತಿಪಾಸ್ತಿಯೆಲ್ಲ ನಿನ್ನ ಕೈವಶಕ್ಕೆ ಬಿಟ್ಟಿದ್ದೇನೆ. ಆತನ ಮೈಮೇಲೆ ಮಾತ್ರ ಕೈಹಾಕಬೇಡ”, ಎಂದು ಅಪ್ಪಣೆಕೊಟ್ಟರು. ಕೂಡಲೆ ಸೈತಾನನು ಸರ್ವೇಶ್ವರರ ಸನ್ನಿಧಾನದಿಂದ ಹೊರಟುಹೋದನು.

### ಯೋಬನ ಆಸ್ತಿಪಾಸ್ತಿಯ ಅಳಿವು, ಪುತ್ರಪುತ್ರಿಯರ ಮರಣ

13 ಇದಾದ ಬಳಿಕ ಯೋಬನ ಪುತ್ರಪುತ್ರಿಯರು ತಮ್ಮ ಹಿರಿಯಣ್ಣನ ಮನೆಯಲ್ಲಿ ಔತಣ ಮಾಡುತ್ತಿದ್ದರು. 14ಆಗ ದೇವದೂತನೊಬ್ಬನು ಯೋಬನ ಬಳಿಗೆ ಬಂದು, “ನಿಮ್ಮ ಎತ್ತುಗಳು ಉಳುತ್ತಾ ಇದ್ದವು; ಕತ್ತೆಗಳು ಹತ್ತಿರದಲ್ಲೆ ಮೇಯುತ್ತಾ ಇದ್ದವು. 15ಅಷ್ಟರಲ್ಲಿ, ಶೆಬದವರು ಬಂದು, ಮೇಲೆ ಬಿದ್ದು, ಅವುಗಳನ್ನು ಹೊಡೆದುಕೊಂಡು ಹೋದರು. ಕೂಲಿ ಆಳುಗಳನ್ನು ಕತ್ತಿಯಿಂದ ಕೊಂದುಹಾಕಿದರು. ನಾನೊಬ್ಬನೇ ತಲೆ ತಪ್ಪಿಸಿಕೊಂಡು ಈ ಸುದ್ದಿಯನ್ನು ನಿಮಗೆ ಮುಟ್ಟಿಸಲು ಓಡಿ ಬಂದೆ,” ಎಂದನು.

16 ಅವನು ಮಾತಾಡಿ ಮುಗಿಸುವಷ್ಟರಲ್ಲೇ ಮತ್ತೊಬ್ಬನು ಬಂದು, “ದೇವರು ಆಕಾಶದಿಂದ ಬೆಂಕಿ ಸುರಿಸಿದರು. ಅದು ಕುರಿಗಳನ್ನೂ, ಕೂಲಿ ಆಳುಗಳನ್ನೂ ಸುಟ್ಟು ಭಸ್ಮಮಾಡಿತು. ನಾನೊಬ್ಬನೇ ತಲೆತಪ್ಪಿಸಿಕೊಂಡು ಈ ಸುದ್ದಿಯನ್ನು ನಿಮಗೆ ಮುಟ್ಟಿಸಲು ಓಡಿ ಬಂದೆ,” ಎಂದನು.

17 ಅಷ್ಟರಲ್ಲಿ ಇನ್ನೊಬ್ಬನು ಬಂದು “ಕಸ್ದೀಯರು ಮೂರು ಗುಂಪುಗಳಾಗಿ ಬಂದು, ಮೇಲೆ ಬಿದ್ದು, ಒಂಟೆಗಳನ್ನು ಹೊಡೆದುಕೊಂಡು ಹೋದರು. ಅಲ್ಲದೆ ಆ ಕೂಲಿ ಆಳುಗಳನ್ನು ಕತ್ತಿಯಿಂದ ಸಂಹರಿಸಿದರು. ನಾನೊಬ್ಬನೇ ತಲೆತಪ್ಪಿಸಿಕೊಂಡು ಈ ಸುದ್ದಿಯೊಂದಿಗೆ ನಿಮ್ಮ ಬಳಿಗೆ ಓಡಿ ಬಂದೆ,” ಎಂದನು.

18 ಅವನು ವರದಿಮಾಡುತ್ತಿದ್ದಾಗಲೇ ಬೇರೊಬ್ಬನು ಬಂದು, “ನಿಮ್ಮ ಪುತ್ರಪುತ್ರಿಯರು ಹಿರಿಯಣ್ಣನ ಮನೆಯಲ್ಲಿ ಔತಣದಲ್ಲಿದ್ದರು.
19ಆಗ ತಟ್ಟನೆ ಅರಣ್ಯ ಕಡೆಯಿಂದ ಬಿರುಗಾಳಿ ಎದ್ದಿತು; ನಾಲ್ಕು ಕಡೆಯಿಂದಲೂ ಮನೆಗೆ ಬಡಿಯಿತು. ಮನೆ ಕುಸಿದುಬಿತ್ತು. ಯುವಕಯುವತಿಯರೆಲ್ಲ ಸತ್ತುಹೋದರು. ನಾನೊಬ್ಬನೇ ತಲೆ ತಪ್ಪಿಸಿಕೊಂಡು ಈ ಸುದ್ದಿಯನ್ನು ನಿಮಗೆ ತಂದಿದ್ದೇನೆ,” ಎಂದು ತಿಳಿಸಿದನು.

20 ಆಗ ಯೋಬನು ಎದ್ದು ನಿಂತು, ದುಃಖವನ್ನು ತಾಳಲಾರದೆ ತನ್ನ ಮೇಲಂಗಿಯನ್ನು ಹರಿದುಬಿಟ್ಟ. ತಲೆಯನ್ನು ಬೋಳಿಸಿಕೊಂಡ. ನೆಲದ ಮೇಲೆ ಬಿದ್ದು, ದೇವರಿಗೆ ಸಾಷ್ಟಾಂಗವೆರಗಿ:

21 ಬರಿಗೈಯಲ್ಲಿ ಬಂದೆ ನಾನು ತಾಯಗರ್ಭದಿಂದ
ಬರಿಗೈಯಲ್ಲಿ ಹಿಂತಿರುಗುವೆ ನಾನು ಇಲ್ಲಿಂದ
ಸರ್ವೇಶ್ವರ ಕೊಟ್ಟ
ಸರ್ವೇಶ್ವರ ತೆಗೆದುಕೊಂಡ
ಆತನ ನಾಮಕ್ಕೆ ಸ್ತುತಿಸ್ತೋತ್ರ ! ಎಂದನು.

22 ಈ ಎಲ್ಲ ವಿಪತ್ತು ಬಂದೊದಗಿದರೂ ಯೋಬನು ಪಾಪ ಮಾಡಲಿಲ್ಲ. ದೇವರ ಮೇಲೆ ತಪ್ಪು ಹೊರಿಸಲಿಲ್ಲ.

**2** ಸ್ವರ್ಗನಿವಾಸಿಗಳು ಇನ್ನೊಂದು ದಿನ ಸರ್ವೇಶ್ವರ ಸ್ವಾಮಿಯ ಸನ್ನಿಧಿಯಲ್ಲಿ ಓಲಗಿಸಿದ್ದರು. ಸೈತಾನನು ಅವರ ಮಧ್ಯೆ ಕಾಣಿಸಿಕೊಂಡನು.
2 “ಎಲ್ಲಿಂದ ಬಂದೆ?” ಎಂದು ಸರ್ವೇಶ್ವರನು ಅವನನ್ನು ಕೇಳಿದರು. “ಭೂಲೋಕದಲ್ಲೆಲ್ಲಾ ಗಸ್ತು ತಿರುಗಿ ಬಂದಿದ್ದೇನೆ,” ಎಂದು ಅವನು ಉತ್ತರಕೊಟ್ಟನು.

3 ಆಗ ಸರ್ವೇಶ್ವರ ಅವನಿಗೆ, “ನನ್ನ ದಾಸ ಯೋಬನನ್ನು ಗಮನಿಸಿದೆಯಾ? ಆತನು ದೋಷರಹಿತ, ಸತ್ಯವಂತ, ದೇವರಲ್ಲಿ ಭಯಭಕ್ತಿಯುಳ್ಳವನು, ಕೆಟ್ಟದ್ದನ್ನು ತೊರೆದು ಬಾಳುವವನು. ನಿಷ್ಕಾರಣವಾಗಿ ಆತನನ್ನು ನಾಶಮಾಡಲು ಬಿಡಬೇಕೆಂದು ನೀನು ನನ್ನನ್ನು ಪೀಡಿಸಿದೆ. ಆದರೂ ಆತನು ತನ್ನ ಸತ್ಯಸಂಧತೆಯನ್ನು ಬಿಡದೆ ಇದ್ದಾನೆ ನೋಡು,” ಎಂದರು.

4 ಅದಕ್ಕೆ ಸೈತಾನನು, “ಚರ್ಮಕ್ಕೆ ಚರ್ಮ, ಎಂದ ಹಾಗೆ ಒಬ್ಬ ಮನುಷ್ಯ ಪ್ರಾಣ ಉಳಿಸಿಕೊಳ್ಳಲು ತನ್ನ ಸರ್ವಸ್ವವನ್ನೂ ತೊರೆದು ಬಿಡುತ್ತಾನೆ.
5ನೀವೀಗ ಕೈಚಾಚಿ ಯೋಬನ ಮೂಳೆ ಮಾಂಸಗಳನ್ನು ಮುಟ್ಟಿನೋಡಿ; ಅವನು ನಿಮ್ಮ ಮುಖದೆದುರಿಗೇ ನಿಮ್ಮನ್ನು ದೂಷಿಸುತ್ತಾನೋ ಇಲ್ಲವೋ, ನೀವೇ ನೋಡುವಿರಂತೆ,” ಎಂದನು.
6ಆಗ ಸರ್ವೇಶ್ವರ ಸೈತಾನನಿಗೆ, “ಸರಿ, ಆತನನ್ನು ನಿನ್ನ ಕೈಗೆ ಬಿಟ್ಟಿದ್ದೇನೆ. ಆದರೆ ಆತನ ಪ್ರಾಣವನ್ನು ಮಾತ್ರ ಮುಟ್ಟಕೂಡದು,” ಎಂದು ಆಜ್ಞಾಪಿಸಿದರು.

7 ಸೈತಾನನು ಸರ್ವೇಶ್ವರಸ್ವಾಮಿಯ ಸನ್ನಿಧಿಯಿಂದ ಹೊರಟು ಬಂದ. ಯೋಬನ ಅಂಗಾಲು ಮೊದಲ್ಗೊಂಡು ನಡುನೆತ್ತಿಯವರೆಗೂ ಕೆಟ್ಟ ಕುರುಗಳು ಹುಟ್ಟುವಂತೆ ಮಾಡಿ ಆತನನ್ನು ಬಾಧಿಸಿದ.
8ಯೋಬನು ತನ್ನ ಮೈಕಡಿತವನ್ನು ತಾಳಲಾಗದೆ ಬೋಕಿಯೊಂದರಿಂದ ಕೆರೆದುಕೊಳ್ಳುತ್ತಾ ಬೂದಿ ಗುಂಡಿಯಲ್ಲಿ ಕುಳಿತುಕೊಳ್ಳಬೇಕಾಯಿತು.
9ಆತನ ಹೆಂಡತಿ, “ನಿನ್ನ ಸತ್ಯ ಸಚಿಥತೆಯನ್ನು ಇನ್ನೂ ಬಿಡಲಿಲ್ಲವೇ? ದೇವರನ್ನು ದೂಷಿಸಿ ಸಾಯಬಾರದೇ?” ಎಂದು ಹೀಗಳೆದಳು.

10 ಯೋಬನು ಅವಳಿಗೆ, "ನೀನು ಹುಚ್ಚಳಂತೆ ಮಾತನಾಡುತ್ತಿರುವೆ. ದೇವರಿಂದ ನಾವು ಸುಖಪಡೆಯಬಹುದು, ದುಃಖವನ್ನು ಮಾತ್ರ ಪಡೆಯಬಾರದೊ?" ಎಂದು ಉತ್ತರಕೊಟ್ಟ. ಇಂಥ ಪರಿಸ್ಥಿತಿಯಲ್ಲೂ ಪಾಪದ ಮಾತೊಂದೂ ಅವನ ಬಾಯಿಂದ ಬರಲಿಲ್ಲ.

### ಯೋಬನ ಮಿತ್ರರು

11 ಯೋಬನಿಗೆ ಒದಗಿದ್ದ ಆಪತ್ತಿನ ಸುದ್ದಿ ಆತನ ಮೂವರು ಮಿತ್ರರಿಗೆ ಮುಟ್ಟಿತು. ಅವರು ತಮ್ಮ ತಮ್ಮ ಊರುಗಳಿಂದ, ಅಂದರೆ, ತೇಮಾನ್ಯದಿಂದ ಎಲೀಫಜನೂ, ಶೂಹ್ಯದಿಂದ ಬಿಲ್ದದನು, ನಾಮಾಥ್ಯದಿಂದ ಚೋಫರನೂ ಹೊರಟುಬಂದರು. ಯೋಬನಿಗೆ ತಮ್ಮ ಸಂತಾಪವನ್ನು ವ್ಯಕ್ತಪಡಿಸಿ ಅವನನ್ನು ಸಾಂತ್ವನಗೊಳಿಸಬೇಕೆಂಬ ಒಂದೇ ಉದ್ದೇಶದಿಂದ ಅವರು ಆತನ ಬಳಿಗೆ ಬಂದರು. 12ದೂರದಿಂದ ನೋಡಿದಾಗ ಆತನ ಗುರುತುಹಚ್ಚಲು ಕೂಡ ಅವರಿಂದಾಗಲಿಲ್ಲ. ಎಂದೇ ಅವರು ಗಟ್ಟಿಯಾಗಿ ಅತ್ತರು. ದುಃಖ ತಾಳಲಾರದೆ ತಂತಮ್ಮ ಮೇಲಂಗಿಯನ್ನು ಸೀಳಿಕೊಂಡರು. 13ಯೋಬನು ಅನುಭವಿಸುತ್ತಿದ್ದ ಅಪಾರ ಬಾಧೆಯನ್ನು ನೋಡಿ ಆತನೊಂದಿಗೆ ಏನನ್ನೂ ಮಾತನಾಡದೆ ಏಳು ದಿನಗಳವರೆಗೆ ಹಗಲಿರುಳೂ ಅವನ ಹತ್ತಿರದಲ್ಲೇ ನೆಲದ ಮೇಲೆ ತೆಪ್ಪನೆ ಕುಳಿತಿದ್ದರು.

### ಹುಟ್ಟು ದಿನಕ್ಕೆ ಧಿಕ್ಕಾರ!

**3** ಕೊನೆಗೆ ಯೋಬನೇ ಬಾಯ್ದೆರೆದು ತನ್ನ ಹುಟ್ಟು ದಿನವನ್ನು ಹೀಗೆಂದು ಶಪಿಸಿದ:

2–3"ಹಾಳಾಗಿ ಹೋಗಲಿ ನಾ ಹುಟ್ಟಿದಾ ದಿನವು
'ಗಂಡು ಮಗುವನ್ನು ಗರ್ಭಧರಿಸಿದೆ' ಎಂದಾ
ಇರುಳು !
4 ಆ ದಿನವು ಕಗ್ಗತ್ತಲಾಗಲಿ
ಸೂರ್ಯನ ಬೆಳಕು ಅದರ ಮೇಲೆ ಬೀಳದಿರಲಿ
ಉನ್ನತ ದೇವರು ಅದನ್ನು ಲೆಕ್ಕಿಸದಿರಲಿ.
5 ಕಾರ್ಮೋಡಗಳು ಅದನ್ನು ಕವಿಯಲಿ
ಇರುಳೂ ಮರಣದ ನೆರಳೂ ಅದನ್ನು
ಆಕ್ರಮಿಸಲಿ
ಹಗಲನ್ನೇ ಮುಬ್ಬಾಗಿಸುವ ಮುಸುಕು
ಅದನ್ನು ಹೆದರಿಸಲಿ.
6 ಕಾರ್ಗತ್ತಲು ಆ ರಾತ್ರಿಯನ್ನು ಮುತ್ತಲಿ
ಆ ಇರುಳು ತಿಂಗಳ ಲೆಕ್ಕಕೆ ಸೇರದಿರಲಿ
ಪಂಚಾಂಗದಲಿ ಅದು ಪರಿಗಣಿತವಾಗದಿರಲಿ.
7 ಆ ಇರುಳು ಬರಡಾಗಲಿ
ಸಂತಸದ ದನಿ ಅದರಲಿ ಕೇಳದಿರಲಿ.
8 ಮಾಟಮಂತ್ರಗಾರರು ಅದಕ್ಕೆ ಶಾಪ ಹಾಕಲಿ
ಘಟಸರ್ಪವೆಬ್ಬಿಸಬಲ್ಲ ಗಾರುಡಿಗರು ಅದನು
ಧಿಕ್ಕರಿಸಲಿ!
9 ಮುಂಜಾನೆಯ ತಾರೆಗಳು ಆ ದಿನದೊಳು
ಮಿಣುಕದಿರಲಿ
ಇದಿರುನೋಡಿದರೂ ಬೆಳಕನು ಕಾಣದಿರಲಿ
ಅರುಣೋದಯ ಕಣ್ದೆರೆವುದನು ಅದು

ನೋಡದಿರಲಿ!
10 ಏಕೆಂದರೆ ಅದು ನನ್ನ ತಾಯಿಯ
ಗರ್ಭಧ್ವಾರವನು ನನಗೆ ಮುಚ್ಚಲಿಲ್ಲ
ನನ್ನ ಕಣ್ಗಳಿಂದ ದುಃಖದುಗುಡವನು
ಮರೆಮಾಡಲಿಲ್ಲ.
11 ಹುಟ್ಟುವಾಗಲೇ ನಾನೇಕೆ ಸಾಯಲಿಲ್ಲ?
ಉದರದಿಂದ ಬಂದೊಡನೆ ನಾನೇಕೆ
ಮಡಿಯಲಿಲ್ಲ?
12 ತಾಯಿಯ ಮಡಿಲು ನನ್ನನು ಹೊತ್ತುದೇಕೆ?
ಆ ತಾಯ್ಮೊಲೆಗಳು ನನಗೆ ಕುಡಿಯ
ಕೊಟ್ಟುದೇಕೆ?
13 ಆಗ ಸತ್ತಿದ್ದರೆ ನಾನೀಗ ಮೌನವಾಗಿ
ಮಲಗಿರುತ್ತಿದ್ದೆ
ಕಣ್ಮುಚ್ಚಿ ಪ್ರಶಾಂತವಾಗಿ ನಿದ್ರಿಸುತ್ತಿದ್ದೆ.
14 ಪಾಳು ಪೊಡವಿಯಲ್ಲಿ ನೆಲಮಾಳಿಗೆಗಳನ್ನು
ನಿರ್ಮಿಸಿಕೊಂಡಿದ್ದ
ರಾಜ–ಮಂತ್ರಿಗಳೊಡನೆ ನಾನಿರುತ್ತಿದ್ದೆ.
15 ಮನೆಗಳಲ್ಲಿ ತಮಗಾಗಿ ಬೆಳ್ಳಿಬಂಗಾರಗಳನ್ನು
ತುಂಬಿಸಿಕೊಂಡಿದ್ದ
ಅಧಿಪತಿಗಳೊಡನೆ ನಾನು ಶ್ರಮಿಸುತ್ತಿದ್ದೆ.
16 ಗರ್ಭಸ್ರಾವವಾಗಿ ಬಿದ್ದು ಹೂಳಿಟ್ಟ ಪಿಂಡದಂತೆ
ಬೆಳಕನ್ನೇ ಕಾಣದೆ ಸತ್ತುಹೋದ ಕೂಸುಗಳಂತೆ
ಪ್ರಾಯಶಃ ಜನ್ಮವೇ ಇಲ್ಲದವನಾಗಿ
ನಾನಿರುತ್ತಿದ್ದೆ.
17 ದಣಿದವರಿಗೆ ದೊರಕುವುದು ಆ ಕೂಪದಲಿ
ವಿಶ್ರಾಂತಿ
ಅಣಗುವುದಲ್ಲಿ ದುರುಳರು ಕೊಡುವ ಹಾವಳಿ.
18 ಸೆರೆಯಾಳುಗಳಿಗೆ ದಣಿಯ ಕರ್ಕಶದನಿ
ಕೇಳಿಸದು ಅಲ್ಲಿ
ಖೈದಿಗಳು ಸಾಮೂಹಿಕವಾಗಿ
ವಿಶ್ರಮಿಸಿಕೊಳ್ಳುವರಲ್ಲಿ.
19 ಚಿಕ್ಕವರು ದೊಡ್ಡವರು ಎಂಬ
ತಾರತಮ್ಯ ಅಲ್ಲಿಲ್ಲ
ಗುಲಾಮ ಯಜಮಾನನೆಂಬ
ನಿಯಮವೂ ಇಲ್ಲ.
20 ಕಷ್ಟದಲ್ಲಿರುವವನಿಗೆ ಏತಕ್ಕೆ ಬೆಳಕು?
ದುಃಖ ಪೀಡಿತನಿಗೆ ಏತಕ್ಕೆ ಬದುಕು?
21 ಎಷ್ಟು ಅಗೆದರೂ ದೊರಕದು
ಅಂಥವರಿಗೆ ನಿಧಿನಿಕ್ಷೇಪ
ಅದಕ್ಕಿಂತ ಮಿಗಿಲಾಗಿ ಬಯಸಿದರೂ

ಬಾರದು ಮರಣ.
22 ಅವರು ಸಮಾಧಿಗೆ ಸೇರುವಾಗ
ಆಗುವುದು ಅವರಿಗೆ ಅಮಿತಾನಂದ.
23 ಬೆಳಕು ಏತಕೆ ದಾರಿ ಮುಚ್ಚಿರುವವನಿಗೆ?
ತನ್ನ ಸುತ್ತಲೂ ದೇವರೆ ಬೇಲಿ
ಹಾಕಿರುವವನಿಗೆ?
24 ನಿಟ್ಟುಸಿರೇ ನನ್ನ ಮುಂದಿರುವ ಊಟ
ಜಲಧಾರೆಯಂತಿದೆ ನನ್ನ ನರಳಾಟ.
25 ನನಗೆ ಭಯ ಹುಟ್ಟಿದೊಡನೆ ಆಪತ್ತು
ಬಂದೊದಗುತ್ತದೆ
ಯಾವುದಕ್ಕೆ ಅಂಜುತ್ತೇನೊ, ಅದೇ ತಪ್ಪದೆ
ಸಂಭವಿಸುತ್ತದೆ.
26 ನನಗಿಲ್ಲ ಶಾಂತಿ, ವಿಶ್ರಾಂತಿ, ಉಪಶಮನ
ನನಗಿರುವುದೆಂದರೆ ನಿರಂತರ ಯಾತನ."

### ಮೊದಲನೇ ಸಂವಾದ

**4** ಆಗ ತೇಮಾನ್ಯವಾದ ಎಲೀಫಜನು ಹೀಗೆಂದನು :
2 "ಯಾರಾದರೂ ನಿನ್ನೊಡನೆ ಮಾತನಾಡಿದರೆ
ಬೇಸರವೇಕೆ ನಿನಗೆ?
ಆದರೂ ಯಾರಿಂದಾದೀತು ಮಾತನಾಡದೆ
ಸುಮ್ಮನಿರುವುದಕ್ಕೆ?
3 ನೋಡು, ನೀನೇ ಅನೇಕರಿಗೆ ಶಿಕ್ಷಣವಿತ್ತೆ
ಜೋಲು ಬಿದ್ದ ಕೈಗಳಿಗೆ ಶಕ್ತಿಯನ್ನಿತ್ತೆ.
4 ನಿನ್ನ ನುಡಿ ಎಡವಿಬೀಳುವವರನ್ನು
ನಿಲ್ಲಗೊಳಿಸಿತು
ಕುಸಿದುಬೀಳುವ ಮೊಣಕಾಲುಗಳನ್ನು
ಬಲಪಡಿಸಿತು
5 ಈಗಲಾದರೂ ಆ ದುರಿತಗಳಿಂದ ನೀನೇ
ಧೃತಿಗೆಟ್ಟಿರುವೆ
ಅವು ನಿನಗೆ ತಗಲಿ ನೀನೇ ತಲ್ಲಣಗೊಂಡಿರುವೆ!
6 ನಿನ್ನ ನಂಬಿಕೆಗೆ ಆಧಾರ ನಿನ್ನ ಭಯಭಕ್ತಿ
ಯಲ್ಲವೆ?
ನಿನ್ನ ನಿರೀಕ್ಷೆಗೆ ಅಸ್ತಿವಾರ ನಿನ್ನ ಆದರ್ಶವಲ್ಲವೆ?
7 ಆಲೋಚಿಸಿ ನೋಡು, ನಿರಪರಾಧಿ
ಎಂದಾದರೂ ನಾಶವಾದುದುಂಟೆ?
ಸತ್ಯ-ಸಂಧರು ಎಲ್ಲಿಯಾದರೂ
ನಿರ್ಮೂಲವಾದುದುಂಟೆ?
8 ನನಗೆ ತಿಳಿದಮಟ್ಟಿಗೆ, ಕೆಟ್ಟದ್ದನು ನೆಡುವವರು,
ದುಷ್ಟತನವನು ಬಿತ್ತುವವರು,

ಅದನ್ನೆ ಕೊಯ್ಯುವರು.
9 ಅಂಥವರು ದೇವರ ಉಸಿರಿನಿಂದಲೆ
ನಾಶವಾಗುವರು
ಆತನ ಸಿಟ್ಟಿನಿಂದಲೆ ಸತ್ತುಹೋಗುವರು.
10 ಸಿಂಹಗರ್ಜನೆ ಭೀಕರ ಸಿಂಹದಾರ್ಭಟಗಳು
ಅಡಗುವುವು
ಯುವಸಿಂಹದ ಕೋರೆಗಳು ಮುರಿದು
ಹೋಗುವವು.
11 ಬೇಟೆಯಿಲ್ಲದೆ ಮೃಗರಾಜ ಸಾಯುವನು
ಸಿಂಹದ ಮರಿಗಳು ಚದರಿ ಹೋಗುವವು.
12 ನನಗೆ ವಿಷಯವೊಂದು ಗುಟ್ಟಾಗಿ ತಿಳಿದು ಬಂತು
ಪಿಸುಪಿಸುಮಾತಾಗಿ ಅದು ನನ್ನ ಕಿವಿಗೆ ಬಿತ್ತು.
13 ಜನರಿಗೆ ಗಾಢನಿದ್ರೆ ಹತ್ತುವ ಹೊತ್ತಿನಲಿ
ರಾತ್ರಿಕಾಲದ ಸ್ವಪ್ನ ಯೋಚನೆಗಳ ಸುಳಿಯಲಿ
14 ಭೀಕರ ದಿಗಿಲು ಉಂಟಾಯಿತು
ನನ್ನೆಲುಬುಗಳೆಲ್ಲವನ್ನು ನಡುಗಿಸಿತು
15 ಆಗ ಆತ್ಮವೊಂದು ಮುಖದ ಮುಂದೆ
ಹಾದುಹೋಯಿತು
ನನ್ನ ಮೈಯೆಲ್ಲ ನಿಲುಗೂದಲಾಯಿತು.
16 ರೂಪವೊಂದು ನನ್ನ ಕಣ್ಮುಂದೆ ನಿಂತಿತ್ತು
ಆದರೂ ಅದೇನೆಂಬುದು ನನಗೆ ತಿಳಿಯದೆ
ಹೋಯಿತು
ಸೂಕ್ಷ್ಮವಾಣಿಯೊಂದು ನನಗೆ ಕೇಳಿಬಂತು:
17 "ದೇವರ ದೃಷ್ಟಿಯಲ್ಲಿ ಸತ್ಯವಂತನಾಗಿರಲು
ಮಾನವನಿಗೆ ಸಾಧ್ಯವೆ?
ಸೃಷ್ಟಿಕರ್ತನ ಸನ್ನಿಧಿಯಲ್ಲಿ ಪರಿಶುದ್ಧನಾಗಿರಲು
ಅವನಿಂದ ಸಾಧ್ಯವೆ?"
18 ತನ್ನ ಸೇವಕರಲ್ಲೂ ದೇವರು
ನಂಬಿಕೆಯಿಡುವುದಿಲ್ಲವಲ್ಲಾ!
ತನ್ನ ದೂತರ ಮೇಲೂ ಆತನು ತಪ್ಪು
ಹೊರಿಸುತ್ತಾನಲ್ಲಾ!
19 ಇಂತಿರಲು ದೂಳಿನಲ್ಲಿ ತಳವೂರಿ,
ಮಣ್ಣಿನೊಡಲ ಹೊಕ್ಕು ಬಾಳಿ
ಹುಳುವಿನಷ್ಟು ಸುಲಭವಾಗಿ ಅಳಿದು
ಹೋಗುವವರಲ್ಲಿ
ಮತ್ತೆಷ್ಟು ತಪ್ಪೆಣಿಸಲಾರನಾತ ಅಂಥ
ನರಮಾನವರಲ್ಲಿ?
20 ಅವರು ಉದಯಾಸ್ತಮಾನಗಳ ನಡುವೆ ಜಜ್ಜಿ
ಹೋಗುವರು
ಯಾರ ಲಕ್ಷ್ಯವೂ ಇಲ್ಲದೆ ನಿತ್ಯವಿನಾಶ

ಹೊಂದುವರು.
21 ಅವರ ಗುಡಾರದ ಗೂಟವನ್ನು ಕೀಳಲಾಗುವುದು
ಬುದ್ಧಿಹೀನರಾಗಿಯೆ ಅವರು ಸತ್ತು
ಹೋಗುವರು.

**5** "ಕೂಗಿ ನೋಡು, ಯಾರಿದ್ದಾರೆ ಉತ್ತರ
ಕೊಡುವವರು ನಿನಗೆ?
ಈಗ ಯಾರ ಕಡೆಗೆ, ಯಾವ ದೇವದೂತರ
ಕಡೆಗೆ ತಿರುಗುವೆ?
2 ಮೂರ್ಖನಿಗೆ ನಾಶ ಕೋಪದಿಂದ
ಮೂಢನಿಗೆ ಮರಣ ರೋಷದಿಂದ.
3 ಮೂರ್ಖನು ಬೇರೂರುವುದನು ನೋಡಿದೆ
ಕೂಡಲೆ ಅವನ ನಿವಾಸ
ಶಾಪಕ್ಕೀಡಾಗುವುದನು ಕಂಡೆ.
4 ಆಶ್ರಯ ಎಂಬುದು ಅವನ ಮಕ್ಕಳಿಗಿಲ್ಲ
ನ್ಯಾಯಸ್ಥಾನದಲ್ಲಿ ಗೆಲುವು ಅವರಿಗಿಲ್ಲ
ಅವರನ್ನು ಬಿಡಿಸತಕ್ಕವರಾರೂ ಇಲ್ಲ.
5 ಹಸಿದವರು ಅವನ ಬೆಳೆಯನು ತಿಂದು
ಬಿಡುವರು
ಮುಳ್ಳುಬೇಲಿ ಹಾಕಿದ್ದರೂ ಅದನು
ತಿಂದುಬಿಡುವರು
ಅವನ ಸೊತ್ತನು ನುಂಗಲು ಬಾಯ್ದೆರೆದು
ಕಾದಿರುವರು.
6 ಕೇಡುಹುಟ್ಟುವುದು ಮಣ್ಣಿನಿಂದಲ್ಲ
ದುಃಖಮೊಳೆವುದು ಭೂಮಿಯಿಂದಲ್ಲ.
7 ಜ್ವಾಲೆಗಳು ಏರುವುದು ಮೇಲಕೆ
ಜನರು ಹುಟ್ಟಿರುವುದು ದುಃಖಕೆ.
8 ನಾನು ನೀನಾಗಿದ್ದರೆ ದೇವರಿಗೆ
ಮೊರೆಯಿಡುತ್ತಿದ್ದೆ
ನನ್ನ ವಿಷಯವನು ಆತನ ಕೈಗೆ ಬಿಡುತ್ತಿದ್ದೆ.
9 ದೇವರೆಸಗುತ್ತಾನೆ ಅಸಾಧ್ಯ ಅತಿಶಯಗಳನು
ಅಸಂಖ್ಯವಾದ ಅದ್ಭುತ ಕಾರ್ಯಗಳನು.
10 ಮಳೆಗರೆಯುತ್ತಾನೆ ಭೂಮಿಯ ಮೇಲೆ
ನೀರೊದಗಿಸುತ್ತಾನೆ ಹೊಲಗದ್ದೆಗಳಿಗೆ.
11 ಉನ್ನತಿಗೇರಿಸುತ್ತಾನೆ ದೀನದಲಿತರನು
ಸುರಕ್ಷತೆಗೊಯ್ಯುತ್ತಾನೆ ದುಃಖಿತರನು.
12 ಭಂಗಪಡಿಸುತ್ತಾನೆ ವಂಚಕರ
ಉಪಾಯಗಳನು
ಕೈಗೂಡಗೊಳಿಸನು ಅವರ ಪ್ರಯತ್ನಗಳನು.

13 ನಿರರ್ಥಕಗೊಳಿಸುತ್ತಾನೆ ವಕ್ರಿಗಳ
ತಂತ್ರೋಪಾಯಗಳನು
ಸಿಕ್ಕಿಸಿಬಿಡುತ್ತಾನೆ ಅವರವರ ಯೋಜನೆಗಳಲ್ಲೆ
ಜ್ಞಾನಿಗಳನು.
14 ಕತ್ತಲು ಅಂಥವರನು ಸುತ್ತುವರೆದಿರುತ್ತದೆ
ಹಾಡುಹಗಲಲ್ಲೆ
ರಾತ್ರಿಯಲ್ಲೋ ಎಂಬಂತೆ ತಡಕಾಡುತ್ತಾರೆ
ಅವರು ನಡುಹಗಲಲ್ಲೇ.
15 ದಿಕ್ಕಿಲ್ಲದವರನು ರಕ್ಷಿಸುತ್ತಾನೆ ದೇವರು
ಅಂಥವರ ಬಾಯಿಗತ್ತಿಯಿಂದ
ಬಿಡಿಸುತ್ತಾನೆ ಅವರನ್ನು ಬಲಾಢ್ಯರ ಕೈಯಿಂದ.
16 ಎಂತಲೇ ಬಡವನಿಗೆ ನಿರೀಕ್ಷೆ ಇರುತ್ತದೆ.
ಅನ್ಯಾಯ ಆಡುವ ಬಾಯಿ ಮುಚ್ಚಿಕೊಳ್ಳುತ್ತದೆ.
17 ದೇವರು ಯಾರನ್ನು ತಿದ್ದುತ್ತಾನೋ ಅವನು
ಧನ್ಯನು
ಅಲಕ್ಷ್ಯ ಮಾಡಬೇಡ ನೋಡು, ಸರ್ವಶಕ್ತನ
ದಂಡನೆಯನು
18 ಗಾಯಮಾಡುವವನೂ ಗಾಯಕಟ್ಟುವವನೂ
ದೇವರೇ
ಹೊಡೆಯುವುದೂ, ಗುಣಪಡಿಸುವುದೂ
ಆತನ ಕೈಯೇ.
19 ಐದಾರು ಇಕ್ಕಟ್ಟುಗಳಿಂದ ನಿನ್ನನು ಬಿಡಿಸುವನು
ಏಳನೆಯದು ಬಂದರೂ ನಿನ್ನನು ಕೇಡು
ಮುಟ್ಟದು.
20 ಬರಗಾಲದಲ್ಲಿ ಮರಣದಿಂದ ಕಾಪಾಡುವನು
ಯುದ್ಧಕಾಲದಲ್ಲಿ ಕತ್ತಿಯಿಂದ ರಕ್ಷಿಸುವನು.
21 ನಾಲಿಗೆಯೆಂಬ ಚಾಟಿಹೊಡೆತಕ್ಕೆ
ಮರೆಯಾಗಿರುವೆ
ಪರಿವಿನಾಶ ಬಂದರೂ ನೀನು ಹೆದರದಿರುವೆ.
22 ಕ್ಷಾಮಡಾಮರದಲ್ಲೂ ನೀನು ನಗುತ್ತಿರುವೆ
ಕಾಡುಮೃಗಗಳಿಗೂ ನೀನು ಅಂಜದಿರುವೆ.
23 ಹೊಲದ ಕಲ್ಲು ಬಂಡೆಗಳೊಡನೆ ಒಪ್ಪಂದ
ಮಾಡಿಕೊಳ್ಳುವೆ
ಆ ಕಾಡುಪ್ರಾಣಿಗಳೊಂದಿಗೆ ನೆಮ್ಮದಿಯಿಂದ
ಬಾಳುವೆ.
24 ನಿನ್ನ ಗುಡಾರಕ್ಕೆ ಗಂಡಾಂತರವಿಲ್ಲವೆಂಬ
ನೆಮ್ಮದಿ ನಿನಗಿರುವುದು
ನಿನ್ನ ಮಂದೆಯನು ನೀನು ನೋಡಬಂದಾಗ
ಕೊರತೆ ಕಾಣಬರದು.
25 ನಿನ್ನ ಸಂತತಿ ದೊಡ್ಡದೆಂಬುದನು ನೀನು

ತಿಳಿಯುವೆ
ಅದು ಇಳೆಯ ಹುಲ್ಲಿನಂತೆ ಹುಲುಸಾಗಿ
ಬೆಳೆವುದನು ಕಾಣುವೆ.
26 ಸುಗ್ಗಿ ಕಾಲದಲ್ಲಿ ಕಾಳುತೆನೆ ಕಣ ಸೇರುವಂತೆ
ವೃದ್ಧಾಪ್ಯ ಕಳೆದ ಮೇಲೆ ನೀನು
ಸಮಾಧಿ ಸೇರುವೆ.
27 ಇದನು ನಾವು ಪರಿಶೋಧಿಸಿದ್ದೇವೆ, ಇದು
ಯಥಾರ್ಥ
ಇದನು ಕೇಳಿ ತಿಳಿದುಕೊ – ಇದು ನಿನಗೆ ಹಿತಕರ.”

**6** ಅದಕ್ಕೆ ಉತ್ತರವಾಗಿ ಯೋಬನು
ಹೀಗೆಂದನು:
2 “ನನ್ನ ವಿಪತ್ತನು ತೂಕ ಮಾಡಿ ನೋಡಿದರೆ
ಒಳಿತು
ನನ್ನ ದುಃಖಗಳನು ತಕ್ಕಡಿಗೆ ಹಾಕಿದರೆ ಲೇಸು.
3 ಆಗ ತಿಳಿಯುವುದು ನನ್ನ ವಿಪತ್ತು
ಕಡಲ ತೀರದ ಮರಳಿಗಿಂತ ಭಾರವೆಂದು.
ಎಂತಲೇ ನಾನಾಡಿದ ಮಾತು
ದುಡುಕಿನಿಂದ ಆಡಿದ ಮಾತುಗಳೆಂದು.
4 ನನ್ನ ಮನದೊಳು ಸರ್ವಶಕ್ತನ ಬಾಣಗಳು
ನಾಟಿವೆ
ನನ್ನ ಅಂತರಂಗದೊಳು ಅವುಗಳ ವಿಷ
ಹೀರಲಾಗುತ್ತಿದೆ
ದೇವರಿಂದ ಬಂದ ಆತಂಕಗಳು ನನ್ನನು
ಸುತ್ತುವರೆದಿವೆ.
5 ಹುಲ್ಲಿರಲು ಕಾಡುಕತ್ತೆ ಅರಚೀತೆ?
ಮೇವಿರಲು ಗೂಳಿ ಎತ್ತು ಗುಟುರೀತೆ?
6 ಉಪ್ಪಿಲ್ಲದ ಸಪ್ಪೆಯನು ತಿನ್ನುತ್ತೇವೆಯೆ?
ಮೊಟ್ಟೆಯೊಳಗಿನ ಲೋಳೆಯಲಿ
ರುಚಿಯಿದೆಯೆ?
7 ಮುಟ್ಟಲು ಕೂಡ ಅಸಹ್ಯವಾದುವು
ಕಾಯಿಲೆಯಲ್ಲಿ ನನಗೆ ಆಹಾರವಾದವು.
8 ಅಯ್ಯೋ, ನನ್ನ ವಿಜ್ಞಾಪನೆ
ನೆರವೇರುವುದಿಲ್ಲವೇಕೆ?
ದೇವರು ನನ್ನ ಕೋರಿಕೆಯನ್ನು
ಈಡೇರಿಸುವುದಿಲ್ಲವೇಕೆ?
9 ದೇವರು ನನ್ನನ್ನು ನಸುಕಿ ಬಿಡಬಾರದೆ?
ತನ್ನ ಕೈಯನ್ನು ಚಾಚಿ ಸಂಹರಿಸಿ ಬಿಡಬಾರದೆ?
10 ಆಗ ನಾನು ಸಾಂತ್ವನ ಪಡೆಯುತ್ತಿದ್ದೆ
ಮಿತಿಯಿಲ್ಲದ ಯಾತನೆಯಲ್ಲೂ ಆದರ

ಹೊಂದುತ್ತಿದ್ದೆ
ಪರಮಪಾವನದ ಮಾತನು ಬಿಡದೆ
ಅನುಸರಿಸಿದೆನಲ್ಲವೆ?
11 ನಾನು ನಿರೀಕ್ಷೆಯಿಂದಿರಲು ನನಗಾಧಾರವೇನು?
ನಾನು ತಾಳ್ಮೆಯಿಂದಿರಲು ನನ್ನ ಅಂತ್ಯ
ಸ್ಥಿತಿಯೇನು?
12 ನನ್ನ ಬಲವು ಕಲ್ಲಿನ ಬಲವೊ?
ನನ್ನ ದೇಹ ಕಂಚಿನ ದೇಹವೊ?
13 ನನಗೆ ಯಾವ ಸಹಾಯವೂ ಇಲ್ಲವಲ್ಲ!
ನನ್ನ ಪ್ರಾಣ ತೊಲಗಿ ಹೋಗಿದೆಯಲ್ಲಾ!
14 ಸಂಕಟದಲ್ಲಿ ಆಗದಾ ನೆಂಟನಿಗೆ
ಸರ್ವಶಕ್ತನಲ್ಲಿ ಭಯಭಕ್ತಿ ಇರುವುದುಂಟೆ?
15 ಹರಿದು ಓಡುವ ತೊರೆಯಂತೆ
ಉಕ್ಕಿ ಹರಿಯುವ ಪ್ರವಾಹದಂತೆ
ದ್ರೋಹವೆಸಗಿದ್ದಾರೆ ಸೋದರರು ನನಗೆ.
16 ಕಪ್ಪಾಗಿದೆ ಆ ತೊರೆಗಳ ನೀರು ಮಂಜು
ಗಡ್ಡೆಯಿಂದ
ಕದಡಿಹೋಗಿವೆ ಹಿಮಗಡ್ಡೆಯಿಂದ.
17 ಆ ತೊರೆಗಳು ಮಾಯವಾಗುತ್ತವೆ ಬೇಸಿಗೆ
ಬಂದಾಗ
ಬತ್ತಿಹೋಗುತ್ತವೆ ಸೆಕೆಯಾದಾಗ.
18 ಪ್ರಯಾಣ ಮಾಡುವ ವರ್ತಕರು ಇಂಥ
ತೊರೆಗಳ ಮಾರ್ಗವಾಗಿ
ಮರಳುಗಾಡಿನಲ್ಲೆ ನಾಶವಾಗುವರು
ಅಲೆದಲೆದು ನೀರಿಗಾಗಿ.
19 ಅವುಗಳಿಗಾಗಿ ಹಂಬಲಿಸುತ್ತದೆ ಆ ತೇಮದ
ಪ್ರಯಾಣಿಕರ ತಂಡ
ಅವುಗಳಿಗಾಗಿ ಹಾತೊರೆಯುತ್ತದೆ ಶೆಬದ
ವರ್ತಕರ ಪಂಗಡ.
20 ಆಶಿಸಿದಷ್ಟೂ ಆಶಾಭಂಗ ಪಡುತ್ತಾರೆ
ಆ ಪ್ರಯಾಣಿಕರು
ನಂಬಿದಷ್ಟೂ ನಿರೀಕ್ಷೆಗೆಡುತ್ತಾರೆ ಆ ವರ್ತಕರು.
21 ಅಂತೆಯೇ ನನ್ನ ವಿಷಯದಲ್ಲಿ ನೀವು
ವರ್ತಿಸುತ್ತೀರಿ
ನನ್ನ ಈ ವಿಪತ್ತನ್ನು ಕಂಡಕೂಡಲೇ
ಹಿಂಜರಿಯುತ್ತೀರಿ.
22 ದಾನ ನೀಡಿರೆಂದು ನಿಮ್ಮನು ಬಿನ್ನವಿಸಿದೆನೋ?
ನಿಮ್ಮಾಸ್ತಿಯಿಂದ ಲಂಚವನು ಕೋರಿದೆನೋ?
23 ವಿರೋಧಿಯ ಕೈಯಿಂದ ನನ್ನನು ಬಿಡಿಸಿರೆಂದು
ಕೇಳಿಕೊಂಡೆನೋ?

ಹಿಂಸಕರಿಂದ ನನ್ನನು ವಿಮೋಚಿಸಿರೆಂದು
ಬೇಡಿಕೊಂಡೆನೋ?
24 ನಾನು ಮಾಡಿದ ತಪ್ಪೇನೆಂಬುದನು ತಿಳಿಸಿರಿ
ನನಗೆ
ನಾನು ಮೌನದಿಂದಿರುವೆನು, ಉಪದೇಶ
ಮಾಡಿರಿ ನನಗೆ.
25 ನ್ಯಾಯವಾದ ಮಾತು ಎಷ್ಟೋ ಶಕ್ತಿಯುತ
ನಿಮ್ಮ ತರ್ಕವಾದರೋ ನಿರರ್ಥಕ.
26 ಕೇವಲ ಮಾತುಗಳಿಂದ ಖಂಡಿಸ
ಬೇಕೆಂದಿರುವಿರೊ?
ದೆಸೆಗೆಟ್ಟವನ ಮಾತು
ಗಾಳಿಪಾಲಾಗತಕ್ಕದಲ್ಲವೊ?
27 ಅನಾಥನನ್ನು ಕೊಂಡುಕೊಳ್ಳಲು ಚೀಟು
ಹಾಕುತ್ತೀರಿ
ಆಪ್ತನನ್ನು ಮಾರಿಬಿಡಲು ವ್ಯಾಪಾರ
ಮಾಡುತ್ತೀರಿ
28 ಈಗ ದಯವಿಟ್ಟು ನೋಡಿ ನನ್ನ ಕಡೆಗೆ
ಸುಳ್ಳಾಡೆನು ನಿಮ್ಮ ಮುಖದೆದುರಿಗೆ.
29 ದಯಮಾಡಿ ಮತ್ತೆ ಆಲೋಚಿಸಿರಿ
ಅನ್ಯಾಯವಾಗದಂತೆ
ಮರಳಿ ವಿಮರ್ಶಿಸಿರಿ ನನ್ನ ಸತ್ಯತೆ ತಿಳಿಯುವಂತೆ.
30 ರುಚಿ ವಿಷಯದಲ್ಲಿ ನಾಲಿಗೆ ತಪ್ಪು
ಮಾಡುತ್ತದೆಯೇ?
ಸತ್ಯಾಸತ್ಯಗಳ ವಿವೇಚನೆ ನನಗಿಲ್ಲವೇ?"

**7** "ಮಾನವನ ಜೀವನ ಸೈನಿಕರ
ಸೇವಾವಧಿಯಂತೆ
ಅವನ ದಿನಗಳು ಕಳೆಯುತ್ತವೆ ಜೀತದಾಳಿನ
ದಿನಗಳಂತೆ.
2 ನಾನಿರುವೆ ಸಂಜೆಯನು ಬಯಸುವ ದಾಸನಂತೆ
ಕೂಲಿಯನು ನಿರೀಕ್ಷಿಸುವ ಕೂಲಿಯಾಳಿನಂತೆ.
3 ನನ್ನ ಪಾಲಿಗೆ ಬಂದಿವೆ ಬೇಸರಿಕೆಯ ಮಾಸಗಳು
ನನಗೆ ನೇಮಕವಾಗಿವೆ ಆಯಾಸದ ರಾತ್ರಿಗಳು.
4 ಮಲಗಹೋಗುವಾಗ 'ಯಾವಾಗ ಏಳುವೆನೋ'
ಎನಿಸುತ್ತದೆ
ಕಾಳ ರಾತ್ರಿ ಬೆಳೆಯುತ್ತಾ ಹೋಗುತ್ತಿರುತ್ತದೆ
ಉದಯದವರೆಗೆ ಅತ್ತಿತ್ತ ಹೊರಳಿ
ಸಾಕಾಗುತ್ತದೆ.
5 ನನ್ನ ಮಾಂಸ ಮುಸುಕಿದೆ ಹುಳುಹುಪ್ಪಟೆಗಳಿಂದ
ನನ್ನ ಚರ್ಮ ಬಿರಿದಿದೆ ಕಜ್ಜಿಕಡಿತಗಳಿಂದ.

6 ನನ್ನ ದಿನಗಳು ಮಗ್ಗದ ಲಾಳಕ್ಕಿಂತ ತ್ವರಿತ
ಅವುಗಳಿಗಿದೋ ನಿರೀಕ್ಷೆಯಿಲ್ಲದ ಮುಕ್ತಾಯ.
7 ನೆನೆಸಿಕೊಳ್ಳೋ ದೇವಾ, ನನ್ನ ಜೀವ ಕೇವಲ
ಉಸಿರು
ನನ್ನ ಕಣ್ಣುಗಳು ಇನ್ನು ಕಾಣವು ನಲಿವು.
8 ನನ್ನನು ನೋಡುವ ಕಣ್ಣಿಗೆ ನಾನಿನ್ನು
ಕಾಣಿಸುವುದಿಲ್ಲ
ನಿನ್ನ ಕಣ್ಣು ನನ್ನ ಕಡೆಗೆ ತಿರುಗಿದ್ದರೂ ನಾನು
ಬದುಕಿರುವುದಿಲ್ಲ.
9 ಮೋಡ ಕರಗಿ ಮಾಯವಾಗುವಂತೆ
ಪಾತಾಳಕ್ಕಿಳಿದವನು ಬಾರನು ಮತ್ತೆ.
10 ತನ್ನ ಮನೆಗವನು ಹಿಂತಿರುಗುವುದಿಲ್ಲ
ಅವನ ನಿವಾಸಕ್ಕೆ ಅವನ ಗುರುತೇ ಇಲ್ಲ.
11 ಬಾಯಿ ಮುಚ್ಚಿಡಲಾಗದು ನನ್ನಿಂದ
ಮಾತಾಡುತ್ತೇನೆ ಆತ್ಮ ವೇದನೆಯಿಂದ
ಪ್ರಲಾಪಿಸುತ್ತೇನೆ ಮನೋವ್ಯಥೆಯಿಂದ.
12 ನಾನೇನು ಕಡಲೋ? ಕಡಲಿನ ಘಟಸರ್ಪವೋ?
ನೀವು ನನ್ನ ಮೇಲೆ ಕಾವಲಿಡುವುದು ಸರಿಯೋ?
13 ‘ನನ್ನ ಹಾಸಿಗೆಯೆ ನನಗೆ ಸಾಂತ್ವನ’ ಎಂದೆ
‘ನನ್ನ ಮಂಚವೆ ಚಿಂತೆಗೆ ಶಮನ’ ಎಂದೆ.
14 ಆದರೂ ನೀನು ಬೆದರಿಸುತ್ತೀಯೆ ಸ್ವಪ್ನಗಳಿಂದ
ಭಯಪಡಿಸುತ್ತೀಯೆ ನನ್ನನು ಕೆಟ್ಟ
ಕನಸುಗಳಿಂದ.
15 ಎಂದೇ ಉಸಿರುಕಟ್ಟಿ ನಾನು ಪ್ರಾಣಬಿಡುವುದು
ಲೇಸು
ಮೂಳೆಮಾಂಸದ ಈ ತಡಿಕೆಬಾಳಿಗಿಂತ
ಸಾವು ಲೇಸು.
16 ಬದುಕು ನನಗೆ ಬೇಸರ; ನಿರಂತರ ಬಾಳು
ನನಗೆ ಅನಿಷ್ಟ
ನನ್ನ ದಿನಗಳು ನಿರರ್ಥಕ, ನನ್ನಗೊಡವೆ
ನಿನಗೆ ಬೇಕಿಲ್ಲ.
17 ಮನುಷ್ಯನಾದವನು ಎಷ್ಟರವನು
ನೀನವನಿಗೆ ಘನತೆ ನೀಡಲು?
ನೀನವನ ಮೇಲೆ ಗಮನ ಹರಿಸಲು?
18 ದಿನ ಬಿಡದೆ ಅವನನ್ನು ಸಂದರ್ಶಿಸಲು;
ಕ್ಷಣಕ್ಷಣಕ್ಕೂ ಅವನನ್ನು ಪರೀಕ್ಷಿಸಲು?
19 ನಿನ್ನ ದೃಷ್ಟಿಯನು ನನ್ನ ಮೇಲೆ ಎಷ್ಟು ಕಾಲ
ಇಡುವೆ?
ಗುಟುಕು ಉಗುಳನು ನುಂಗಲು ಬಿಡುವುದಿಲ್ಲವೆ?
20 ನರಮಾನವರ ಮೇಲೆ ಬೆಂಗಾವಲಿರುವವನೇ,

ಭಾರವಾಗಿರುವೆನು ನನಗೆ ನಾನೇ.
ನಾನು ಪಾಪಮಾಡಿದ್ದಾದರೂ ನಿನಗೇನು
ಮಾಡಿದೆ?
ನನ್ನನ್ನೇಕೆ ನಿನ್ನ ಹೊಡೆತಕ್ಕೆ ಗುರಿಪಡಿಸಿದೆ?
21 ನನ್ನ ಅಪರಾಧವನ್ನು ನೀನು ಕ್ಷಮಿಸಬಾರದೆ?
ನನ್ನ ದೋಷವನ್ನು ನೀನು ಪರಿಹರಿಸಬಾರದೆ?
ಮಣ್ಣಿನೊಳಗೆ ಬಿದ್ದಿರುವೆ ನಾನು ಈಗ
ನಾನು ಇಲ್ಲವಾಗಿರುವೆ ನೀ ಹುಡುಕುವಾಗ.

**8** ಆಗ ಶೂಹ್ಯನಾದ ಬಿಲ್ದದನು ಇಂತೆಂದನು:
2 "ಇನ್ನೆಷ್ಟರವರೆಗೆ ಹೀಗೆ
ನುಡಿಯುತ್ತಿರುವೆ?
ಬಿರುಗಾಳಿಯಂಥ ಮಾತುಗಳನ್ನಾಡುತ್ತಿರುವೆ?
3 ಅನ್ಯಾಯವಾದ ತೀರ್ಪನು ಕೊಡುತ್ತಾನೆಯೆ
ದೇವರು?
ಸತ್ಯವನ್ನು ಡೊಂಕು ಮಾಡುತ್ತಾನೆಯೆ
ಸರ್ವಶಕ್ತನು?
4 ಬಹುಶಃ ನಿನ್ನ ಮಕ್ಕಳು ಆತನ ವಿರುದ್ಧ
ಪಾಪ ಮಾಡಿರಬೇಕು
ಎಂದೇ ಆತ ಅವರನು ಆ ದ್ರೋಹದ ನಿಮಿತ್ತ
ದಂಡಿಸಿರಬೇಕು.
5 ಶುದ್ಧನೂ ಸತ್ಯವಂತನೂ ನೀನಾಗಿದ್ದರೆ
ದೇವರ ಪ್ರಸನ್ನತೆಯನು ಅರಸಿದೆಯಾದರೆ
ಆ ಸರ್ವಶಕ್ತನನು ವಿಜ್ಞಾಪಿಸಿದೆಯಾದರೆ,
6 ನಿಶ್ಚಯವಾಗಿ ನಿನಗೋಸ್ಕರ ಎಚ್ಚೆತ್ತು
ಬರುವನು
ಸತ್ಯವಂತನ ಮನೆಮಾರನು
ಸಮೃದ್ಧಗೊಳಿಸುವನು.
7 ಆಗ ನಿನ್ನ ಭವಿಷ್ಯ ಎಷ್ಟು ಉಜ್ವಲ
ವಾಗಿರುತ್ತದೆಂದರೆ
ನಿನ್ನ ಮೊದಲಿನ ಸ್ಥಿತಿ ಕೂಡ ಅತ್ಯಲ್ಪವಾಗಿ
ಕಾಣುವುದು ನಿನಗೆ.
8 ವಿಚಾರಿಸಿ ನೋಡು ಪುರಾತನ ಕಾಲವನು
ಧ್ಯಾನಿಸಿ ನೋಡು ಪೂರ್ವಜರ ಅನುಭವವನು.
9 ನಾವಾದರೋ ನಿನ್ನೆ ಹುಟ್ಟಿದವರು, ಏನೂ
ಅರಿಯದವರು
ಭೂಲೋಕದಲ್ಲಿನ ನಮ್ಮ ಬಾಳು ಕೇವಲ
ನೆರಳು.
10 ನಿನಗೆ ಬೋಧಿಸಿ ಬುದ್ಧಿಹೇಳುವರು

ಪೂರ್ವಜರು
ಅವರ ಅನುಭವದಿಂದ ಬಂದ ವಚನಗಳಿವು:
11 ಕೆಸರಿಲ್ಲದೆ ಆಪುಹುಲ್ಲು ಬೆಳೆಯುವುದುಂಟೆ?
ಆವುಗಿಲ್ಲದೆ ಜಂಬು ಹುಲ್ಲು
ಮೊಳೆಯುವುದುಂಟೆ?
12 ಆದರೂ ಮಿಕ್ಕ ಎಲ್ಲ ಸಸಿಗಳಿಗಿಂತ ಬಲು
ಮುಂಚಿತವಾಗಿಯೆ
ಒಣಗಿ ಹೋಗುತ್ತವೆ ಅವು ಯಾರೂ
ಕೊಯ್ಯದೆಯೆ.
13 ದೇವರನ್ನು ಮರೆಯುವವರೆಲ್ಲರ ಗತಿ ಇದುವೆ
ಭಕ್ತಿಹೀನನ ನಿರೀಕ್ಷೆ ನಿರರ್ಥಕವೆ.
14 ಅಂಥವನ ಭರವಸೆ ಭಂಗವಾಗುವುದು
ಅವನ ನಿವಾಸ ಜೇಡರ ಗೂಡಿನಂತಾಗುವುದು.
15 ಒರಗಿಕೊಂಡರೆ ಆ ಮನೆ ನಿಲ್ಲದು
ಹಿಡಿದುಕೊಂಡರೆ ಅದು ಬಿಗಿಯಿರದು.
16 ಅಂಥವನು ಬಿಸಿಲಿನಲ್ಲೂ ಹಸಿರಾಗಿರುವ
ಬಳ್ಳಿಯಂತೆ
ಹರಡಿಕೊಳ್ಳುವನು ತೋಟದೊಳಗೆ
ಕವಲೊಡೆದು;
17 ಕಲ್ಲುಕುಪ್ಪೆಯ ಮೇಲೂ ಬೇರುಗಳನ್ನು
ಹೆಣೆದುಕೊಳ್ವನು
ಕಲ್ಲಿನ ಸಂದಿಗೊಂದಿಗಳ ನಡುವೆ
ನುಗ್ಗಬಲ್ಲನು ಅವನು;
18 ಅಲ್ಲಿಂದ ಅವನನ್ನು ಕಿತ್ತುಹಾಕಿದ್ದೇ ಆದರೆ
ಅವನನ್ನು ಕಂಡದ್ದೇ ಇಲ್ಲ ಎಂದು
ಬೊಂಕುವುದು ಆ ಸ್ಥಳ.
19 ಇದುವೇ ಅಂಥವನಿಗೆ ಗಿಟ್ಟುವ ಸುಖ
ಬೇರೆಯವರು ಮೊಳೆವರು ಅವನಿದ್ದ ಆ
ನೆಲದಿಂದ.
20 ದೇವರು ನಿರ್ದೋಷಿಯನ್ನು ತ್ಯಜಿಸಿ
ಬಿಡುವುದಿಲ್ಲ
ಕೆಡುಕರಿಗೆ ನೆರವಾಗಲು ಆತ ಕೈ ನೀಡುವುದಿಲ್ಲ.
21 ತುಂಬಿಸುವನಾತ ನಿನ್ನ ಬಾಯನು ನಗೆಯಿಂದ
ನಿನ್ನ ತುಟಿಗಳನ್ನು ಉತ್ಸಾಹ ಧ್ವನಿಯಿಂದ.
22 ಅವಮಾನ ಮುಸುಕುವುದು ನಿನ್ನ ಹಗೆಗಳನ್ನು
ದುರುಳರಾ ನಿವಾಸವಾದರೋ
ನಿರ್ಮೂಲವಾಗುವುದು.”

## ದೇವರ ನೀತಿ ಶಾಸ್ತ್ರಾತೀತ

**9** ಅದಕ್ಕೆ ಯೋಬನು ಉತ್ತರಿಸುತ್ತಾ
ಹೀಗೆಂದನು:
2 "ಹೌದು, ನೀನು ಹೇಳುವುದು ಸರಿಯೆಂದು
ನನಗೆ ಗೊತ್ತು:
ನರಮಾನವ ದೇವರ ಮುಂದೆ
ಸತ್ಯವಂತನಾಗಿರುವುದೆಂತು?
3 ಯಾರಾದರೂ ಆತನೊಡನೆ ವಾದಿಸಲು
ಇಷ್ಟಪಟ್ಟರೂ
ಆತನ ಸಹಸ್ರ ಪ್ರಶ್ನೆಗಳೊಂದಕ್ಕೂ
ಉತ್ತರಿಸಲಾಗದು.
4 ದೇವರ ಹೃದಯ ಧೀಮಂತ, ಅವರ ಶಕ್ತಿ
ಅತುಳ
ಆತನನ್ನು ಪ್ರತಿಭಟಿಸಿ ಜಯಗಳಿಸಿದವನಿಲ್ಲ.
5 ಆತ ಪರ್ವತಗಳನ್ನೇ ಸರಿಸುತ್ತಾನೆ ಅರಿಯದಂತೆ
ಅವುಗಳನ್ನು ಉರುಳಿಸುತ್ತಾನೆ ಸಿಟ್ಟುಗೊಂಡಂತೆ.
6 ಅದರ ಸ್ಥಾನದಿಂದ ಭೂಮಿಯನೆ
ಕದಲಿಸುತ್ತಾನೆ
ಅದರ ಸ್ತಂಭಗಳು ನಡುಗುವಂತೆ
ಮಾಡುತ್ತಾನೆ.
7 ಆತ ಆಜ್ಞೆ ಮಾಡಿದ್ದೇ ಆದರೆ ಸೂರ್ಯನೂ
ಉದಯಿಸನು
ಮುದ್ರೆಹಾಕಿದ್ದೇ ಆದರೆ ನಕ್ಷತ್ರವೂ ಮಿನುಗದು.
8 ಆಕಾಶಮಂಡಲವನ್ನು ಹರಡಿದವನು ದೇವರೇ
ಕಡಲಿನ ತರಂಗಗಳನ್ನು ಮೆಟ್ಟಿದವನು
ಆತನೊಬ್ಬನೇ.
9 ದಕ್ಷಿಣದ ನಕ್ಷತ್ರಗ್ರಹಗಳನೂ ಸಪ್ತರ್ಷಿ
ಮಂಡಲವನೂ
ಮೃಗಶಿರವನ್ನೂ ಕೃತ್ತಿಕೆಯನೂ
ನಿರ್ಮಿಸಿದವನು ಆತನೇ.
10 ಅಪ್ರತಿಮ ಮಹಾಕಾರ್ಯಗಳನ್ನು ಎಸಗಿರುವನು
ಅಸಂಖ್ಯ ಅದ್ಭುತಕರ ಪವಾಡಗಳನು
ಮಾಡಿರುವನು.
11 ಇಗೋ, ಪಕ್ಕದಲ್ಲೇ ಆತ ದಾಟಿಹೋದರೂ
ಕಾಣಿಸನು
ನನ್ನ ಮುಂದುಗಡೆಯೇ ಹಾದು ಹೋದರೂ
ತಿಳಿಯದು.
12 ಕಿತ್ತುಕೊಂಡು ಹೋಗುವ ಆತನಿಗೆ
ಅಡ್ಡಿಮಾಡುವವರಾರು?

‘ಏನು ಮಾಡುತ್ತಿರುವೆ?’ ಎಂದು ಆತನನ್ನು
ಕೇಳುವವರಾರು?
13 ರಹೆಬನ ಸಹಾಯಕರು ಕಾಲಿಗೆರಗಿದರೂ
ದೇವರು ತನ್ನ ಸಿಟ್ಟು ಸಿಡುಕನು ಬಿಟ್ಟುಬಿಡನು.
14 ದೇವರೊಂದಿಗೆ ವಾದಿಸಲು ನಾನು ಅಶಕ್ತನು
ಆತನಿಗೆ ತಕ್ಕ ಉತ್ತರ ಕೊಡಲು ನಾನೆಷ್ಟರವನು!
15 ನಾನು ಸತ್ಯವಂತನಾಗಿದ್ದರೂ ವಾದಿಸಲಾರೆನು
ನನ್ನ ನ್ಯಾಯಾಧೀಶನಲ್ಲಿ ದಯೆಯನು
ಕೋರುವೆನು.
16 ನಾನು ಕರೆದಾಗ ಓಗೊಟ್ಟಿದ್ದರೂ
ನನ್ನ ವಿಜ್ಞಾಪನೆಯನ್ನು ಆಲಿಸುವನೆಂದು
ನಂಬುತ್ತಿರಲಿಲ್ಲ.
17 ನನ್ನನ್ನು ಬಿರುಗಾಳಿಯಿಂದ ಬಡಿಯುತ್ತಾನೆ
ಕಾರಣವಿಲ್ಲದೆ ಗಾಯದ ಮೇಲೆ ಗಾಯ
ಮಾಡುತ್ತಾನೆ.
18 ನನಗೆ ಉಸಿರಾಡಲೂ ಬಿಡದೆ
ನನ್ನ ಹೊಟ್ಟೆಯನ್ನು ಕಹಿಯಾದವುಗಳಿಂದ
ತುಂಬಿಸುತ್ತಾನೆ.
19 ಶಕ್ತಿಪ್ರಯೋಗದ ಮಾತೆತ್ತಿದರೆ,
‘ಇಗೋ, ನಾನೇ ಶಕ್ತಿಸ್ವರೂಪ’ ಎನ್ನುತ್ತಾನೆ.
ನ್ಯಾಯವಿಚಾರಣೆ ಆಗಲಿಯೆಂದರೆ,
‘ನನ್ನನ್ನು ಕರೆಯಿಸುವವನಾರು?’ ಎನ್ನುತ್ತಾನೆ.
20 ನಾನು ಸತ್ಯವಂತನಾಗಿದ್ದರೂ
ಬಾಯೇ ನಾನು ಅಪರಾಧಿಯೆಂದು
ಒಪ್ಪಿಕೊಳ್ಳುತ್ತದೆ.
ನಾನು ನಿರ್ದೋಷಿಯಾಗಿದ್ದರೂ
‘ನಿನ್ನದು ವಕ್ರ ಬುದ್ಧಿ’ ಎನ್ನುತ್ತದೆ.
21 ನಾನು ನಿರ್ದೋಷಿಯೇ ಹೌದು;
ಅದರ ಬಗ್ಗೆ ನನಗಿಲ್ಲ ಚಿಂತೆ.
ನನ್ನ ಪ್ರಾಣ ಕೂಡ ನನಗೆ ತೃಣವಾಗಿಬಿಟ್ಟಿದೆ.
22 ಎಲ್ಲವೂ ಒಂದೇ ಆಗಿಬಿಟ್ಟಿದೆ. ಆದ್ದರಿಂದಲೇ
ಇಂತೆನ್ನುತ್ತೇನೆ:
‘ದೋಷಿಯೋ ನಿರ್ದೋಷಿಯೋ’
ದೇವರು ಎಲ್ಲರನೂ ನಾಶಗೊಳಿಸುತ್ತಾನೆ.
23 ಅಕಸ್ಮಾತ್ತಾಗಿ ಮಹಾವಿನಾಶ
ಬಂದೊದಗಿದರೂ
ನಿರ್ದೋಷಿಗಳ ಅವಸ್ಥೆಕಂಡು
ಹಾಸ್ಯಮಾಡುತ್ತಾನೆ.
24 ದೇಶವು ದುರುಳರ ಕೈವಶವಾಗಿದ್ದರೂ
ನ್ಯಾಯಾಧೀಶರ ಮುಖಕ್ಕೆ ಮುಸುಕು

ಹಾಕುತ್ತಾನೆ.
ಇದನ್ನು ಮಾಡುವವರು ದೇವರಲ್ಲದೆ
ಮತ್ತೆ ಯಾರು?
25 ನನ್ನ ದಿನಗಳು ಓಟಗಾರನಿಗಿಂತ ವೇಗ
ಅವು ಓಡುತ್ತವೆ ಕಾಣದೆ ಯಾವುದೊಂದು
ಸುಖ.
26 ಬೆಂಡಿನ ಹರಗಲು ದೌಡಾಯಿಸುವಂತೆ
ಬೇಟೆಯ ಮೇಲೆ ಗರುಡವೆರಗುವಂತೆ
ಕಳೆದು ಹೋಗುತ್ತವೆ ಶೀಘ್ರಗತಿಯಲ್ಲೆ.
27 ನನ್ನ ಪ್ರಲಾಪವನ್ನು ನಾನು ಮರೆತುಬಿಟ್ಟರೆ
ಬಾಡಿದ ಮುಖವನ್ನು ಮಾರ್ಪಡಿಸಿಕೊಂಡರೆ
ಹರ್ಷಿಸುವೆನೆಂದು ನಾನು ಮನಸ್ಸು ಮಾಡಿದರೆ.
28 ಸಮಸ್ತ ದುಃಖದುಗುಡಗಳ ನೆನಪು ನನಗೆ
ತರುತ್ತವೆ ದಿಗಿಲು
ನನಗೆ ಗೊತ್ತು, ನೀ ನನ್ನನು ನಿರಪರಾಧಿ
ಎಂದೆಣಿಸಲಾರೆಯೆಂದು.
29 ಅಪರಾಧಿಯೆಂದೇ ನನಗೆ ನಿರ್ಣಯವಾಗ
ಬೇಕಿದ್ದಲ್ಲಿ
ನಾನೇಕೆ ಪ್ರಯಾಸ ಪಡಬೇಕು ವ್ಯರ್ಥವಾಗಿ?
30 ಹಿಮದಿಂದ ನಾನು ಸ್ನಾನ ಮಾಡಿದರೂ
ಚೌಳಿನಿಂದ ನಾನು ಕೈ ತೊಳೆದರೂ
31 ಮುಳುಗಿಸಿ ಬಿಡುವೆ ನನ್ನನ್ನು ತಿಪ್ಪೆಗುಂಡಿಯಲ್ಲಿ
ನನ್ನ ಉಡಿಗೆ ತೊಡಿಗೆಗಳೂ ಅಸಹ್ಯಪಡುವುವು
ನನ್ನನು ನೋಡಿ.
32 ದೇವರು ನನ್ನಂಥ ನರನಲ್ಲ, ನಾನಾತನಿಗೆ
ಉತ್ತರಿಸಲು
ನಾವಿಬ್ಬರೂ ನ್ಯಾಯಾಲಯದಲ್ಲಿ ಕೂಡಿ
ವಾದಿಸಲು.
33 ನಮ್ಮಿಬ್ಬರ ನಡುವೆ ನಿರ್ಣಯಿಸತಕ್ಕವನು ಇಲ್ಲ
ಮಧ್ಯಸ್ಥನಾಗಬಲ್ಲ ನ್ಯಾಯಾಧಿಪತಿ ಇಲ್ಲ.
34 ನನ್ನ ಮೇಲೆತ್ತಿರುವ ಕೋಲನ್ನು ಬಿಸಾಡಲಿ
ಆತನ ಭಯಭೀತಿ ನನ್ನನು ಹೆದರಿಸದಿರಲಿ.
35 ಆಗ ಭಯಪಡದೆ ಮಾತನಾಡುವೆನು
ಅಂಜಿಕೆಗೆ ನನ್ನಲ್ಲಿ ಆಸ್ಪದ ಇರದು.

**10** “ನನ್ನ ಬಾಳೇ ನನಗೆ ಬೇಸರವಾಗಿದೆ
ಎದೆ ಬಿಚ್ಚಿ ಮೊರೆಯಿಡುತ್ತಿರುವೆ
ಕಹಿ ಮನದಿಂದ ನುಡಿಯುತ್ತಿರುವೆ.
2 ನಾನು ದೇವರಿಗೆ ಇಂತೆನ್ನುವೆ:
‘ನನ್ನನು ನಿರ್ಣಯಿಸಬೇಡ ಅಪರಾಧಿಯೆಂದು

ನನ್ನ ಮೇಲೆ ನಿನಗಿರುವ ಆಪಾದನೆಯನು
ತಿಳಿಸಿಬಿಡು.
3 ದುರುಳರ ಯೋಜನೆಯನು ನೀನು
ಪುರಸ್ಕರಿಸಬಹುದೆ?
ನಿನ್ನ ಕೈಕೃತಿಯಾದ ನನ್ನನು ತಿರಸ್ಕರಿಸಿ
ಬಾಧಿಸುವುದು ಸರಿಯೆ?
4 ಮನುಜರಂಥ ಕಣ್ಣುಗಳು ನಿನಗಿದೆಯೋ?
ಮನುಷ್ಯರಂತೆ ನೀನು ನೋಡುತ್ತೀಯೋ?
5 ನಿನ್ನ ದಿನಗಳು ಮನುಷ್ಯನ
ಅಲ್ಪದಿನಗಳಂತಿವೆಯೋ?
ನಿನ್ನ ವರುಷಗಳು ಮಾನವನ
ವರುಷಗಳಷ್ಟೆಯೋ?
6 ನನ್ನ ತಪ್ಪುಗಳನ್ನು ಹುಡುಕುವ ನಿನಗೆ
ನನ್ನ ಪಾಪಗಳನ್ನು ವಿಚಾರಿಸುವ ನಿನಗೆ
7 ನಾನು ಅಪರಾಧಿಯಲ್ಲವೆಂದು
ತಿಳಿದಿದೆಯಲ್ಲವೆ?
ನಿನ್ನ ಕೈಯಿಂದ ಬಿಡಿಸಬಲ್ಲವರಾರೂ
ಇಲ್ಲವಲ್ಲವೆ?
8 ನನ್ನನ್ನು ನಿರ್ಮಿಸಿ ರೂಪಿಸಿದಾತ ನೀನು
ಆದರೆ ಈಗ ಮುಗಿಸಿಬಿಡುವಿಯೋ
ಮನಸಾಂತರಗೊಂಡು?
9 ಜೇಡಿಮಣ್ಣಿನಿಂದ ನನ್ನನ್ನು ಮಾಡಿದೆಯೆಂದು
ನೆನೆಸಿಕೊ
ಆದರೆ ಈಗ ಮರಳಿ ಮಣ್ಣಾಗುವಂತೆ
ಮಾಡುವಿಯೋ?
10 ನನ್ನನ್ನು ಸುರಿಸಿದೆ ಹಾಲಿನಂತೆ
ಹೆಪ್ಪುಗಟ್ಟಿಸಿದೆ ಮೊಸರಿನಂತೆ;
11 ನನ್ನನ್ನು ಹೆಣೆದೆ ಎಲುಬು ನರಗಳಿಂದ
ನನ್ನನ್ನು ಹೊದಿಸಿದೆ ಮಾಂಸ ಚರ್ಮಗಳಿಂದ;
12 ಜೀವವಿತ್ತು ಅಚಲ ಪ್ರೀತಿ ತೋರಿಸಿದೆ
ನಿನ್ನ ಪರಾಮರಿಕೆಯಿಂದ ನನ್ನ ಪ್ರಾಣವನ್ನು
ಕಾಪಾಡಿದೆ.
13 ಆದರೂ ನನಗೆ ಚೆನ್ನಾಗಿ ಗೊತ್ತಿತ್ತು;
ನಿನ್ನ ಹೃದಯದಲ್ಲಿ ಗುಟ್ಟಾದ
ಯೋಜನೆಯೊಂದು ಹುದುಗಿತ್ತು;
14 ನಾನು ತಪ್ಪುಮಾಡಿದರೆ ಅದನು ಕಂಡುಹಿಡಿದು
ಆ ದೋಷಕ್ಕೆ ಕ್ಷಮೆ ನೀಡಕೂಡದೆಂದು.
15 ನಾನು ದುರ್ಮಾರ್ಗಿಯಾದರಂತೂ
ನನಗಿಲ್ಲ ಗತಿ
ಸನ್ಮಾರ್ಗಿಯಾದರೂ ಕೂಡ ನಡೆವಂತಿಲ್ಲ

ತಲೆಯೆತ್ತಿ
ಏಕೆಂದರೆ ನಾಚಿ ನಿಂತಿರುವೆ, ಯಾತನೆಯ
ಹೊರೆ ಹೊತ್ತಿ.
16 ನನು ತಲೆಯೆತ್ತಿದರೆ ಬೇಟೆಯಾಡುವೆ ನನ್ನನ್ನು
ಸಿಂಹದಂತೆ
ಮತ್ತೆ ನಿನ್ನ ಶಕ್ತಿ ಸಾಮರ್ಥ್ಯವನ್ನು
ನನ್ನ ಮೇಲೆ ಪ್ರಯೋಗಿಸುವೆ.
17 ನನಗೆ ವಿರುದ್ಧ ಹೊಸಹೊಸ ಸಾಕ್ಷಿಗಳನ್ನು
ಬರಮಾಡುವೆ
ನನ್ನ ಮೇಲೆ ಹೆಚ್ಚುಹೆಚ್ಚಾಗಿ ಸಿಟ್ಟುಗೊಳ್ಳುವೆ
ಅಲೆಅಲೆಯಾಗಿ ಹಗೆಗಳನ್ನು ನನ್ನ ಮೇಲೆ
ಧಾಳಿಮಾಡ ಬಿಡುವೆ.
18 ತಾಯ ಗರ್ಭದಿಂದ ನನ್ನನ್ನೇಕೆ ಹೊರತೆಗೆದೆ?
ನಾನು ಸತ್ತು ಹೋಗಬಹುದಿತ್ತು
ಯಾರೂ ನೋಡುವುದಕ್ಕೆ ಮುಂಚೆ!
19 ಆಗ ನಾನು ಇಲ್ಲದವನಾಗುತ್ತಿದ್ದೆ
ಗರ್ಭದಿಂದಲೆ ಸಮಾಧಿ ಸೇರುತ್ತಿದ್ದೆ.
20 ನನಗುಳಿದಿರುವ ದಿನಗಳು ಕೆಲವೇ
ಕಿಂಚಿತ್ತು ವಿಶ್ರಮಿಸಲು ನನ್ನನು
ಬಿಟ್ಟುಬಿಡಬಾರದೆ?
21 ಮರಳಿ ಹಿಂದಿರುಗಲಾಗದ ನಾಡನು ನಾನು
ಸೇರಲಿರುವೆ
ಅಂಧಕಾರವೂ ಗಾಢಾಂಧಕಾರವೂ ಅಲ್ಲಿ
ತುಂಬಿವೆ.
22 ಕಾರ್ಗತ್ತಲೂ ಗಾಢಾಂಧಕಾರವೂ ಅಲ್ಲಿವೆ
ಅರಾಜಕತೆಯೂ ಕಾರಿರುಳೂ ಅದನು
ಆವರಿಸಿವೆ
ಬೆಳಕೇ ಕಾರಿರುಳಾಗಿ ಆ ನಾಡನ್ನು ಕವಿದಿದೆ."

**11** ಆಗ ನಾಮಾಥ್ಯನಾದ ಚೋಫರನು
ಹೀಗೆಂದ:
2 "ಇಷ್ಟೆಲ್ಲ ಮಾತುಗಳಿಗೆ ತಕ್ಕ ಉತ್ತರ ಬೇಡವೆ?
ಮಾತಿನಮಲ್ಲನು ನೀತಿವಂತ ಎನಿಸಿಕೊಳ್ಳುವನೆ?
3 ನಿನ್ನ ವಾಕ್ ಚಮತ್ಕಾರಕ್ಕೆ ಜನ
ಬಾಯಿಮುಚ್ಚಿಕೊಳ್ಳಬೇಕೆ?
ನಿನ್ನ ಕುಚೋದ್ಯಕ್ಕೆ ನಿನಗಾಗ ಬೇಡವೆ ನಾಚಿಕೆ?
4 ನೀನು ಹೇಳುವುದೇ ಸತ್ಯವೆಂದು ವಾದಿಸುತ್ತಿರುವೆ
ದೇವರ ದೃಷ್ಟಿಯಲ್ಲಿ ನೀನು ಪರಿಶುದ್ಧನು
ಎನ್ನುತ್ತಿರುವೆ.

5 ಆದರೆ ದೇವರೇ ಬಾಯ್ದೆರೆದು
ನಿನಗೆ ವಿರುದ್ಧ ಮಾತನಾಡಿದರೆ ಒಳಿತು!
6 ಜ್ಞಾನದ ರಹಸ್ಯಗಳನು ದೇವರೇ ನಿನಗೆ ತಿಳಿಸಲಿ
ಸುಜ್ಞಾನ ಬಹುಮುಖವಾದುದೆಂದು
ಆತನೇ ತೋರಿಸಲಿ
ನಿನ್ನ ದೋಷಗಳನ್ನೆಲ್ಲ ಆತ ಲಕ್ಷಿಸಿಲ್ಲ ಎಂಬುದು
ನಿನಗೆ ತಿಳಿದಿರಲಿ.
7 ನೀನು ಕಂಡುಕೊಳ್ಳಬಲ್ಲೆಯಾ ದೇವರ
ಅಂತರಾಳವನ್ನು?
ಗ್ರಹಿಸಿಕೊಳ್ಳಬಲ್ಲೆಯಾ ಸರ್ವಶಕ್ತನ
ಇತಿಮಿತಿಯನ್ನು?
8 ಅದು ಆಕಾಶಕ್ಕಿಂತಲೂ ಎತ್ತರ; ನಿನ್ನಿಂದೇನು
ಮಾಡಲು ಸಾಧ್ಯ?
ಅದು ಪಾತಾಳಕ್ಕಿಂತಲೂ ಆಳ; ನಿನ್ನಿಂದ ಹೇಗೆ
ತಿಳಿಯಲು ಸಾಧ್ಯ?
9 ಅದು ಭೂಮಿಗಿಂತಲು ಉದ್ದ
ಸಮುದ್ರಕ್ಕಿಂತಲು ಅಗಲ.
10 ಆತ ಹಾದುಹೋದರೂ ಸೆರೆಹಿಡಿದರೂ
ನ್ಯಾಯಾಲಯಕ್ಕೆ ಎಳೆದರೂ ತಡೆವರಾರು?
11 ಆತ ದುರುಳರನು ಗುರುತು ಹಚ್ಚುತ್ತಾನೆ
ನೆರವಿಲ್ಲದೆ ಅಕ್ರಮವನು ಕಂಡುಹಿಡಿಯುತ್ತಾನೆ.
12 ಕಾಡುಕತ್ತೆಮರಿ ನರಜನ್ಮ ತಾಳಿದಾಗ
ಪೆದ್ದ ಮಾನವ ಬುದ್ಧಿವಂತನಾದ !
13 ಸರಿಪಡಿಸಿಕೋ ನಿನ್ನ ಅಂತರಂಗವನ್ನು
ದೇವರತ್ತ ಎತ್ತು ನಿನ್ನ ಕರಗಳನ್ನು.
14 ನಿನ್ನ ಕೈಯಿಂದ ದೂರವಿರಲಿ ಅಕ್ರಮ
ನಿನ್ನ ಗುಡಾರದಲಿ ನೆಲಸದಿರಲಿ ಅನ್ಯಾಯ.
15 ಆಗ ಮಾತ್ರ ನೀನು ತಲೆಯೆತ್ತಬಲ್ಲೆ ಗೌರವದಿಂದ
ಸ್ಥಿರಚಿತ್ತನಾಗಿರಬಲ್ಲೆ ನಿರ್ಭಯದಿಂದ.
16 ಮರೆತು ಬಿಡುವೆ ಆಗ ನಿನ್ನ ಕಷ್ಟದುಃಖವನ್ನು
ನಿನ್ನ ನೆನಪಿಗೆ ಅದು ಹರಿದುಹೋದ ನೀರು.
17 ಆಗ ನಿನ್ನ ಬಾಳು ನಡುಹಗಲಿಗಿಂತ ಪ್ರಜ್ವಲ
ಕತ್ತಲು ಕೂಡ ಪ್ರಾತಃಕಾಲದಂತೆ ಉಜ್ವಲ!
18 ನಂಬಿಕೆಯಿಂದಿರುವುದರಿಂದ ಧೈರ್ಯದಿಂದಿರುವೆ
ಸುತ್ತಲು ಸುರಕ್ಷಿತನಾಗಿ ನೆಮ್ಮದಿಯಿಂದ
ಮಲಗುವೆ.
19 ಆಗ ನೀನು ವಿಶ್ರಮಿಸುವೆ ಹೆದರಿಕೆಯಿಲ್ಲದೆ
ಅನೇಕರಿಗೆ ಬೇಕಾಗುವುದು ನಿನ್ನ
ಮುಖ ಪ್ರಸನ್ನತೆ.
20 ದುರ್ಜನರು ನಿರಾಶೆಯಿಂದ ಕಂಗೆಡುವರು

ಪ್ರಾಣಬಿಡಬೇಕೆಂಬುದೇ ಅವರ
ಆಶೆಯಾಗಿರುವುದು.”

**12** ಅದಕ್ಕೆ ಯೋಬನು ಪ್ರತ್ಯುತ್ತರವಾಗಿ
ಹೀಗೆಂದನು:
2 “ಹೌದ್ಹೌದು ನೀವೇ ಮಹಾಜನ,
ನಿಮ್ಮೊಡನೆಯೇ ಸಾಯುವುದು ಸುಜ್ಞಾನ!
3 ನಿಮ್ಮ ಹಾಗೆ ನಾನೂ ಬಲ್ಲವ
ನಿಮಗಿಂತ ನಾನೇನೂ ಕೀಳಲ್ಲ.
ಇದು ಯಾರಿಗೆ ತಾನೆ ತಿಳಿದಿಲ್ಲ?
4 ನೀತಿವಂತನೂ ನಿರ್ದೋಷಿಯೂ ಆದ ನಾನು
ದೇವರನ್ನು ಪ್ರಾರ್ಥಿಸಿ ಪ್ರತ್ಯುತ್ತರಕ್ಕಾಗಿ
ಕಾದಿರಲು
ಗೆಳೆಯರ ಗೇಲಿಪರಿಹಾಸ್ಯಕ್ಕೆ ಗುರಿಯಾದೆನು.
5 ದಲಿತರನ್ನು ಕಂಡರೆ ಸುಖಜೀವಿಗಳಿಗೆ ತಾತ್ಸಾರ
ಜಾರಿ ಬೀಳಲಿರುವವರಿಗೆ ಕಾದಿದೆ ತಿರಸ್ಕಾರ.
6 ಸಮೃದ್ಧಿಯಾಗಿವೆ ಕಳ್ಳಕಾಕರ ಗುಡಾರಗಳು
ಸುರಕ್ಷಿತವಾಗಿರುವರು ದೇವರನ್ನೆ
ಕೆರಳಿಸುವವರು
ಅಂಗೈಯಲ್ಲಿರುವುದೇ ಅವರಿಗೆ ದೇವರು!
7 ಮೃಗಗಳನ್ನು ಬೇಕಾದರೆ ಕೇಳು, ಅವು
ಕಲಿಸುವುವು
ಆಕಾಶದ ಪಕ್ಷಿಗಳನ್ನು ಕೇಳು, ಅವು ತಿಳಿಸುವುವು.
8 ಕ್ರಿಮಿಕೀಟಗಳನ್ನು ಕೇಳು, ಅವು ನಿನಗೆ
ಬೋಧಿಸುವುವು
ಸಮುದ್ರದ ಮೀನುಗಳು ನಿನಗೆ ಉಪದೇಶ
ಮಾಡುವುವು.
9 ಇವುಗಳೆಲ್ಲವನ್ನು ಮಾಡಿದ್ದು ಸರ್ವೇಶ್ವರನ
ಕೈಯೇ
ಇದು ತಿಳಿಯದಿರುವುದು ಯಾರಿಗೆ ತಾನೆ?
10 ಆತನ ಕೈಯಲ್ಲಿದೆ ಎಲ್ಲ ಜೀವಿಗಳ ಪ್ರಾಣ
ಪ್ರತಿಯೊಬ್ಬ ನರಮಾನವನ ಶ್ವಾಸ.
11 ನಾಲಿಗೆ ರುಚಿನೋಡುವಂತೆಯೆ
ಕಿವಿ ನುಡಿಯನು ವಿವೇಚಿಸುತ್ತದೆ.
12 ಜ್ಞಾನವಿದೆ ವಯೋವೃದ್ಧರಲ್ಲಿ
ವಿವೇಕವಿದೆ ದೀರ್ಘಾಯುಷ್ಯರಲ್ಲಿ.
13 ಆದರೆ ದೇವರಲ್ಲಿದೆ ಜ್ಞಾನದೊಡನೆ ಶಕ್ತಿಕೂಡ
ಆತನಲ್ಲಿದೆ ವಿವೇಕ ಮತ್ತು ಸನ್ಮತಿ ಸಹ.
14 ಆತ ಕೆಡವಿದ್ದನ್ನು ಯಾರಿಂದಲೂ ಕಟ್ಟಲಾಗದು

ಆತ ಸೆರೆಹಿಡಿದವರನ್ನು ಯಾರಿಂದಲೂ
ಬಿಡಿಸಲಾಗದು.
15 ಆತ ನೀರನ್ನು ತಡೆದರೆ, ಬತ್ತಿಹೋಗುತ್ತದೆ
ಬೆಳೆಯೆಲ್ಲ
ತೂಬೆತ್ತಿದರೆ ಮುಳುಗಿಹೋಗುತ್ತದೆ
ಇಳೆಯೆಲ್ಲ.
16 ಸಾಮರ್ಥ್ಯ ಹಾಗು ವಿಜಯ ಆತನ ಲಕ್ಷಣ
ವಂಚಕ ಹಾಗು ವಂಚಿತ ಆತನಿಗೆ ಅಧೀನ.
17 ಮಂತ್ರಿಗಳನು ಬರಿಬತ್ತಲೆಯಾಗಿ ನಡೆಸುತ್ತಾನೆ
ನ್ಯಾಯಾಧಿಪತಿಗಳನು
ಮೂರ್ಖರನ್ನಾಗಿಸುತ್ತಾನೆ.
18 ಅರಸರು ಹಾಕಿದ ಬಂಧನವನ್ನು ಬಿಚ್ಚಿ
ಬಿಗಿಯುತ್ತಾನೆ ಅವರ ಸೊಂಟಕ್ಕೆ ಚಿಂದಿ.
19 ಯಾಜಕರನ್ನು ಬರಿಬತ್ತಲೆಯಾಗಿ ನಡೆಸುತ್ತಾನೆ
ಅಚಲ ಶಕ್ತಿಶಾಲಿಗಳನ್ನು ಕೆಡವಿಬಿಡುತ್ತಾನೆ.
20 ಮೂಕರನ್ನಾಗಿಸುತ್ತಾನೆ ವಾಕ್ ಚತುರರನ್ನು
ಹಿರಿಯರ ಧೀಮಂತಿಕೆಯನ್ನು ತೆಗೆದು
ಬಿಡುತ್ತಾನೆ.
21 ಅಧಿಪತಿಗಳಿಗೆ ಉಂಟುಮಾಡುತ್ತಾನೆ
ಅವಮಾನವನ್ನು
ಬಿಚ್ಚಿಬಿಡುತ್ತಾನೆ ಬಲಾಢ್ಯರ ನಡುಕಟ್ಟನ್ನು.
22 ಇರುಳಿನ ಆಳದಲ್ಲಿರುವವುಗಳನ್ನು
ಬೆಳಗಿಸುತ್ತಾನೆ
ಗಾಢಾಂಧಕಾರವನ್ನು ಪ್ರಕಾಶಗೊಳಿಸುತ್ತಾನೆ.
23 ರಾಷ್ಟ್ರಗಳನ್ನು ಬೆಳೆಸುತ್ತಾನೆ, ಅಳಿಸುತ್ತಾನೆ
ಅವುಗಳನ್ನು ಹರಡುತ್ತಾನೆ,
ಹೊರದೂಡುತ್ತಾನೆ.
24 ಭೂಪತಿಗಳನ್ನು ಬುದ್ಧಿಹೀನರನ್ನಾಗಿಸುತ್ತಾನೆ
ದಾರಿಕಾಣದ ಅರಣ್ಯದಲಿ ಅಲೆದಾಡಿಸುತ್ತಾನೆ.
25 ಅಂಥವರು ಕತ್ತಲೊಳು ತಡಕಾಡುವರು
ಬೆಳಕಿಲ್ಲದೆ
ತಡವರಿಸುವರು ಕುಡಿದು
ಅಮಲೇರಿದವರಂತೆ.”

## 13 “ಇವೆಲ್ಲವನ್ನು ನನ್ನ ಕಣ್ಣುಗಳು

ಕಂಡಿವೆ.
ಕಿವಿಗಳು ಕೇಳಿ ಗ್ರಹಿಸಿಕೊಂಡಿವೆ.
2 ನೀವು ತಿಳಿದಿರುವುದನ್ನು ನಾನೂ ತಿಳಿದವ
ನಿಮಗಿಂತ ನಾನು ಕೀಳೇನೂ ಅಲ್ಲ.

3 ಸರ್ವಶಕ್ತನೊಡನೆ ಮಾತಾಡಲು ನನಗಿದೆ ಆಸೆ
ದೇವರೊಂದಿಗೆ ವಾದಿಸಲು ನನಗಿದೆ ಅಪೇಕ್ಷೆ.
4 ನೀವು ಸುಳ್ಳಿಗೆ ಸುಣ್ಣ ಬಳಿಯುವವರು
ನೀವೆಲ್ಲರು ಏತಕ್ಕೂ ಬಾರದ ವೈದ್ಯರು.
5 ನೀವು ಸುಮ್ಮನಿದ್ದರೆ ಚೆನ್ನ
ಮೌನವೇ ನಿಮಗೆ ಉತ್ತಮ.
6 ಈಗ ಕೇಳಿ ನನ್ನ ವಾದವನ್ನು
ಆಲಿಸಿರೀಗ ನನ್ನ ತರ್ಕವನ್ನು.
7 ದೇವರ ಪಕ್ಷವಹಿಸಿ ನೀವು ಅನ್ಯಾಯ
ನುಡಿಯುವಿರೋ?
ಅವರಿಗೋಸ್ಕರ ಕಪಟ ಮಾತಾಡುವಿರೋ?
8 ಅವರಿಗೆ ಮುಖದಾಕ್ಷಿಣ್ಯ ತೋರುವಿರೋ?
ದೇವರ ಪರವಾಗಿ ನೀವು ವಾದಿಸುವಿರೋ?
9 ದೇವರು ನಿಮ್ಮನ್ನು ಪರಿಶೋಧಿಸಿದರೆ ನಿಮಗೆ
ಒಳಿತೆ?
ಮನುಷ್ಯರಂತೆ ಆತನನ್ನು
ಮೋಸಗೊಳಿಸಲಾದೀತೆ?
10 ನೀವು ಗುಟ್ಟಾಗಿ ಪಕ್ಷಪಾತಮಾಡಿದರೂ
ಆತ ನಿಮ್ಮನ್ನು ಖಂಡಿಸದೆ ಬಿಡನು.
11 ಆತನ ಪ್ರತಿಭೆ ನಿಮ್ಮನ್ನು ಹೆದರಿಸದೋ?
ದೈವಭಯವು ನಿಮ್ಮನ್ನು ಆವರಿಸದೋ?
12 ನಿಮ್ಮ ಸ್ಮೃತಿಗಳು ಬೂದಿಯ ಸಾಮತಿಗಳು
ನಿಮ್ಮ ವಾದಗಳು ಮಣ್ಣಿನ ಗೋಡೆಗಳು.
13 ಸುಮ್ಮನಿರಿ, ನನ್ನನ್ನು ಮಾತಾಡಲು ಬಿಡಿ
ನನ್ನ ಮೇಲೆ ಏನು ಬೇಕಾದರೂ ಬರಲಿ.
14 ಪ್ರಾಣವನ್ನು ನಾನು ಕಚ್ಚಿಕೊಂಡಿದ್ದೇನೆ ಬಾಯಲಿ
ಜೀವವನ್ನು ನಾನು ಹಿಡಿದುಕೊಂಡಿದ್ದೇನೆ
ಕೈಯಲಿ.
15 ಇಗೋ, ದೇವರು ಕೊಲ್ಲುವನೆನ್ನನು
ಅದಕ್ಕಾಗಿ ನಾನು ಕಾದಿರುವೆನು.
ಆದರೂ ನನ್ನ ನಡತೆ ಸರಿಯೆಂಬುದನು
ಆತನ ಮುಂದೆಯೆ ರುಜುವಾತುಪಡಿಸುವೆನು.
16 ಭಕ್ತಿಹೀನನು ಆತನ ಮುಂದೆ ಬರಲಾರ
ನಾನು ಉದ್ಧಾರವಾಗುವೆನೆಂಬುದಕ್ಕೆ ಇದೇ
ಆಧಾರ.
17 ಕೇಳಿ, ನನ್ನ ಮಾತನ್ನು ಲಕ್ಷ್ಯವಿಟ್ಟು
ನನ್ನ ಅರಿಕೆಯನ್ನು ಕಿವಿಗೊಟ್ಟು.
18 ಇಗೋ ನನ್ನ ಮೊಕದ್ದಮೆಯನ್ನು
ಸಿದ್ಧಗೊಳಿಸಲಾಗಿದೆ
ನಾನು ನಿರ್ದೋಷಿಯೆಂಬ ನಿರ್ಣಯ

ನನಗೆ ಗೊತ್ತೇ ಇದೆ.
19 ದೇವಾ, ನನ್ನ ಮೇಲೆ ಆಪಾದನೆ ಹೊರಿಸಲು
ಬರುವೆಯಾ?
ಹಾಗಾದರೆ ಮೌನತಾಳಿ ನಾ ಮಾಡುವೆ
ಪ್ರಾಣತ್ಯಾಗ.
20 ನನ್ನೆರಡು ಕೋರಿಕೆಗಳನ್ನು ಈಡೇರಿಸಯ್ಯಾ
ಆಗ ನಿನ್ನ ದೃಷ್ಟಿಗೆ ನಾನು
ಮರೆಮಾಡಿಕೊಳ್ಳಲಾರೆನಯ್ಯಾ.
21 ಹಿಂತೆಗೆದುಕೊ ನನ್ನ ಮೇಲೆತ್ತಿರುವ ನಿನ್ನ
ಕೈಗಳನು
ಅಂಜಿಕೆಗೀಡು ಮಾಡದಿರಲಿ ನಿನ್ನ ದಿಗಿಲು
ನನ್ನನು.
22 ಆ ಬಳಿಕ ನೀನು ಕರೆದರೆ ನಾನು ಉತ್ತರ
ಕೊಡುವೆ
ಇಲ್ಲವೆ, ನಾನು ಮಾತಾಡಿದರೆ ನೀನೆ
ಉತ್ತರಿಸುವೆ.
23 ನನ್ನ ಅಕ್ರಮಗಳೆಷ್ಟು? ಪಾಪಗಳೆಷ್ಟು?
ನನ್ನ ಪಾಪದೋಷಗಳನ್ನು ತಿಳಿಯಪಡಿಸು.
24 ನೀನೇಕೆ ನನಗೆ ವಿಮುಖನಾಗಿರುವೆ?
ನನ್ನನ್ನೇಕೆ ಶತ್ರು ಎಂದೆಣಿಸುವೆ?
25 ಗಾಳಿಗೆ ತೂರುವ ತರಗೆಲೆಯನ್ನು
ಬೆದರಿಸುವೆಯಾ?
ಒಣಗಿದ ಹೊಟ್ಟನ್ನು ಬೆನ್ನಟ್ಟಿ ಹೋಗುವೆಯಾ?
26 ನನ್ನ ವಿಷಯವಾಗಿ ಕಹಿಯಾದ ತೀರ್ಪನು
ಬರೆದಿರುವೆ
ಯೌವನದ ಪಾಪಪರಿಹಾಮಗಳನು ನನ್ನ ಮೇಲೆ
ಹೊರಿಸಿರುವೆ.
27 ನನ್ನ ಕಾಲುಗಳಿಗೆ ನೀ ಕೋಳವನ್ನು ತೊಡಿಸಿರುವೆ
ನನ್ನ ನಡತೆಯನು ದಿಟ್ಟಿಸಿ ನೋಡುತ್ತಿರುವೆ
ನನ್ನ ಹೆಜ್ಜೆಹೆಜ್ಜೆಯನು ಲೆಕ್ಕಿಸುತ್ತಿರುವೆ.
28 ಕೊಳೆತ ಪದಾರ್ಥದಂತೆ,
ನುಸಿಹಿಡಿದ ಬಟ್ಟೆಯಂತೆ
ನಾನು ಕ್ಷಯಿಸಿ ಹೋಗುತ್ತಿರುವೆ."

**14** "ಹೆಣ್ಣಿನಿಂದ ಹುಟ್ಟಿದ ಮನುಷ್ಯನು
ಅಲ್ಪಾಯುಷ್ಯನು, ದುಃಖಭರಿತನು.
2 ಅರಳಿ ಬಾಡುವನು ಹೂವಿನಂತೆ
ನಿಲ್ಲದೆ ಓಡುವನು ನೆರಳಿನಂತೆ.
3 ಇಂಥವನಾದ ನನ್ನ ಮೇಲೆ ಕಣ್ಣಿಟ್ಟು

ಬರಮಾಡುವೆಯಾ ನನ್ನನು ನಿನ್ನ
ನ್ಯಾಯಸ್ಥಾನಕ್ಕೆ?
4 ಅಶುದ್ಧತೆಯಿಂದ ಬಂದೀತೆ ಶುದ್ಧತೆ?
ಇಲ್ಲ, ಎಂದಿಗೂ ಅದು ಅಸಾಧ್ಯವೆ.
5 ಮಾನವನ ದಿನಗಳೆಷ್ಟೆಂದು ತೀರ್ಮಾನವಾಗಿದೆ
ಅವನ ತಿಂಗಳುಗಳ ಲೆಕ್ಕ ನಿನಗೆ ಗೊತ್ತಿದೆ
ನೀ ನೇಮಿಸಿರುವೆ ಅವನಿಗೆ ದಾಟಲಾಗದ
ಗಡಿಗಳನೆ.
6 ಇಂತಿರಲು ತಿರುಗಿಸಿಬಿಡು ಅವನಿಂದ
ನಿನ್ನ ದೃಷ್ಟಿಯನು
ಸವಿಯಲು ಬಿಡು ಕೂಲಿಯಾಳಂತೆ ದಿನಾಂತ್ಯದ
ನಲಿವನು.
7 ಮತ್ತೆ ಮೊಳೆಯುವೆನೆಂಬ,
ಮರಳಿ ಚಿಗುರುವೆನೆಂಬ
ನಂಬಿಕೆಯಿಂದಿದೆ ಅಲ್ಲವೆ ಕಡಿದ ವಟವೃಕ್ಷ?
8 ಮರದ ಬೇರು ನೆಲದಲ್ಲಿ ಮುದಿಯಾಗಿದ್ದರೂ
ಅದರ ಬುಡ ಮಣ್ಣಿನಲ್ಲಿ ಸತ್ತಿದ್ದರೂ
9 ಮಳೆ ವಾಸನೆಯಿಂದಲೆ ಅದು ಮೊಳೆಯುವುದು
ಗಿಡದ ಹಾಗೆ ಅದು ಕವಲೊಡೆದುಕೊಳ್ಳುವುದು.
10 ಮನುಜನೋ ಬಿದ್ದಿರುತ್ತಾನೆ ಸತ್ತು
ಕೊನೆಯುಸಿರೆಳೆದಾಗ ಎಲ್ಲವು ಮುಗಿಯಿತು.
11 ಸರೋವರದ ನೀರು ಆರಿಹೋಗುವಂತೆ
ನದಿಗಳು ಬತ್ತಿಹೋಗುವಂತೆ
12 ಸತ್ತು ಮಲಗಿದ ಮನುಜ ಏಳುವಂತಿಲ್ಲ.
ಅಳಿದು ಹೋದರೂ ಆಕಾಶ ಮಂಡಲ
ಅವನು ಎಚ್ಚರಗೊಳ್ಳುವುದಿಲ್ಲ,
ಎಬ್ಬಿಸಲ್ಪಡುವುದಿಲ್ಲ.
13 ಆಹಾ ! ಬಚ್ಚಿಡಲಾರೆಯಾ ನನ್ನನ್ನು
ಪಾತಾಳದೊಳಗೆ?
ಅಲ್ಲಿ ಮರೆಮಾಚಿಡಲಾರೆಯಾ ನಿನ್ನ ಕೋಪ
ಇಳಿಯುವುದಕೆ?
14 ಸತ್ತಮೇಲೆ ಮನುಜ ಮರಳಿ
ಬದುಕುತ್ತಾನೆಯೇ?
ಬದುಕುವುದಾದರೆ ಮುಕ್ತಿ ಹೊಂದುವವರೆಗೆ
ನನ್ನ ವಾಯಿದೆಯ ದಿನವೆಲ್ಲ ನಾ ಕಾದಿರುವೆ.
15 ಆಗ ನೀನು ಕರೆದರೆ ನಾನು ಉತ್ತರ ಕೊಡುವೆ
ನಿನ್ನ ಈ ಸೃಷ್ಟಿಯ ಮೇಲೆ ಹುಟ್ಟೀತು ನಿನಗೆ
ಮಮತೆ !
16 ಆಗ ನನ್ನ ಹೆಜ್ಜೆಹೆಜ್ಜೆಗಳನು ನೀ ಲೆಕ್ಕಿಸುವೆ
ನನ್ನ ಪಾಪ ಹುಡುಕಲು ನೀ ಕಾವಲು ಇಡಲಾರೆ.

17 ಆಗ ನನ್ನ ದ್ರೋಹವನ್ನೆಲ್ಲ ಮೂಟೆಕಟ್ಟಿ
ಮೂಲೆಗೆ ಹಾಕುವೆ
ನನ್ನ ದೋಷವನ್ನು ಮುಚ್ಚಿ, ನೀ ಮರೆಮಾಡುವೆ.
18 ಆದರೆ ಬೆಟ್ಟ ಕದಡಿ ಕರಗುವಂತೆ
ಬಂಡೆ ತನ್ನ ಸ್ಥಳದಿಂದ ಜಾರುವಂತೆ
19 ಕಲ್ಲುಗಳನ್ನು ನೀರು ಸವೆಸುವಂತೆ
ನೆಲದ ಮಣ್ಣನು ಪ್ರವಾಹ ಕೊಚ್ಚುವಂತೆ
ಭಂಗವಾಗುವುದು ಮಾನವನ ನಿರೀಕ್ಷೆ.
20 ನೀನು ಅವನನ್ನು ಶಾಶ್ವತವಾಗಿ ಸೋಲಿಸಿಬಿಡುವೆ
ಅವನು ಗತಿಸಿ ಹೋಗುವನು.
ಅವನನ್ನು ವಿಕಾರಗೊಳಿಸಿ ತೊಲಗಿಸಿಬಿಡುವೆ.
21 ಅವನ ಮಕ್ಕಳು ಪ್ರಗತಿ ಹೊಂದಿದರೂ ಅವನಿಗೆ
ತಿಳಿಯದು
ಅವರು ಅಧೋಗತಿಗೆ ಇಳಿದರೂ ಅವನಿಗೆ
ಗೋಚರವಾಗದು.
22 ಅವನು ಅನುಭವಿಸುವುದು ತನ್ನ ದೇಹದ
ನೋವನ್ನೇ
ಅವನು ಅತ್ತು ಪ್ರಲಾಪಿಸುವುದು
ತನಗಾಗಿಯೇ."

### ಎರಡನೆಯ ಸಂವಾದ

(15.1–21–34)

**15** ಆಗ ತೇಮಾನ್ಯನಾದ ಎಲೀಫಜನು
ಮತ್ತೆ ಹೀಗೆಂದು ಹೇಳಿದನು:
2 "ಬುದ್ಧಿವಂತನು ಗಾಳಿಮಾತನ್ನಾಡುವುದು
ಸರಿಯೆ?
ಸುಡುಗಾಳಿಯಿಂದ ಹೊಟ್ಟೆ
ತುಂಬಿಸಿಕೊಳ್ಳಬಹುದೇ?
3 ಅಂಥವನು ನಿಷ್ಪ್ರಯೋಜಕವಾಗಿ
ವಾದಿಸುತ್ತಾನೆಯೆ?
ನಿರರ್ಥಕವಾಗಿ ವ್ಯಾಜ್ಯವಾಡುತ್ತಾನೆಯೆ?
4 ನೀನಾದರೊ ದೇವರ ಭಯಭಕ್ತಿಯನ್ನು
ಕೆಡಿಸುತ್ತಿರುವೆ
ದೇವರ ಧ್ಯಾನಕ್ಕೆ ಅಡ್ಡಿಬರುತ್ತಿರುವೆ.
5 ನಿನ್ನ ಪಾಪವೆ ನಿನಗೆ ಮಾತನು ಕಲಿಸಿಕೊಟ್ಟಿದೆ
ಕಪಟಿಗಳಾಡುವ ನುಡಿಯನೇ ನೀನು
ಆರಿಸಿಕೊಂಡಿರುವೆ.
6 ನಾನಲ್ಲ, ನಿನ್ನ ಬಾಯೇ, ನಿನ್ನನು
ಅಪರಾಧಿಯನ್ನಾಗಿಸುತ್ತಿದೆ

ನಿನ್ನ ತುಟಿಗಳೇ ನಿನಗೆ ವಿರುದ್ಧ
ಸಾಕ್ಷಿಕೊಡುತ್ತಿವೆ.
7 ನೀನು ಮನ್ಕಜರಿಗೆಲ್ಲ ಆದಿಪುರುಷನೋ?
ಬೆಟ್ಟಗಳಿಗಿಂತ ಮುಂಚಿತವಾಗಿ
ಹುಟ್ಟಿದವನೋ?
8 ದೇವರ ಆಲೋಚನಾಸಭೆಯಲಿ ನೀನು
ಭಾಗವಹಿಸಿದ್ದೆಯೋ?
ಜ್ಞಾನವೆಂಬುದು ನಿನಗೆ ಮಾತ್ರ ಮೀಸಲೋ?
9 ನಮಗೆ ತಿಳಿಯದಿರುವುದು ನಿನಗೆ ತಿಳಿದಿದೆಯೆ?
ನಮಗೆ ಅರ್ಥವಾಗದಿರುವುದು ನಿನಗೆ
ಅರ್ಥವಾಗಿದೆಯೆ?
10 ನಮ್ಮಲ್ಲಿದ್ದಾರೆ ತಲೆನರೆತವರು,
ವಯೋವೃದ್ಧರು
ನಿಮ್ಮಪ್ಪನಿಗಿಂತಲೂ ಹೆಚ್ಚು
ಮುದುಕರಾದವರು.
11 ಕೇವಲವಾಯಿತೋ ನಿನಗೆ ದೇವರಿತ್ತ ಸಾಂತ್ವನ?
ನಿನಗೆ ದೊರೆತ ಮೃದುವಾದ ಹಿತವಚನ?
12 ನಿನ್ನ ಹೃದಯ ನಿನ್ನನ್ನು ದೂರ ಒಯ್ದಿದೆ, ಏಕೆ?
ನಿನ್ನ ಕಣ್ಣು ಕಿಡಿಕಾರುತ್ತಿದೆ ಏಕೆ?
13 ದೇವರಿಗೆ ವಿರುದ್ಧ ಕುದಿಯುತ್ತಿರುವೆ ಏಕೆ?
ಬಾಯಿಂದ ಮಾತು ಹರಿಯುತ್ತಿವೆ ಏಕೆ?
14 ನರನು ಎಷ್ಟರವನು? ಅವನು ಪರಿಶುದ್ಧನಿರಲು
ಸಾಧ್ಯವೆ?
ಸ್ತ್ರೀಯರಲ್ಲಿ ಹುಟ್ಟಿದವನು
ನೀತಿವಂತನಾಗಿರಬಹುದೆ?
15 ದೇವರಿಗೋ, ತನ್ನ ದೂತರಲ್ಲೂ ನಂಬಿಕೆಯಿಲ್ಲ
ಆಕಾಶವೂ ಆತನ ದೃಷ್ಟಿಯಲ್ಲಿ ನಿರ್ಮಲವಲ್ಲ
16 ಇಂತಿರಲು, ಮತ್ತಷ್ಟೂ ಮಲಿನನಲ್ಲವೆ
ನರಮಾನವನು?
ಅಸಹ್ಯನು, ಅಕ್ರಮಿಯು, ಕೇಡನ್ನು ನೀರಿನಂತೆ
ಕುಡಿಯುವವನು?
17 ಕೇಳು ನಾನು ತಿಳಿಸುವ ಈ ಸಂಗತಿಯನು
ನಾನು ಕಂಡದ್ದನ್ನೇ ನಿನಗೆ ವಿವರಿಸುವೆನು:
18 ಜ್ಞಾನಿಗಳು ತಮ್ಮ ಪೂರ್ವಜರಿಂದ ಕಲಿತಿದ್ದನು
ಮುಚ್ಚುಮರೆಯಿಲ್ಲದೆ ಪ್ರಕಟಿಸಿದವುಗಳನು
ಕೇಳು–ನಾನು ನಿನಗೆ ತಿಳಿಸುವೆನು:
19 ಅವರು ತಮ್ಮ ನಾಡಿನ ಬಾಧ್ಯತೆಯನ್ನು
ಕಳೆದುಕೊಂಡವರಲ್ಲ
ಪರದೇಶೀಯರು ಅವರ ಮಧ್ಯೆ ಹಾದು
ಹೋಗುವಂತಿರಲಿಲ್ಲ.

20 ಹಿಂಸಾತ್ಮಕನ ವರುಷಗಳು ಎಣಿಸಲಾಗಿವೆ
ಆ ದುಷ್ಟನು ಜೀವಮಾನವೆಲ್ಲ ಬಾಧೆ ಪೀಡಿತನೆ.
21 ಭಯಹುಟ್ಟಿಸುವ ಅಪಾಯಗಳ ಸಪ್ಪಳ ಅವನ
ಕಿವಿಯಲ್ಲಿ
ಸೂರೆಗಾರನ ಧಾಳಿಯ ದಿಗಿಲು ಅವನು
ಸುಖವಿರುವಲ್ಲಿ.
22 ಕತ್ತಲಿಂದ ಹಿಂದಿರುಗುವ ನಂಬಿಕೆ ಅವನಿಗಿಲ್ಲ
ಕತ್ತಿ ತನಗಾಗಿ ಕಾದಿದೆಯೆಂಬುದರಲ್ಲಿ
ಸಂದೇಹವಿಲ್ಲ.
23 ಹೊಟ್ಟೆಪಾಡಿಗಾಗಿ ಹುಡುಕುತ್ತಾ
ಅಲೆದಾಡುತ್ತಾನೆ
ಆ ಕತ್ತಲ ದಿನ ಹತ್ತಿರವಿದೆಯೆಂದು
ಅರಿತಿದ್ದಾನೆ.
24 ಸಂಕಟ–ಪೇಚಾಟ ಅವನನ್ನು ಕಾಡುತ್ತಿರುತ್ತವೆ
ಯುದ್ಧಸನ್ನದ್ಧ ರಾಜರಂತೆ ಅವನಿಗೆ ಸೋಲನು
ತರುತ್ತವೆ.
25 ದೇವರಿಗೆ ವಿರುದ್ಧ ಅವನು
ಮುಷ್ಟಿ ತೋರಿದನಲ್ಲವೆ?
ಸರ್ವಶಕ್ತನನು ಧಿಕ್ಕರಿಸುತಾ ಶೂರನಂತೆ
ಮೆರೆದನಲ್ಲವೆ?
26 ಗಟ್ಟಿಮುಟ್ಟಾದ ಗುರಾಣಿಯನ್ನು
ಹಿಡಿದುಕೊಂಡೇ
ಆತನ ಮೇಲೆ ಬೀಳಲು ತಲೆ ನಿಮಿರಿ
ಓಡಿದನಲ್ಲವೆ?
27 ಕೊಬ್ಬೇರಿತ್ತು ಅವನ ಮೋರೆಯಲಿ
ಬೊಜ್ಜು ಬೆಳೆದಿತ್ತು ಅವನ ಸೊಂಟದಲಿ.
28 ಹಾಳು ಮಾಡಿದ್ದ ಪಟ್ಟಣಗಳಲ್ಲೆ ಅವನು
ಸೇರಿಕೊಂಡಿದ್ದ
ಯಾರೂ ವಾಸಮಾಡದೆ ದಿಬ್ಬವಾಗಿ
ಮಾರ್ಪಟ್ಟಿದ್ದ
ಶಾಪಗ್ರಸ್ತ ಮನೆಗಳಲ್ಲಿ ವಾಸಮಾಡಿಕೊಂಡಿದ್ದ.
29 ಇಂಥವನು ಸಿರಿವಂತನಾಗಿ ಉಳಿಯನು
ಅವನ ಆಸ್ತಿ ಸ್ಥಿರವಾಗಿ ನಿಲ್ಲದು
ಅವನು ಧರೆಯಲ್ಲಿ ಬೇರೂರಿ ಬೆಳೆಯನು.
30 ಕತ್ತಲೊಳಗಿಂದ ಪಾರಾಗನವನು
ಸುಡುವುದು ಕಿಚ್ಚು ಅವನ ಕೊಂಬೆಯನು
ಬಡಿದೊಯ್ಯುವುದು ಗಾಳಿ ಅದರ ಫಲವನು.
31 ವ್ಯರ್ಥವಾದುದನು ನಂಬಿ ಅವನು
ಮೋಸ ಹೋಗದಿರಲಿ
ಇಲ್ಲವಾದರೆ ಅವನಿಗೆ ಸಿಗುವ ಪ್ರತಿಫಲ

ವ್ಯರ್ಥವೇ ಸರಿ.
32 ಅವನ ಬುಡ ಒಣಗುವುದು ಕಾಲಕ್ಕೆ ಮುಂಚೆ
ಪಚ್ಚೆಪಸಿರಾಗದು ಅವನ ಕೊಂಬೆ.
33 ಅವನಾಗುವನು ಮಾಗದ ಹಣ್ಣನ್ನು ಕಳೆದು
ಕೊಂಡ ದ್ರಾಕ್ಷಿಬಳ್ಳಿಯಂತೆ
ಹೂಗಳನ್ನು ಉದುರಿಸಿಕೊಂಡ ಓಲಿವ್ ಎಣ್ಣೆ
ಮರದಂತೆ.
34 ದುರುಳರ ಸಂಘವದು ಬರಡಾದುದು
ಸುಡುವುದು ಬೆಂಕಿ ಲಂಚಕೋರರ ಗುಡಾರವನು.
35 ಉದರದಲ್ಲಿ ವಂಚನೆಯನ್ನು ಗರ್ಭಧರಿಸುವರು
ಕೇಡನು ಹಡೆವೆನೆಚಿದೆಣಿಸಿ ಶೂನ್ಯವ ಹೆರುವುದ
ನೋಡು.

**16** ಆಗ ಯೋಬನು ಕೊಟ್ಟ ಉತ್ತರ:

2 "ಇಂಥ ಎಷ್ಟೋ ಮಾತುಗಳನ್ನು
ಕೇಳಿದ್ದೇನೆ
ನೀವೆಲ್ಲರು ಆದರಿಸುವವರಲ್ಲ,
ಬಾಧಿಸುವವರೇ.
3 ನಿಮ್ಮ ಗಾಳಿ ಮಾತುಗಳಿಗೆ ಇತಿಮಿತಿ
ಬೇಡವೇನು?
ಇಂಥ ಉತ್ತರ ಕೊಡಲು ನಿಮ್ಮನ್ನು
ಒತ್ತಾಯಪಡಿಸಿದ್ದೇನೆ?
4 ನನ್ನ ಸ್ಥಿತಿಯಲ್ಲಿ ನೀವಿದ್ದಿದ್ದರೆ
ನಾನೂ ಮಾತಾಡಬಹುದಿತ್ತು ನಿಮ್ಮಂತೆ.
ನಿಮಗೆ ವಿರುದ್ಧ ನಾನೂ ಮಾತು
ಬೆಳೆಸಬಹುದಿತ್ತು
ನಿಮ್ಮ ವಿಷಯದಲ್ಲಿ ನಾನೂ
ತಲೆಯಾಡಿಸಬಹುದಿತ್ತು.
5 ನಾನು ನಿಮಗೆ ಬಾಯಿಮಾತಿನಿಂದ ಧೈರ್ಯ
ಹೇಳಬಹುದಿತ್ತು
ತುಟಿಮಾತುಗಳಿಂದ ಆದರಿಸಿ ಸಾಂತ್ವನ
ನೀಡಬಹುದಿತ್ತು.
6 ನಾನು ಮಾತಾಡಿದರೆ ನನ್ನ ನೋವು
ನಿವಾರಣೆಯಾಗದು
ನಾನು ಸುಮ್ಮನಿದ್ದರೆ ನನ್ನ ಕಷ್ಟ
ಪರಿಹಾರವಾಗದು.
7 ದೇವರೇ, ದುಃಖದಿಂದ ನೀ ನನ್ನನ್ನು ಸವೆಸಿರುವೆ
ನನ್ನ ಬಂಧುಬಳಗದವರನ್ನು ಸದೆಬಡಿದಿರುವೆ.
8 ನನ್ನ ಮುಖವೆಲ್ಲ ಸುಕ್ಕು ಹಿಡಿದಿದೆ

ನನ್ನ ಸಣಕಲುತನವೆ ನನಗೆ ವಿರುದ್ಧ
ಸಾಕ್ಷಿಯಾಗಿದೆ.
9 ದೇವರ ಸಿಟ್ಟು ಸೀಳಿ ಹಾಳುಮಾಡುತ್ತಿದೆ
ಆತ ನನ್ನನ್ನು ನೋಡಿ ಹಲ್ಲುಕಡಿದಿದ್ದಾನೆ
ನನ್ನ ವೈರಿ ನನ್ನನ್ನು ದುರುಗುಟ್ಟಿ
ನೋಡುತ್ತಿದ್ದಾನೆ.
10 ಜನರು ಬಾಯಿಕಿಸಿದು ನನ್ನನು ಅಣಕಿಸುತ್ತಾರೆ
ಛೀಮಾರಿ ಹಾಕಿ ನನ್ನ ದವಡೆಗೆ ಬಡಿದಿದ್ದಾರೆ
ನನಗೆ ವಿರುದ್ಧವಾಗಿ ಗುಂಪುಕಟ್ಟಿದ್ದಾರೆ.
11 ದೇವರು ನನ್ನನ್ನೊಪ್ಪಿಸಿಬಿಟ್ಟಿದ್ದಾನೆ ತುಂಟರಿಗೆ
ನನ್ನನ್ನು ಎಸೆದು ಬಿಟ್ಟಿದ್ದಾನೆ ದುಷ್ಟರ ಕೈಗೆ.
12 ನೆಮ್ಮದಿಯಾಗಿದ್ದ ನನ್ನನು ಒಡೆದು
ಬಡಿದುಹಾಕಿದ್ದಾನೆ
ಕುತ್ತಿಗೆ ಹಿಸುಕಿ ನನ್ನನು ತುಂಡಾಗಿಸಿದ್ದಾನೆ.
ಬಾಣಬಿಡಲು ನನ್ನನು
ಗುರಿಹಲಗೆಯಾಗಿಸಿಕೊಂಡಿದ್ದಾನೆ.
13 ಮುತ್ತಿಕೊಂಡಿವೆ ನನ್ನನು ಆತನ ಬಾಣಗಳು
ನಿರ್ದಯೆಯಿಂದ ಅಂತರಂಗವನ್ನು
ಇರಿಯುತ್ತಿಹನು
ನೆಲದ ಮೇಲೆ ನನ್ನ ಪಿತ್ತವನು ಸುರಿಸುತ್ತಿಹನು.
14 ಪೆಟ್ಟಿನ ಮೇಲೆ ಪೆಟ್ಟು ಕೊಟ್ಟು ನನ್ನನು
ಬಡಕಲಾಗಿಸಿಹನು
ಯುದ್ಧಶೂರನಂತೆ ಓಡಿಬಂದು ಮೇಲೆ
ಬೀಳುತ್ತಿಹನು.
15 ಗೋಣಿತಟ್ಟನ್ನು ಹೊಲಿದು ಮೈಗೆ
ಹಾಕಿಕೊಂಡಿರುವೆ
ನನ್ನ ಕೊಂಬನ್ನು ಬೂದಿಯೊಳಗೆ
ಬಾಗಿಸಿಟ್ಟಿರುವೆ.
16 ಕಣ್ಣೀರು ಸುರಿಸಿ ನನ್ನ ಮುಖ ಕೆಂಪೇರಿದೆ
ನನ್ನ ಕಣ್ಣುಗಳಿಗೆ ಕಾರಿರುಳು ಕವಿದಿದೆ.
17 ಆದರೂ ನಾನು ಹಿಂಸಾಚಾರಕ್ಕೆ ಕೈಹಾಕಿಲ್ಲ
ನಾನು ಮಾಡುವ ಪ್ರಾರ್ಥನೆ ನಿರ್ಮಲ.
18 ಪೊಡವಿಯೇ, ನನ್ನ ನೆತ್ತರನ್ನು ನೀ ಮುಚ್ಚಬೇಡ
ನಾನು ಮಾಡುತ್ತಿರುವ ಮೊರೆಯನ್ನು
ನಿಲ್ಲಿಸಬೇಡ.
19 ಇಗೋ, ನನ್ನ ಕಡೆಯ ಸಾಕ್ಷಿ ಸ್ವರ್ಗದಲ್ಲಿರುವನು
ನನ್ನ ಪರವಾದಿ ಮೇಲಣ ಲೋಕದಲ್ಲಿರುವನು.
20 ಗೆಳೆಯರು ನನ್ನನ್ನು ಹೀಗಳೆಯುತ್ತಿರುವರು
ನಾನೋ ಸುರಿಸುತ್ತಿರುವೆ ದೇವರ ಮುಂದೆ
ಕಣ್ಣೀರು.

21 ಇದು ನನಗೆ ನ್ಯಾಯ ದೊರಕಿಸಲಿ, ದೇವರ
ಮುಂದೆ
ತನ್ನ ಮಿತ್ರನಿಗಾಗಿ ಒಬ್ಬನು ವಾದಿಸುವಂತೆ.
22 ನನ್ನ ವರ್ಷಗಳು ಕಳೆದು ಹೋಗುತ್ತಿವೆ
ಹಿಂತಿರುಗಲಾಗದ ಹಾದಿಯನು ನಾನು
ಹಿಡಿಯಲಿರುವೆ.

**17** "ನನಗೆ ಉಸಿರು ಕಟ್ಟುತ್ತಿದೆ
ನನ್ನ ದಿನಗಳು ಮುಗಿದಿವೆ
ಸಮಾಧಿ ನನಗಾಗಿ ಕಾದಿದೆ.
2 ಚೇಷ್ಟೆಗಾರರಿದ್ದಾರೆ ನನ್ನ ಸುತ್ತಮುತ್ತ
ನನ್ನ ಕಣ್ಮುಂದಿದೆ ಸದಾ ಅವರ ಕೆಣಕಾಟ.
3 ಓ ದೇವರೇ, ನೀನೆ ನನಗೆ ಈಡು ಕೊಡುವವನು
ನಿನ್ನನ್ನು ಬಿಟ್ಟರೆ ನನಗಿಲ್ಲ
ಒಪ್ಪಂದಮಾಡುವವರಾರು.
4 ಜ್ಞಾನ ಪ್ರವೇಶಿಸದಂತೆ ನೀ ಅವರ ಮನಸ್ಸನು
ಮುಚ್ಚಿರುವೆ
ಹೀಗೆ ಅವರು ಜಯಶೀಲರಾಗದಂತೆ
ತಡೆದಿರುವೆ.
5 ಯಾವನು ಸ್ವಾರ್ಥಕ್ಕಾಗಿ ಮಿತ್ರನ ಮೇಲೆ
ಹೊರಿಸುತ್ತಾನೋ ದೂರು
ಅಂಥವನ ಮಕ್ಕಳ ಕಣ್ಣುಗಳು
ಮಂಕಾಗಿಹೋಗದಿರವು.
6 ದೇವರು ನನ್ನನು ಈಡಾಗಿಸಿದ್ದಾನೆ ಅನ್ಯರ
ಕಟ್ಟುಗಾದೆಗೆ
ನನ್ನ ಮುಖ ಗುರಿಯಾಗಿದೆ ಜನರ
ಉಗುಳಾಟಕ್ಕೆ.
7 ನನ್ನ ಕಣ್ಣು ದುಃಖದಿಂದ ಮೊಬ್ಬಾಗಿವೆ
ಅಂಗಗಳೆಲ್ಲ ನೆರಳಂತೆ ನಿಸ್ಸಾರವಾಗಿವೆ.
8 ಇದನ್ನು ಕಂಡು ಸಜ್ಜನರು ನಿಬ್ಬೆರಗಾಗಿದ್ದಾರೆ
ದುರ್ಜನರ ಬಗ್ಗೆ ನಿರಪರಾಧಿ
ಎಚ್ಚರಗೊಂಡಿದ್ದಾನೆ.
9 ಸನ್ಮಾರ್ಗದಲ್ಲಿ ಮುಂದುವರೆವವನು ಸಜ್ಜನನು
ಬಲಗೊಳ್ಳುತ್ತಲೇ ಇರುವನು ಶುದ್ಧಹಸ್ತನು.
10 ನೀವೆಲ್ಲರೂ ಮತ್ತೆ ಬನ್ನಿ ವಾದಕ್ಕೆ
ನಿಮ್ಮಲ್ಲಿ ಜ್ಞಾನಿಯೊಬ್ಬನನ್ನೂ ನಾ ಕಾಣೆ.
11 ಮುಗಿದುಹೋದವು ನನ್ನ ದಿನಗಳು
ಭಂಗವಾದವು ನನ್ನ ಗುರಿಧ್ಯೇಯಗಳು.
12 ಇರುಳನ್ನು ಹಗಲೆಂದು ಸಾಧಿಸುತ್ತಿರುವವರು

ಕತ್ತಲಿಂದಲೇ ಬೆಳಕು ಬೇಗ ಬರಲಿದೆ
ಎನ್ನುತ್ತಿರುವರು.
13 ಪಾತಾಳವನ್ನೇ ನನ್ನ ಮನೆಯೆಂದು ನಾನು
ಭಾವಿಸಿದೆನಾದರೆ
ಕತ್ತಲಲ್ಲೇ ನನ್ನ ಹಾಸಿಗೆಯನ್ನು
ಹಾಕಿಕೊಂಡೆನಾದರೆ,
14 ಸಮಾಧಿಯನ್ನೇ 'ನನ್ನ ತಾಯಿ, ನನ್ನ ತಂಗಿ'
ಎಂದೆನಾದರೆ.
15 ನನ್ನ ನಂಬಿಕೆ–ನಿರೀಕ್ಷೆ ಎಲ್ಲಿಯದು?
ನನ್ನ ಭಾಗ್ಯವನ್ನು ಯಾರು ನೋಡಿಯಾರು?
16 ಇವು ನನ್ನ ಸಂಗಡ ಪಾತಾಳಕ್ಕೆ ಬರಲಾದೀತೆ?
ನಾವು ಜೊತೆಯಾಗಿ ಮಣ್ಣಿಗೆ ಸೇರಲಾದೀತೆ?"

**18** ಆಗ ಶೂಹ್ಯನಾದ ಬಿಲ್ದದನು
ಹೀಗೆಂದು ಉತ್ತರಿಸಿದ:
2 "ಯೋಬನೇ, ಇನ್ನೆಷ್ಟರವರೆಗೆ ಮಾತುಗಳಿಗಾಗಿ
ಹೊಂಚುಹಾಕುತ್ತಿರುವೆ?
ಮೊದಲು ಆಲೋಚಿಸಿನೋಡು, ಆಮೇಲೆ ಬಾ
ಮಾತುಕತೆಗೆ.
3 ನಮ್ಮನ್ನು ಮೃಗಗಳೆಂದು ಎಣಿಸಿರುವೆಯಾ?
ನಿನ್ನ ದೃಷ್ಟಿಯಲಿ ನಾವೇನು ಅಷ್ಟು ದಡ್ಡರೆ?
4 ಸಿಟ್ಟಿನಿಂದ ನಿನ್ನನ್ನೆ ಸೀಳಿಕೊಳ್ಳುತ್ತಿರುವವನೇ,
ನಿನ್ನ ನಿಮಿತ್ತ ಇಡೀ ಲೋಕ ಬಿಕೋ ಎನ್ನಬೇಕೆ?
ಬೆಟ್ಟಗುಡ್ಡಗಳು ಸ್ಥಳಬಿಟ್ಟು ಜರುಗಬೇಕೆ?
5 ಹೌದು, ದುರುಳನ ದೀಪ ಆರಿಹೋಗುವುದು
ಅವನ ಒಲೆಯು ಉರಿಯದೆ ಹೋಗುವುದು.
6 ಅವನ ಗುಡಾರದ ಬೆಳಕು ಕತ್ತಲಾಗುವುದು
ಅವನ ಮೇಲಣ ಸೊಡರು ನಂದಿಹೋಗುವುದು.
7 ಅವನ ಬಿರುಸಾದ ಹೆಜ್ಜೆಗಳು ಜಡವಾಗುವುವು
ಅವನು ಹಾಕಿದ ಯೋಜನೆಗಳು ಅವನನ್ನೆ ಕೆಡವಿ
ಹಾಗುವುವು.
8 ಅವನನ್ನು ಅವನ ಕಾಲುಗಳೆ ಬಲೆಗೆ
ಬೀಳಿಸುವುವು
ಅವನನ್ನು ಪಾಳುಗುಂಡಿಯ ಮೇಲೆ ನಡೆಸುವುವು.
9 ಕತ್ತರಿಬೋನು ಅವನ ಹಿಮ್ಮಡಿಯನ್ನು
ಕಚ್ಚುವುದು
ಆ ಕಳ್ಳಉರುಲು ಅವನನ್ನು ಸಿಕ್ಕಿಸಿಕೊಳ್ಳುವುದು.
10 ಅವನಿಗಾಗಿ ಜಾಲವನ್ನು ಅವಿತಿಡಲಾಗಿದೆ
ದಾರಿಯಲಿ
ಅವನಿಗಾಗಿ ಪಾಶವನ್ನು ಹೂತಿಡಲಾಗಿದೆ

ನೆಲದಲಿ.
11 ಸುತ್ತಲಿನ ಅಪಾಯಗಳು ಅವನನ್ನು
ಹೆದರಿಸುತ್ತವೆ
ಅವನ ಹಿಮ್ಮಡಿ ತುಳಿಯುತ್ತಾ ಅವು ಬೆನ್ನು
ಹತ್ತುತ್ತವೆ.
12 ಕುಂದಿ ಹೋಗುವುದು ಅವನ ಕಿಮ್ಮತ್ತು
ಅವನು ಬೀಳುವುದನ್ನೇ ಕಾದಿದೆ ಆಪತ್ತು.
13 ರೋಗರುಜಿನಗಳು ಅವನ ಚರ್ಮವನು
ಚೂರುಚೂರಾಗಿ ತಿಂದುಬಿಡುವುವು
ಅಂಗಾಂಗವಾಗಿ ಮೃತ್ಯುಕಾರಕ ರೋಗವು
ಅವನನ್ನು ನುಂಗಿಬಿಡುವುದು.
14 ನೆಮ್ಮದಿಯ ಗುಡಾರದಿಂದ ಅವನನ್ನು
ಎಳೆದು ಹಾಕುವುದು ಹೊರಗೆ
ಸಾಗಿಸಿಕೊಂಡು ಹೋಗುವುದವನನ್ನು
ಅತಿಭಯಂಕರ ರಾಜನೆಡೆಗೆ.
15 ಅನ್ಯಜನರು ವಾಸಮಾಡುವರು ಅವನ
ಗುಡಾರದೊಳಗೆ
ಗಂಧಕವನ್ನು ಸುರಿಸಲಾಗುವುದು ಅವನ
ಮನೆಯ ಮೇಲೆ.
16 ಒಣಗುವುದು ಅವನ ಬುಡ ಕೆಳಗಡೆ
ಬಾಡುವುದು ಅವನ ರೆಂಬೆ ಮೇಲ್ಗಡೆ.
17 ಅವನ ಸ್ಮರಣೆ ಅಳಿದು ಹೋಗುವುದು ಜಗದಲಿ
ಇಲ್ಲವಾಗುವುದು ಅವನ ಹೆಸರು ನಾಡಿನಲಿ.
18 ಅವನನ್ನು ಬೆಳಕಿನಿಂದ ತಳ್ಳುವರು ಕತ್ತಲಿಗೆ
ಅಟ್ಟಿಬಿಡುವರು ಅವನನ್ನು ಲೋಕದಿಂದಲೆ.
19 ಅವನ ಮಗ, ಮೊಮ್ಮಗರಾರೂ ಇರರು
ಸ್ವಜನರಲಿ
ಯಾರೂ ಉಳಿಯರು ಅವನು ವಾಸಿಸಿದ
ಸ್ಥಳದಲಿ.
20 ಅವನ ಗತಿಯನು ಕೇಳಿ ಚಕಿತಗೊಳ್ವರು
ಪಡುವಣದವರು
ಅಂತೆಯೇ ಭಯಭ್ರಾಂತರಾಗುವರು
ಮೂಡಣದವರು.
21 ಕೇಡಿಗರ ನಿವಾಸಗಳ ಗತಿ ಹೀಗೆಯೇ
ದೇವರನು ಅಲಕ್ಷಿಸುವವನ ಸ್ಥಿತಿ ಇದುವೇ."

**19** ಆಗ ಯೋಬನು ಮತ್ತೆ ಹೀಗೆಂದನು:

2 "ಇನ್ನೆಷ್ಟರವರೆಗೆ ನೀವು ನನ್ನನ್ನು
ನೋಯಿಸುವಿರಿ?

ನಿಮ್ಮ ಮಾತುಗಳಿಂದ ನನ್ನನು
ನಸುಕುತ್ತಿರುವಿರಿ?
3 ಈವರೆಗೆ ನನಗೆ ಕೇಡು ಮಾಡಿದ್ದಕ್ಕೆ
ಹತ್ತಾರು ಸಾರಿ ನನ್ನನ್ನು ಅವಮಾನಿಸಿದ್ದಕ್ಕೆ
ನಿಮಗಾಗುವುದಿಲ್ಲವೆ ನಾಚಿಕೆ?
4 ನಿಶ್ಚಯವಾಗಿ ನಾನು ತಪ್ಪುಳ್ಳವನಾದರೆ
ಅದರಿಂದ ನಿಮಗೇನು? ಆ ತಪ್ಪು ನನ್ನದೆ.
5 ನನಗಿಂತ ನೀವೇ ಮೇಲೆಂದು ಭಾವಿಸುತ್ತೀರೋ?
ನನ್ನ ದೀನ ಸ್ಥಿತಿಗೆ ನನ್ನ ದೋಷವೇ
ಕಾರಣವೆನ್ನುತ್ತೀರೋ?
6 ನನಗೆ ಅನ್ಯಾಯವಾಗಿರುವುದು ದೇವರಿಂದಲೇ
ನನ್ನ ಸುತ್ತಲು ಬಲೆಯೊಡ್ಡಿರುವವನು ಆತನೇ!
ನಾನು ಹೇಳುವ ಈ ಮಾತು ತಿಳಿದಿರಲಿ ನಿಮಗೆ:
7 'ಇದೋ ಹಿಂಸಾಚಾರ' ಎಂದು ನಾನು
ಕೂಗಿಕೊಂಡರೂ ಕೇಳುವವರಿಲ್ಲ
ನಾನು ಮೊರೆಯಿಟ್ಟರೂ ನನಗೆ ನ್ಯಾಯ
ದೊರಕುವುದಿಲ್ಲ.
8 ನಾನು ಮುಂದೆ ಹೋಗದಂತೆ ದೇವರು
ಅಡ್ಡಗೋಡೆ ಹಾಕಿದ್ದಾನೆ
ನನ್ನ ಹಾದಿಗೆ ಕತ್ತಲೆ ಕವಿಯುವಂತೆ
ಮಾಡಿದ್ದಾನೆ.
9 ನನ್ನ ಘನತೆಯನ್ನು ಸುಲಿದುಬಿಟ್ಟಿದ್ದಾನೆ
ನನ್ನ ಕಿರೀಟವನ್ನು ಕಿತ್ತು ಹಾಕಿದ್ದಾನೆ.
10 ನಾಲ್ದೆಸೆಯಿಂದ ಧಾಳಿಮಾಡಿ ನಾಶಮಾಡಿದ್ದಾನೆ
ಮರ ಕೀಳುವ ಪ್ರಕಾರ ನನ್ನ ನಿರೀಕ್ಷೆಯನು
ಕಿತ್ತುಬಿಟ್ಟಿದ್ದಾನೆ.
11 ತನ್ನ ಕೋಪಾಗ್ನಿಯನು ನನ್ನ ಮೇಲೆ
ಧಗಧಗಿಸಿದ್ದಾನೆ
ನನ್ನನ್ನು ತನ್ನ ವೈರಿಯೆಂದೇ ಪರಿಗಣಿಸಿದ್ದಾನೆ.
12 ಮುನ್ನುಗ್ಗಿ ಬಂದಿದೆ ಆತನ ಸೇನೆ ಒಟ್ಟಿಗೆ
ದಿಬ್ಬಹಾಕಿಕೊಂಡಿದೆ ಅದು ನನ್ನೆದುರಿಗೆ
ನನ್ನ ಗುಡಾರದ ಎಲ್ಲಾ ಕಡೆಗೆ ದಂಡು ಇಳಿದಿದೆ.
13 ಸೋದರರನ್ನೂ ನನ್ನಿಂದ ದೇವರು
ದೂರವಾಗಿರಿಸಿದ್ದಾನೆ
ಪರಿಚಿತರೆಲ್ಲರು ನನ್ನನು ತೊರೆದುಬಿಟ್ಟಿದ್ದಾರೆ.
14 ನನ್ನನು ಬಂಧುಬಳಗದವರು ಕೈ ಬಿಟ್ಟಿದ್ದಾರೆ.
ಆಪ್ತಮಿತ್ರರೂ ನನ್ನನು ಮರೆತುಬಿಟ್ಟಿದ್ದಾರೆ.
15 ಮನೆಯ ದಾಸದಾಸಿಯರಿಗೇ ನಾನು ಅನ್ಯನಾದೆ
ಅವರ ಕಣ್ಣಿಗೇ ನಾನು ಪರದೇಶಿಯನಾದೆ.
16 ಕರೆದರೂ ನನ್ನ ಸೇವಕರು ಉತ್ತರಕೊಡುವುದಿಲ್ಲ

ಬಾಯಿತೆರೆದು ಬೇಡಿಕೊಳ್ಳುವ ಸ್ಥಿತಿ
ನನ್ನದಾಯಿತಲ್ಲಾ!
17 ನನ್ನುಸಿರು ನನ್ನ ಧರ್ಮಪತ್ನಿಗೆ ಅಸಹ್ಯವಾಗಿದೆ
ನನ್ನ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಿಗೇ
ಹೇಸಿಕೆಯಾದೆ.
18 ಚಿಕ್ಕವರು ಕೂಡ ನನ್ನನು ತಿರಸ್ಕರಿಸುತ್ತಾರೆ
ನಾನು ಕಾಣಿಸಿಕೊಂಡಾಗಲೆಲ್ಲ ಹಾಸ್ಯ
ಮಾಡುತ್ತಾರೆ.
19 ನನ್ನ ನೋಡಿ ಆಪ್ತಮಿತ್ರರೆಲ್ಲರು
ಹೇಸಿಕೊಳ್ಳುತ್ತಾರೆ
ನನ್ನ ಮೇಲೆ ನನ್ನ ಪ್ರೀತಿಪಾತ್ರರೂ
ತಿರುಗಿಬಿದ್ದಿದ್ದಾರೆ.
20 ಕೇವಲ ಎಲುಬೂ ತೊಗಲೂ ಆಗಿಬಿಟ್ಟಿದ್ದೇನೆ
ಮೃತ್ಯುವಿನ ದವಡೆಗೆ ಸಿಕ್ಕಿಕೊಂಡಿದ್ದೇನೆ.
21 ಕರುಣೆ ತೋರಿ ಗೆಳೆಯರೇ, ಕರುಣೆತೋರಿ
ನನಗೆ!
ಏಕೆಂದರೆ ದೇವರ ಕೈ ನನ್ನನು ದಂಡಿಸಿದೆ.
22 ದೇವರಂತೆ ನೀವೂ ನನ್ನನು ದಂಡಿಸುವುದೇಕೆ?
ನನ್ನನ್ನು ಛಿನ್ನಪನ್ನವಾಗಿಸಿದ್ದೀರಿ, ಇದು ಸಾಲದೆ
ನಿಮಗೆ?
23 ನನ್ನ ಮಾತುಗಳನು ಬರೆದಿಟ್ಟರೆ ಎಷ್ಟೋ
ಮೇಲು!
ಸುರುಳಿಯಲಿ ಅದು ಲಿಖಿತವಾದರೆ ಎಷ್ಟೋ
ಲೇಸು !
24 ಕಬ್ಬಿಣದ ಉಳಿಯಿಂದ ಬಂಡೆಯ ಮೇಲೆ ಕೆತ್ತಿ,
ಸೀಸೆ ಎರೆದು
ಶಾಶ್ವತ ಶಾಸನವಾಗಿಸಿದ್ದರೆ ಎಷ್ಟೋ ಒಳಿತು.
25 ನಾನಂತು ಬಲ್ಲೆ, ನನ್ನ ಉದ್ಧಾರಕ
ಜೀವಸ್ವರೂಪನೆಂದು
ಕಡೆಯ ದಿನದಂದು ಧರೆಗಾತ ಇಳಿದು
ಬರುವನೆಂದು.
26 ನನ್ನ ಚರ್ಮ ಹೀಗೆ ಬಿರಿದು ಹಾಳಾದರೂ
ದೇಹಧಾರಿಯಾಗಿಯೇ ನಾನು ನೋಡುವೆನು
ದೇವರನು.
27 ಕಣ್ಣಾರೆ ಆತನನ್ನು ಕಾಣುವೆನು
ಮತ್ತೊಬ್ಬನಾಗಲ್ಲ, ನಾನಾಗೇ ನೋಡುವೆನು.
ಹಂಬಲಿಕೆಯಿಂದ ಕುಂದಿದೆ ನನ್ನ ಅಂತರಂಗವು.
28 'ಅವನನ್ನು ಆದಷ್ಟೂ ಹಿಂಸೆ ಮಾಡೋಣ
ಅವನ ದುರ್ಗತಿಗೆ ಮೂಲಕಾರಣ
ಹುಡುಕೋಣ'

ಎಂದು ನೀವು ಆಡಿಕೊಳ್ಳುವ ಕಾರಣ.
29 ಭಯಪಡಿ ನೀವು ಕತ್ತಿಗೆ
ಪಾಪದ ಮೇಲೆ ದೇವರ ಕೋಪ
ಬರಮಾಡುವಾ ಕತ್ತಿಗೆ
ನ್ಯಾಯತೀರ್ಪು ಉಂಟೆಂದು ಆಗ ತಿಳಿವುದು
ನಿಮಗೆ.”

**20** ಬಳಿಕ ನಾಮಾಥ್ಯನಾದ ಚೋಫರನು
ಹೀಗೆಂದನು:
2 “ನಿನಗೆ ಉತ್ತರ ಕೊಡಲು ನಾನು
ತವಕಪಡುತ್ತಿರುವೆ
ನನ್ನ ನೊಂದ ಮನ ನನಗೆ ಪ್ರತ್ಯುತ್ತರ
ಹೇಳಿಕೊಡುತ್ತದೆ:
3 ನನಗೆ ಅವಮಾನ ತರುವ ನಿನ್ನ ಖಂಡನೆಯನು
ಕೇಳಿದ್ದೇನೆ
ನನ್ನ ಮನ ತನ್ನ ವಿವೇಚನೆ ಕಲಿಸಿದ ಉತ್ತರವನು
ತಿಳಿಸುತ್ತಿದೆ.
4 ಆದಿಯಿಂದಲೆ, ನರನನ್ನು ಧರೆಯಮೇಲೆ
ಇರಿಸಿದಂದಿನಿಂದಲೆ,
ನಡೆದು ಬರುತ್ತಿರುವ ಈ ವಿಷಯ ನಿನಗೆ
ತಿಳಿಯದೆ?
5 ದುಷ್ಟನ ಜಯಘೋಷ ಅಲ್ಪಕಾಲದ್ದು
ಭ್ರಷ್ಟನ ಉಲ್ಲಾಸ ಕ್ಷಣಿಕವಾದದ್ದು.
6 ಅವನ ಪ್ರತಿಷ್ಠೆ ಆಕಾಶಕ್ಕೆ ಏರಿದರೂ
ಅವನ ತಲೆ ಮೋಡಗಳನು ಮುಟ್ಟಿದರೂ,
7 ತನ್ನ ಮಲದ ಹಾಗೆ ನಿತ್ಯಕ್ಕು ಅವನು
ನಶಿಸಿಹೋಗುವನು
ಅವನನು ಅರಿತವರೆಲ್ಲರೂ “ಅವನೆಲ್ಲಿಯೋ!”
ಎಂದು ಹೇಳುವರು.
8 ಸ್ವಪ್ನದಂತೆ ಅವನು ಸಿಗದೆ ಹಾರಿಹೋಗುವನು
ರಾತ್ರಿಯ ಕನಸಿನಂತೆ ಓಡಿಹೋಗುವನು.
9 ಕಂಡವನ ಕಣ್ಣಿಗೆ ಅವನು ಮತ್ತೆ ಕಾಣಿಸನು
ಅವನ ನಿವಾಸ ಮತ್ತೆ ಅವನನು ನೋಡದು.
10 ಅವನ ಮಕ್ಕಳು ಬಡವರಿಗೆ ಪರಿಹಾರವನು
ತೆರುವರು
ಅವನ ಕೈಗಳೆ ಅವನಾಸ್ತಿಯನು
ಹಿಂತಿರುಗಿಸಬೇಕಾಗುವುದು.
11 ಯೌವನ ಅವನ ದೇಹದಲ್ಲಿ ತುಂಬಿತ್ತು
ಅದು ಕೂಡ ಅವನ ಸಮೇತ ಧೂಳಿನಲಿ

ಮಲಗುವುದು.
12 ಕೆಡಕುತನ ಸಿಹಿಯಾಗಿತ್ತು ಅವನ ಬಾಯಿಗೆ
ಬಚ್ಚಿಟ್ಟುಕೊಂಡಿದ್ದನು ಅದನ್ನು ನಾಲಿಗೆ ಕೆಳಗೆ.
13 ಅದನ್ನು ಬಿಟ್ಟುಕೊಡಲು ಅವನಿಗೆ ಇಷ್ಟವಿಲ್ಲ
ಬಾಯಲ್ಲೇ ಇಟ್ಟುಕೊಳ್ಳುತ್ತಾನೆ ಚಪ್ಪರಿಸುತ್ತಾ.
14 ಆದರೆ ಆ ತಿಂಡಿ ತಿಂದ ಮೇಲೆ ಮಾರ್ಪಡುವುದು
ಅವನ ಕರುಳೊಳಗೆ ನಾಗರವಿಷವಾಗುವುದು.
15 ನುಂಗಿದ ಗಂಟನು ಅವನು ಹೊರಗೆ ಕಕ್ಕುವನು
ಹೊಟ್ಟೆಯಿಂದ ದೇವರು ಅದನು
ಹೊರಡಿಸುವನು.
16 ಅವನು ಹೀರುವುದು ನಾಗರವಿಷವನು
ಸರ್ಪದ ನಾಲಿಗೆ ಕೊಲ್ಲುವುದು ಅವನನು.
17 ಅವನು ನೋಡನು ಎಣ್ಣೆ ಹರಿವ ಕಾಲುವೆಗಳನು
ಜೇನು ಹಾಲು ತುಂಬಿ ಹರಿವ ನದಿಗಳನು.
18 ತಾನು ದುಡಿದು ಗಳಿಸಿದ್ದನ್ನು ತಿಂದು
ಅನುಭವಿಸಲಾರನು
ಅದು ಪರರ ಪಾಲಾಗುವುದು
ವ್ಯಾಪಾರದಿಂದ ಬಂದ ವರಮಾನ ಅವನಿಗೆ
ಆನಂದ ತರದು.
19 ಏಕೆಂದರೆ ಬಡವರನು ತುಳಿದು ತೊರೆದುಬಿಟ್ಟ
ತಾನು ಕಟ್ಟದ ಮನೆಯನು ಕಿತ್ತುಕೊಂಡುಬಿಟ್ಟ.
20 ಅವನ ಆಕಾಂಕ್ಷೆಗೆ ತೃಪ್ತಿಯೇ ಇಲ್ಲ
ಅವನ ಸಂತಾನಕ್ಕೆ ಉಳಿಗಾಲವಿಲ್ಲ.
22 ಸಮೃದ್ಧಿಯಿಂದಿರುವಾಗಲೇ ಕೊರತೆ ಅವನನ್ನು
ಕಾಡುವುದು
ಶ್ರಮಜೀವಿಗಳೆಲ್ಲರ ಕೈ ಅವನ ಮೇಲೆ
ಎರಗುವುದು.
23 ಅವನು ಹೊಟ್ಟೆಯನು ತುಂಬಿಸಿಕೊಳ್ಳುವಾಗಲೇ
ದೇವರು ಸುರಿಸುವರು ಕೋಪಾಗ್ನಿಯನು
ಆಹಾರದಂತೆ.
24 ಕಬ್ಬಿಣದ ಆಯುಧಕ್ಕೆ ಹೆದರಿ ಓಡಿದ
ಆದರೆ ಅವನನು ಇರಿಯಿತು ಕಂಚಿನ ಬಾಣ.
25 ಆ ಬಾಣವನು ಕೀಳಲು ಅದು ಹೊರಬಂತು
ಅವನ ಬೆನ್ನಿನಿಂದ
ಅದರ ಮಿಂಚುಮೊನೆ ಆಚೆಬಂತು ಅವನ
ಪಿತ್ತಕೋಶದಿಂದ
ಅವನನು ಆವರಿಸಿಕೊಂಡಿತು ಭಯಭ್ರಾಂತ.
26 ಅವನ ನಿಧಿನಿಕ್ಷೇಪಕ್ಕಾಗಿ ಕಾರಿರುಳು ಕಾದಿದೆ
ಯಾರೂ ಹೊತ್ತಿಸದ ಬೆಂಕಿ ಅವನನು
ಕಬಳಿಸಲಿದೆ

ಅವನ ಗುಡಾರದಲಿ ಉಳಿದದ್ದೆಲ್ಲ
ನಾಶವಾಗಲಿದೆ.
27 ಆಕಾಶವೇ ಅವನ ದೋಷವನು ಪ್ರಕಟಿಸುವುದು
ಭೂಲೋಕವೇ ಅವನ ವಿರುದ್ಧ
ಸಾಕ್ಷಿ ನಿಲ್ಲುವುದು.
28 ಅವನ ಮನೆಯ ಧನಧಾನ್ಯ ಹಾಳಾಗುವುದು
ದೇವರ ಸಿಟ್ಟಿನಾದಿನ ನೀರುಪಾಲಾಗುವುದು.
29 ಇದುವೆ ದುರುಳನಿಗೆ ದೇವರು ವಿಧಿಸುವ ಭಾಗ್ಯ
ದೇವರಿಂದ ಅವನಿಗೆ ನೇಮಿಸಲಾಗಿರುವ
ಸ್ವಾಸ್ತ್ಯ."

**21** ಅದಕ್ಕೆ ಯೋಬನು ಕೊಟ್ಟ ಉತ್ತರ
ಇದು:
2 "ಗಮನಕೊಡಿ ನನ್ನ ಮಾತುಗಳಿಗೆ
ನಾನು ನಿಮ್ಮಿಂದ ಬಯಸುವ ಉಪಶಮನ
ಇದುವೆ:
3 ನಾನು ಮಾತಾಡುವಾಗ ತಾಳ್ಮೆಯಿಂದಿರಿ
ಬಳಿಕ ಬೇಕಾದರೆ ಪರಿಹಾಸ್ಯ ಮಾಡಿ.
4 ನನ್ನ ದೂರು ಮನುಷ್ಯನ ವಿರುದ್ಧವೆ?
ಸಾಕಷ್ಟು ಕಾರಣವಿರಲು, ನಾನು
ಬೇಸರಗೊಳ್ಳಬಾರದೆ?
5 ನನ್ನ ಕಡೆಗೆ ಗಮನ ಕೊಡಿ
ಬಾಯಿಯಮೇಲೆ ಕೈಯಿಟ್ಟು ನಿಬ್ಬೆರಗಾಗಿರಿ.
6 ಇದನ್ನು ನೆನೆದಾಗ ನನಗೆ ತಲ್ಲಣವಾಗುತ್ತದೆ
ನನ್ನ ದೇಹಕ್ಕೆ ನಡುಕ ಬರುತ್ತದೆ:
7 ದುರುಳರು ಮುದುಕರಾಗುವವರೆಗೂ
ಬದುಕುವುದೇಕೆ?
ಅಂಥವರು ಪ್ರಬಲರು, ಬಲಿಷ್ಠರು ಆಗುವುದೇಕೆ?
8 ಅವರ ಸಂತಾನ ಅವರ ಸಮ್ಮುಖದಲ್ಲಿ
ಸುಸ್ಥಿರವಾಗಿದೆ
ಅವರ ಕುಟುಂಬ ಅವರ ಕಣ್ಮುಂದೆಯೇ
ಅಚಲವಾಗಿದೆ.
9 ಅವರ ಮನೆ ನಿರ್ಭೀತ, ಹಾಗೂ ಸುರಕ್ಷಿತ
ಅವರ ಮೇಲೆ ಬೀಳದು ದೇವರ ದಂಡ.
10 ಅವರ ಹೋರಿ ತಪ್ಪದೆ ಫಲವತ್ತಾಗಿಸುತ್ತದೆ
ಅವರ ಗೋವು ಕಂದುಹಾಕದೆ ಈಯುತ್ತದೆ.
11 ಅವರ ಮಕ್ಕಳು ಮುನ್ನಡೆಯುತ್ತಾರೆ
ಮಂದೆಯಂತೆ
ಅವರ ಬಾಲಬಾಲೆಯರು ಕುಣಿದಾಡುತ್ತಾರೆ
ಈಂಕೆಯಂತೆ.

12 ಹಾಡುತ್ತಾರೆ ತಂಬೂರಿ ವೀಣೆಗಳನು
ನುಡಿಸುತ್ತಾ
ಉಲ್ಲಾಸಿಸುತ್ತಾರೆ ಕೊಳಲಿನ ಸ್ವರ ಕೇಳುತ್ತಾ.
13 ದಿನಗಳನು ಕಳೆಯುತ್ತಾರೆ
ಸುಖಸಂತೋಷದಿಂದ
ಸಮಾಧಿ ಸೇರುತ್ತಾರೆ ಸಮಾಧಾನದಿಂದ.
14 ಆದರೆ ಈ ದುರುಳರೇ, ದೇವರಿಗೆ, 'ನಮ್ಮನ್ನು
ಬಿಟ್ಟು ತೊಲಗು,
ನಮಗೆ ಬೇಡವಾಗಿದೆ ನಿನ್ನ ಮಾರ್ಗದ ಅರಿವು'.
15 'ಈ ಸರ್ವಶಕ್ತ ಎಷ್ಟರವನು: ಆತನ ಸೇವೆ
ನಮಗೇಕೆ?
ಆತನಿಗೆ ಪ್ರಾರ್ಥನೆಮಾಡಿ ಪ್ರಯೋಜನವೇನು?'
ಎಂದಿದ್ದಾರೆ.
16 ಆಹಾ! ಸದ್ಯಕ್ಕೆ ಸುಖಶಾಂತಿ ನೆಲಸಿಲ್ಲ ಅವರ
ಕೈಯಲಿ
ಆ ದುರುಳರ ಆಲೋಚನೆ ನನ್ನಿಂದ ದೂರವಿರಲಿ.
17 ಆ ದುರುಳರ ದೀಪ ಆರಿಹೋದದ್ದು ಎಷ್ಟು
ಸಾರಿ?
ಅವರಿಗೆ ವಿಪತ್ತು ಸಂಭವಿಸಿದ್ದು ಎಷ್ಟು ಸಾರಿ?
ಅವರ ಕೋಪ ಅವರಿಗೆ ಸಂಕಟ ತಂದದ್ದು
ಎಷ್ಟು ಬಾರಿ?
18 ಅವರು ಗಾಳಿಗೆ ತೂರಿಹೋದ ಹುಲ್ಲಾದುದು
ಎಷ್ಟು ಸಲ?
ಬಿರುಗಾಳಿ ಕೊಚ್ಚಿಕೊಂಡು ಹೋದ
ಹೊಟ್ಟಾದುದು ಎಷ್ಟು ಸಲ?
19 ದುಷ್ಟ ತಂದೆಯ ಪಾಪಫಲವನು
ಮಕ್ಕಳಿಗೆ ಕಾದಿಟ್ಟಿದ್ದಾರೆಯೇ ದೇವರು?
ಅವನಿಗೇ ಆ ದಂಡನೆ ಆಗಲಿ
ಆ ದುಷ್ಟನೇ ಅದನ್ನು ಅನುಭವಿಸಲಿ.
20 ಅವನೇ ತನ್ನ ವಿನಾಶವನು ಕಣ್ಣಾರೆ ಕಾಣಲಿ
ಅವನೇ ಸರ್ವಶಕ್ತನಾ ರೌದ್ರರಸವನು
ಸವಿಯಲಿ.
21 ಅವನ ಆಯುಸ್ಸೇ ಕತ್ತರಿಸಿ ಹೋದ ಮೇಲೆ
ಅವನಿಗೆಲ್ಲಿಯದು ತನ್ನಾನಂತರ ಬರುವ
ಸಂತತಿಯ ಚಿಂತೆ?
22 ದೇವರಿಗೆ ಜ್ಞಾನಬೋಧೆ ಮಾಡಬಲ್ಲವನು
ಇದ್ದಾನೆಯೇ?
ಉನ್ನತರಿಗೂ ನ್ಯಾಯತೀರಿಸುವಂಥವನು
ಆತನೇ ಅಲ್ಲವೇ?
23 ಒಬ್ಬ ಸಾಯುತ್ತಾನೆ ಸಮೃದ್ಧನಾಗಿರುವಾಗ

ಸುಖಶಾಂತಿಯಿಂದ ನೆಮ್ಮದಿಯಾಗಿರುವಾಗ.
24 ಅವನ ದೇಹ ಬೆಳೆದು ಕೊಬ್ಬೇರಿರುತ್ತದೆ
ಅವನ ಆಸ್ತಿಗಳ ವೃದ್ಧಿ ಸಾರವತ್ತಾಗಿರುತ್ತದೆ.
25 ಮತ್ತೊಬ್ಬ ಕಿಂಚಿತ್ತೂ ಸುಖಾನುಭವವಿಲ್ಲದೆ
ಮನೋವ್ಯಥೆ ಪಡುತ್ತಾ ಪ್ರಾಣಬಿಡುತ್ತಾನೆ.
26 ಇವರಿಬ್ಬರೂ ಮಣ್ಣಿನಲ್ಲಿ ಹೂಣಲ್ಪಡುತ್ತಾರೆ
ಹುಳುಗಳು ಅವರನು ಮುತ್ತಿಕೊಳ್ಳುತ್ತವೆ.
27 ಕೇಳಿ, ನಿಮ್ಮ ಆಲೋಚನೆಗಳನು ನಾನು ಬಲ್ಲೆ
ನನಗೆ ವಿರುದ್ಧ ನೀವು ಮಾಡುವ ಕುಯುಕ್ತಿ
ನನಗೆ ತಿಳಿದಿದೆ.
28 ನಿಮ್ಮ ಪ್ರಶ್ನೆ ಇದು: "ಆ ಖದೀಮನ ಮನೆ
ಏನಾಯಿತು?
ಆ ದುರುಳರು ನಿವಾಸಿಸುತ್ತಿದ್ದ ಗುಡಾರ
ಏನಾಯಿತು?"
29 ದಾರಿಹೋಕರನ್ನು ನೀವು ವಿಚಾರಿಸಿಲ್ಲವೆ?
ಅವರು ಕೊಟ್ಟ ದೃಷ್ಟಾಂತ ನಿಮಗೆ ಹಿಡಿಸಿಲ್ಲವೆ?
30 ದುರುಳನು ಆಪತ್ತಿನಾ ದಿನ
ಸುರಕ್ಷಿತನಾಗಿರುತ್ತಾನೆ
ದೇವರ ಆ ಕೋಪೋದ್ರೇಕದ ದಿನ
ಆಶ್ರಯ ಪಡೆಯುತ್ತಾನೆ.
31 ಅವನಿಗೆ 'ನೀನು ದುರ್ಮಾರ್ಗಿ' ಎಂದು
ಮುಖಾಮುಖಿಯಾಗಿ ಹೇಳಿದವರಾರು?
ಅವನು ಮಾಡಿದ ದುಷ್ಕೃತ್ಯಗಳಿಗೆ
ಮುಯ್ಯಿತೀರಿಸುವವರಾರು?
32 ಮೆರವಣಿಗೆಯಾಗಿ ಅವನನ್ನು ಸಮಾಧಿಗೆ
ಒಯ್ಯುತ್ತಾರೆ
ಅವನ ಗೋರಿಗೆ ಕಾವಲು ಕೂಡ ಇಡುತ್ತಾರೆ.
33 ಅವನಿಗೆ ಹಿಡಿಸುತ್ತದೆ ತಗ್ಗಿನಾ ಹೆಂಟೆಮಣ್ಣು
ಅವನನು ಹಿಂಬಾಲಿಸುತ್ತಾರೆ ಅಸಂಖ್ಯಾತ
ಜನರು
ಮುಂದಕ್ಕೂ ಹಿಂಬಾಲಿಸುತ್ತಾರೆ ಲೆಕ್ಕವಿಲ್ಲದ
ಜನರು.
34 ಇಂತಿರಲು ನಿಮ್ಮ ಉಪಶಮನದ ಮಾತು
ವ್ಯರ್ಥ
ನಿಮ್ಮ ಮಾತುಗಳ ಸಾರಾಂಶ ಮಿತ್ರದ್ರೋಹ."

## ಮೂರನೆಯ ಸಂವಾದ

(22.1 – 27.23)

**22** ಆಮೇಲೆ ತೇಮಾನ್ಯನಾದ ಎಲೀಫಜನು
ಮತ್ತೆ ಹೀಗೆಂದನು.
2 "ನರಮಾನವನಿಂದ ದೇವರಿಗೇನು
ಪ್ರಯೋಜನ?
ಬುದ್ಧಿವಂತನಾಗಿ ನಡೆದುಕೊಂಡರೆ ಅದು
ಅವನಿಗೇ ಪ್ರಯೋಜನ.
3 ನೀನು ಸಜ್ಜನನಾಗಿದ್ದರೆ ಅದರಿಂದ
ಸರ್ವಶಕ್ತನಿಗೆ ಸುಖವೇ?
ನಿನ್ನ ನಿರ್ದೋಷ ನಡತೆಯಿಂದ ಆತನಿಗೆ
ಲಾಭವೇ?
4 ನಿನ್ನ ಭಯಭಕ್ತಿಗಾಗಿ ಆತ ನಿನ್ನನ್ನು
ಶಿಕ್ಷಿಸುತ್ತಾನೆಯೇ?
ಅದಕ್ಕಾಗಿ ನಿನ್ನನು ನ್ಯಾಯತೀರ್ಪಿಗೆ
ಗುರಿಪಡಿಸುತ್ತಾನೆಯೆ?
5 ಇಲ್ಲ, ಹಾಗೆಮಾಡುವುದು ನಿನ್ನ ಕೆಟ್ಟತನ
ಹೆಚ್ಚಿದುದಕ್ಕಾಗಿ.
ನಿನ್ನ ಪಾಪಗಳಿಗೆ ಮಿತಿಯಿಲ್ಲದುದಕ್ಕಾಗಿ.
6 ನೀನು ನಿನ್ನ ಸೋದರರನಿಂದ ಬಟ್ಟೆಯನು
ಒತ್ತೆಯಾಗಿ ಪಡೆದೆ
ಬಟ್ಟೆಕಿತ್ತುಕೊಂಡು ಅವನನ್ನು
ಬೆತ್ತಲೆಯಾಗಿಸಿದೆ.
7 ದಣಿದವನಿಗೆ ನೀ ಕೊಡಲಿಲ್ಲ ಪಾನ
ಹಸಿದವನಿಗೆ ಬಡಿಸಲಿಲ್ಲ ಅನ್ನ.
8 ನಿನ್ನನಿಸಿಕೆಯಂತೆ ಬಲಿಷ್ಠನಿಗೆ ನಾಡಿನೊಡೆತನ
ಘನವಂತನಿಗೇ ಅಲ್ಲಿ ಮನೆತನ.
9 ವಿಧವೆಯರನ್ನು ಬರಿಗೈಯಲ್ಲಿ ಕಳಿಸಿಬಿಟ್ಟೆ
ತಬ್ಬಲಿಯ ಕೈಗಳನು ನೀನು ಮುರಿದುಬಿಟ್ಟೆ.
10 ನಿನ್ನ ಸುತ್ತಲು ಉರುಲುಗಳು ಕಾದಿವೆ
ಈ ಕಾರಣ ನಿನ್ನನು ತಲ್ಲಣಗೊಳಿಸಲಿದೆ
ಭಯಭ್ರಾಂತಿ ತಟ್ಟನೆ.
11 ನಿನಗೆ ದಾರಿಕಾಣದಿರಲು ಬೆಳಕೆ ಕತ್ತಲಾಗಿದೆ
ನಿನ್ನನು ಮುಳುಗಿಸಲು ಜಲಪ್ರವಾಹವಿದೆ.
12 ದೇವರು ಉನ್ನತ ಆಕಾಶದಲ್ಲಿ ಇದ್ದಾನಲ್ಲವೇ?
ನಕ್ಷತ್ರಗಳನ್ನು ನೋಡು, ಎಷ್ಟು ಗಹನವಾಗಿವೆ!
13 ಈ ನಿಮಿತ್ತ ನೀನು, 'ದೇವರಿಗೇನು ಗೊತ್ತು?
ನ್ಯಾಯ ತೀರಿಸಬಲ್ಲನೆ ಕಾರ್ಗತ್ತಲು
ಅಡ್ಡವಿರಲು?

14 ಆತ ನೋಡಲಾಗದಂತೆ ದಟ್ಟವಾದ ಮೋಡಗಳ
ಪರದೆ ಇದೆ
ಆತನ ನಡೆದಾಟವೆಲ್ಲ ಆಕಾಶದ
ಮೇಲ್ಗಡೆಯಲ್ಲವೆ?' ಎಂದೆ.
15 ನೀನು ಹಿಡಿದಿರುವುದು ಪುರಾತನ ಹಾದಿಯನೇ
ದುರ್ಜನರು ನಡೆದುಬಂದ ಆ ಬೀದಿಯನೇ.
16 ಅವರನ್ನು ಅಕಾಲ ಮರಣ ಅಪಹರಿಸಿತು
ಅವರಿಗಿದ್ದ ಅಡಿಪಾಯ ನೀರುಪಾಲಾಯಿತು.
17 ದೇವರು ಅವರ ಮನೆಗಳನ್ನು ಸಂಪತ್ತಿನಿಂದ
ತುಂಬಿಸಿದ್ದರೂ
ಅವರು ಆತನಿಗೆ, 'ತೊಲಗಿಹೋಗು ನಮ್ಮಿಂದ'
ಎಂದರು.
18 ಅಲ್ಲದೆ, 'ಸರ್ವಶಕ್ತ ನಮಗೇನು ಮಾಡಬಲ್ಲ?'
ಎಂದುಕೊಂಡರು
ಅಕಟ, ನನ್ನಿಂದ ದೂರ ಇರಲಿ! ದುರುಳರ ಈ
ಮಾತು.
19 ದುರುಳರ ದುರ್ಗತಿಯನು ನೋಡಿ ಸಜ್ಜನರು
ಹಿಗ್ಗುವರು
ನಿರ್ದೋಷಿಗಳು ಅವರನು ಈ ಪರಿ ಅಣಕಿಸಿ
ಹಾಸ್ಯಮಾಡುವರು:
20 'ನೋಡಿ, ನಮ್ಮ ವೈರಿಗಳು ಹೇಗೆ ಹಾಳಾಗಿ
ಹೋದರು!
ಅವರು ಬಿಟ್ಟುಹೋದ ಆಸ್ತಿ ಬೆಂಕಿಯಿಂದ
ಭಸ್ಮವಾಯಿತು!'
21 ದೇವರ ಚಿತ್ತಕ್ಕೆ ಮಣಿದು ಸಮಾಧಾನದಿಂದಿರು
ಇದರಿಂದ ನಿನಗೆ ಶುಭವಾಗುವುದು.
22 ಆತನ ಬಾಯಿಂದ ಬುದ್ಧಿ ಕಲಿತುಕೊ
ಆತನ ಮಾತನು ಹೃದಯದಲ್ಲಿಟ್ಟುಕೊ
23 ಸರ್ವಶಕ್ತನ ಕಡೆಗೆ ಹಿಂದಿರುಗಿದೆಯಾದರೆ
ನಿನ್ನ ಗುಡಾರಗಳಿಂದ ಅನ್ಯಾಯವನು
ತೊರೆದೆಯಾದರೆ, ನೀನು ಉದ್ಧಾರವಾಗುವೆ.
24 ಎಸೆದುಬಿಡು ನಿನ್ನ ಬಂಗಾರವನು ಧೂಳಿಗೆ
ಓಫೀರ್ ನಾಡಿನ ಅಪರಂಜಿಯನು ನದಿತೀರದ
ಕಲ್ಲುಗಳಿಗೆ.
25 ಸರ್ವಶಕ್ತನಾದ ಸ್ವಾಮಿಯೇ ನಿನಗೆ
ಬಂಗಾರವಾಗಿರಲಿ
ಆತನೇ ನಿನಗೆ ಬೆಳ್ಳಿಯ ರಾಶಿಯಾಗಿರಲಿ.
26 ಆಗ ನೀನು ಸರ್ವಶಕ್ತನಲಿ ಆನಂದಿಸುವೆ
ತಲೆಯೆತ್ತಿ ದೇವರಿಗೆ ಅಭಿಮುಖಿಯಾಗುವೆ.
27 ಆತನನು ಪ್ರಾರ್ಥಿಸುವೆ, ಆತ ಆಲಿಸುವನು

ತೀರಿಸುವೆ ಆತನಿಗೆ ನೀ ಹೊತ್ತ ಹರಕೆಗಳನು.
28 ನಿನ್ನ ಯೋಜನೆಗಳು ಸಫಲವಾಗುವುವು
ನಿನ್ನ ಮಾರ್ಗಗಳು ಪ್ರಜ್ವಲಿಸುವುವು.
29 ದೇವರು ಕೆಳಕ್ಕೆ ದಬ್ಬುತ್ತಾನೆ ಗರ್ವಿಗಳನು
ಉದ್ಧರಿಸುತ್ತಾನೆ ದೀನ ಮನಸ್ಕರನು.
30 ಆತ ವಿಮೋಚಿಸುತ್ತಾನೆ ನಿರ್ದೋಷಿಗಳನು
ನಿನ್ನ ಕೈ ಶುದ್ಧವಿರಲಿ ವಿಮೋಚಿಸುವನು
ನಿನ್ನನು.
ಆಗ ಯೋಬನು

**23** 2 "ನನ್ನ ದುಃಖಪ್ರಲಾಪ ಈಗಲೂ
ಕಟುವಾಗಿದೆ
ನಾನು ನಿಟ್ಟುಸಿರಿಡುವಾಗಲೂ ದೇವರ
ಹಸ್ತ ಭಾರವಾಗಿದೆ.
3 ಆಹಾ! ಆತನ ದರ್ಶನ ನನಗೆ ದೊರಕುವುದೆಲ್ಲಿ?
ನಾನು ಸೇರಬಹುದಿತ್ತಲ್ಲಾ ಆತನ
ಸನ್ನಿಧಿಯಲ್ಲಿ !
4 ನನ್ನ ನ್ಯಾಯವನ್ನು ಆತನ ಮುಂದೆ
ವಿವರಿಸಬಹುದಿತ್ತು
ಬಾಯ್ತುಂಬಾ ಆತನೊಡನೆ
ವಾದಿಸಬಹುದಿತ್ತು.
5 ಆತನ ಹೇಳಿಕೆಗಳನ್ನು ವಿವೇಚಿಸಬಹುದಿತ್ತು
ಆತನ ಪ್ರತ್ಯುತ್ತರಗಳನ್ನು
ತಿಳಿದುಕೊಳ್ಳಬಹುದಾಗಿತ್ತು.
6 ಆತ ನನ್ನೊಡನೆ ವ್ಯಾಜ್ಯವಾಡುವನೋ
ಶಕ್ತಿಸಾಮರ್ಥ್ಯದಿಂದ?
ಇಲ್ಲ, ಆಲಿಸುವನು ನನ್ನ ವಿಜ್ಞಾಪನೆಯನು
ಗಮನದಿಂದ.
7 ಅಲ್ಲಿ ಸಜ್ಜನನಿಗೆ ಮಾತ್ರ ವಾದಿಸಲು ಸಾಧ್ಯ.
ನಿತ್ಯವಾದ ಬಿಡುಗಡೆ ಆ ನ್ಯಾಯಾಧೀಶನಿಂದ
ನನಗೆ ಲಭ್ಯ.
8 ಮುಂದೆ ಹೋದರೂ ದೇವರು ನನಗೆ
ಕಾಣಸಿಗನಯ್ಯಾ
ಹಿಂದೆ ಬಂದರೂ ಆತ ನನಗೆ
ಕಾಣಸಿಗುವುದಿಲ್ಲವಯ್ಯಾ!
9 ಎಡಗಡೆ ಹುಡುಕಿದರೂ ನೋಡಲಾಗದಯ್ಯಾ
ಬಲಗಡೆ ತಿರುಗಿದರೂ ಗೋಚರವಾಗದಯ್ಯಾ!
10 ಆತನಾದರೊ ಬಲ್ಲ ನಾನು ಹಿಡಿವ ದಾರಿಯನು
ಆತ ನನ್ನನು ಶೋಧಿಸಿದರೆ ಚೊಕ್ಕ
ಬಂಗಾರವಾಗುವೆನು.

11 ಆತನ ಹೆಜ್ಜೆಯ ಜಾಡಿನಲ್ಲೇ ನಾನು ಕಾಲಿಟ್ಟೆ
ಓರೆಯಾಗದೆ ಆತನ ದಾರಿಯನ್ನೇ ಹಿಡಿದೆ.
12 ನಾ ಬಿಟ್ಟಗಲಲಿಲ್ಲ ಆತನ ತುಟಿಯಿಂದ ಹೊರಟ
ಆಜ್ಞೆಗಳನು
ನನ್ನೆದೆಯಲಿ ನಿಧಿಯಾಗಿಟ್ಟೆ ಆತನ ಬಾಯಿಂದ
ಬಂದ ಮಾತುಗಳನ್ನು.
13 ಆತನದು ಏಕಚಿತ್ತ; ಅದನು
ಬದಲಾಯಿಸಲಸಾಧ್ಯ
ಆತ ಬಯಸಿದ್ದೆ ಸಿದ್ಧಿಯಾದಕಾರ್ಯ.
14 ನನಗೆ ವಿಧಿತವಾದುವುಗಳನೆ ಕಾರ್ಯ
ಗೊಳಿಸುತ್ತಾನೆ
ಈ ಪರಿಯ ಹಲವಾರು ಯೋಜನೆಗಳು
ಆತನಲ್ಲಿವೆ.
15 ಈ ಕಾರಣ ಆತನ ಸನ್ನಿಧಿಯಲಿ ನಾನು
ಅಂಜುಬುರುಕ
ಇದನ್ನು ನೆನೆದು ಮನದಲಿ ನಾನು ಭಯಪೀಡಿತ.
16 ದೇವರೇ ನನ್ನ ಶಕ್ತಿಯನು ಕುಂದಿಸಿಹನು
ಸರ್ವಶಕ್ತ ನನ್ನನು ಆತಂಕಗೊಳಿಸಿಹನು.
17 ನನ್ನ ವಿನಾಶಕ್ಕೆ ಈ ಅಂಧಕಾರವು ನಿಮಿತ್ತವಲ್ಲ
ನನ್ನ ಮುಖಕ್ಕೆ ಕವಿದಿರುವ ಈ ಕಾರ್ಗತ್ತಲು
ಕಾರಣವಲ್ಲ.

**24** ಸರ್ವಶಕ್ತಸ್ವಾಮಿ ಕಾಲರಾಶಿಯನ್ನೇಕೆ
ನೇಮಿಸಿಟ್ಟುಕೊಂಡಿಲ್ಲ?
ಆತನನ್ನು ಅರಿತವರಿಗೆ ಆತನ ದಿನಗಳೇಕೆ
ಗೋಚರವಾಗುವುದಿಲ್ಲ?
2 ಎಲ್ಲೆ ಮೇರೆಗಳನ್ನು ಸರಿಸಿಕೊಳ್ಳುವವರುಂಟು
ಅಪಹರಿಸಿಕೊಂಡ ದನಕುರಿಗಳನ್ನು
ಸಾಕಿಕೊಳ್ಳುವವರುಂಟು.
3 ಅನಾಥರ ಕತ್ತೆಗಳನು ಹೊಡೆದುಕೊಂಡು
ಹೋಗುತ್ತಾರೆ
ವಿಧವೆಯರ ಎತ್ತುಗಳನು ಒತ್ತೆಯಾಗಿ
ತೆಗೆದುಕೊಳ್ಳುತ್ತಾರೆ
4 ದಿಕ್ಕಿಲ್ಲದವರನು ದಾರಿತಪ್ಪಿಸುತ್ತಾರೆ
ನಾಡಿನ ಬಡವರನು ಅಡಗಿಸಿಬಿಡುತ್ತಾರೆ.
5 ಆ ಬಡವರ ಪಾಡು ಅಡವಿಯ ಕಾಡುಕತ್ತೆಗಳಿಗೆ
ಸಮಾನ
ಹೊಟ್ಟೆಪಾಡಿಗಾಗಿ ಕೂಳನ್ನು ಹುಡುಕುತ್ತಾರೆ
ಬೆಳಗಿನಿಂದ
ಅವರ ಮಕ್ಕಳಿಗೆ ಆಹಾರ ಒದಗಿಸುತ್ತದೆ

ಅರಣ್ಯ.
6 ಹೊಟ್ಟೆಗಾಗಿ ಸೊಪ್ಪುಸದೆ ಕೊಯ್ದುಕೊಳ್ಳುತ್ತಾರೆ ಬಯಲಿನಲಿ
ಹಕ್ಕಲನ್ನು ಆಯ್ದುಕೊಳ್ಳುತ್ತಾರೆ ದುಷ್ಟನ ದ್ರಾಕ್ಷಿತೋಟದಲಿ.
7 ಬೆತ್ತಲೆಯಾಗಿ ಮಲಗುತ್ತಾರೆ ಬಟ್ಟೆಯಿಲ್ಲದೆ
ಚಳಿಗಾಲವನ್ನು ಕಳೆಯುತ್ತಾರೆ ಹೊದಿಕೆಯಿಲ್ಲದೆ.
8 ಮಲೆನಾಡಿನ ಭಾರಿಮಳೆಯಿಂದ ನೆನೆದುಹೋಗುತ್ತಾರೆ
ಮರೆಯಿಲ್ಲದೆ ಕಲ್ಲುಬಂಡೆಗಳನು ಆಶ್ರಯಿಸುತ್ತಾರೆ.
9 ತಂದೆಯಿಲ್ಲದ ಮಗುವನು ಕಿತ್ತುಕೊಳ್ಳುತ್ತಾರೆ ತಾಯಮೊಲೆಯಿಂದ.
ಮಕ್ಕಳನು ಅಡವಾಗಿ ಪಡೆಯುತ್ತಾರೆ ಬಡವರಿಂದ.
10 ಬಡವರೋ ಬಟ್ಟೆಯಿಲ್ಲದೆ ಅಲೆಯುತ್ತಾರೆ ಬೆತ್ತಲೆಯಾಗಿ
ಸಿವುಡುಗಳನ್ನು ಹೊರುತ್ತಾರೆ ಹಸಿದವರಾಗಿ.
11 ದಾಹಗೊಂಡೇ ದ್ರಾಕ್ಷಿಯನ್ನು ತುಳಿಯುತ್ತಾರೆ ತೊಟ್ಟಿಗಳಲ್ಲಿ
ಎಣ್ಣೆಗಾಣವನ್ನು ಆಡಿಸುತ್ತಾರೆ ಕೋಟೆಗಳಲ್ಲಿ.
12 ನಗರಗಳಲ್ಲಿ ನರಳುವವರಿದ್ದಾರೆ
ಗಾಯಗೊಂಡವರು ಮೊರೆಯಿಡುತ್ತಾರೆ
ಆದರೆ ದೇವರು ಕಿವಿಗೊಡದಿದ್ದಾನೆ.
13 ಬೆಳಕನ್ನು ಪ್ರತಿಭಟಿಸುವವರಿದ್ದಾರೆ
ಅದರ ಮಾರ್ಗವನ್ನು ತಿಳಿಯದೆ
ಅದರ ಹಾದಿಯನ್ನು ಕೈಗೊಳ್ಳದೆ.
14 ಕೊಲೆಪಾತಕ ಏಳುತ್ತಾನೆ ಮುಂಜಾನೆಯೇ
ದೀನದಲಿತರನ್ನು ಕೊಂದುಹಾಕುತ್ತಾನೆ
ರಾತ್ರಿಯಲ್ಲಿ ವರ್ತಿಸುತ್ತಾನೆ ಕಳ್ಳನಂತೆ.
15 ವ್ಯಭಿಚಾರಿ ಸಂಜೆಯನೇ ಎದುರು ನೋಡುತ್ತಿರುತ್ತಾನೆ
ಯಾರೂ ತನ್ನನ್ನು ಕಾಣದಂತೆ ಮುಖಕ್ಕೆ ಮುಸುಕು ಹಾಕಿಕೊಳ್ಳುತ್ತಾನೆ.
16 ಕಳ್ಳರು ಕತ್ತಲಲ್ಲಿ ಮನೆಗೆ ನುಗ್ಗುತ್ತಾರೆ ಕನ್ನ ಕೊರೆದು
ಬೆಳಕು ಕಾಣದೆ ಇರುತ್ತಾರೆ ಹಗಲಲ್ಲಿ ಅವಿತುಕೊಂಡು.
17 ಅಂಥವರಿಗೆ ಕಾರ್ಗತ್ತಲೇ ಬೆಳಗಿನ ಜಾವ

ಕಾರ್ಗತ್ತಲಿನ ಅಪಾಯಗಳೇ ಅವರಿಗೆ
ಪರಿಚಯ.

(ಚೋಫರನು)

18 “ದುರುಳನನು ಕೊಚ್ಚಿಕೊಂಡು ಹೋಗುವುದು
ಪ್ರವಾಹ
ಪೊಡವಿಯಲ್ಲಿನ ಅವನ ಆಸ್ತಿ ಶಾಪಗ್ರಸ್ತ
ಅವನು ದ್ರಾಕ್ಷಿತೋಟಗಳ ಕಡೆಗೂ
ಸುಳಿಯಲಾರ.
19 ಬರಗಾಲ–ಬೇಸಿಗೆ ಹಿಮವನು
ಹೀರಿಕೊಳ್ಳುವಂತೆ
ಪಾತಾಳದ ಕೂಪ ಪಾಪಿಯನು
ಸೆಳೆದುಕೊಳ್ಳುತ್ತದೆ.
20 ಹೆತ್ತಕರುಳೇ ಅವನನು ಮರೆತುಬಿಡುವುದು
ಹುಳು ಅವನ ಹೆಣವನು ಆಸೆಯಿಂದ
ಕಬಳಿಸುವುದು.
ಇನ್ನು ಅವನ ನೆನಪು ಯಾರಿಗೂ ಇರದು
ಅಕ್ರಮವು ಮುರಿದು ಬಿದ್ದ ಮರದಂತಾಗುವುದು.
21 ಮಕ್ಕಳಿಲ್ಲದ ಬಂಜೆಯನ್ನು ಅವನು ಬಾಧಿಸಿದ
ವಿಧವೆಯರನು ಉದ್ಧರಿಸದೇ ಹೋದ.
22 ದೇವರಂತು ತನ್ನ ಶಕ್ತಿಯಿಂದ ಬಲಿಷ್ಠರನ್ನು
ಉಳಿಸುತ್ತಾನೆ
ತಮ್ಮ ಜೀವ ಇನ್ನುಳಿಯದು ಎಂದಿದ್ದರೂ
ಅವರು ಉದ್ಧಾರವಾಗುತ್ತಾರೆ.
23 ಅವರು ಆಧರಿಸಿ ನಿಂತಿರುವುದು ದೇವರಿತ್ತ
ಅಭಯದ ನಿಮಿತ್ತ
ಆತನ ಕಟಾಕ್ಷ ಅವರ ಮಾರ್ಗದತ್ತ.
24 ಅವರು ಮೇಲೇರಿ ಮಾಯವಾಗುತ್ತಾರೆ
ಕೊಂಚಕಾಲದ ಮೇಲೆ
ಕೊಯ್ಯಲ್ಪಡುತ್ತಾರೆ ಸುಗ್ಗಿಯ ತೆನೆಗಳಂತೆ
ಕೂಡಿಸಲ್ಪಡುತ್ತಾರೆ ಕೆಳಗೆ ಬಿದ್ದ ಕಾಳಿನಂತೆ.
25 ಈ ಮಾತು ಅಬದ್ಧವೆಂದು ಯಾರು
ಸ್ಥಾಪಿಸಬಲ್ಲರು?
ನಾನು ಸುಳ್ಳುಗಾರನೆಂದು ನಿಮ್ಮಲ್ಲಿ ಯಾರು
ತೋರಿಸಬಲ್ಲನು?”

**25** ಬಳಿಕ ಶೂಹ್ಯನಾದ ಬಿಲ್ದದನು
ಹೀಗೆಂದನು:
2 “ದೇವರು ಮಹೋನ್ನತ ಪ್ರಭು; ಭಯಭಕ್ತಿಗೆ
ಪಾತ್ರನು

ಉನ್ನತ ಲೋಕದಲ್ಲಿ ಶಾಂತಿಸಮಾಧಾನವನು
ಸ್ಥಾಪಿಸಿಹನು.
3 ಲೆಕ್ಕವಿದೆಯೇ ಆತನ ಸೇನೆಗಳಿಗೆ?
ಆತನ ತೇಜಸ್ಸು ಮೂಡದಿರುವುದು ಯಾರಿಗೆ?
4 ನರನು ದೇವರ ದೃಷ್ಟಿಯಲ್ಲಿ ಸಜ್ಜನನಾಗಿರಲು
ಸಾಧ್ಯವೆ?
ಸ್ತ್ರೀಯಲ್ಲಿ ಹುಟ್ಟಿದವನು ಪರಿಶುದ್ಧ
ನಾಗಿರುವುದು ಶಕ್ಯವೆ?
5 ಆತನ ದೃಷ್ಟಿಗೆ ಚಂದ್ರನೂ ಕಾಂತಿಯುತನಲ್ಲ
ನಕ್ಷತ್ರಗಳೂ ನಿರ್ಮಲವಾದವುಗಳಲ್ಲ.
6 ಇಂತಿರಲು ಹುಳುವಿನಂಥ ನರನು ಏತರವನು?
ಕ್ರಿಮಿಯಂಥ ನರನು ಎಷ್ಟು ಮಾತ್ರದವನು?”

**26** ಆಗ ಯೋಬನು ಹೀಗೆ ಉತ್ತರ
ಕೊಟ್ಟನು:
2 “ನಿಶ್ಯಕ್ತನಿಗೆ ನಿನ್ನಿಂದ ಮಹದುಪಕಾರವಾಯಿತು
ದುರ್ಬಲವಾದ ಕೈಗಳಿಗೆ ಮಹಾ ನೆರವು
ದೊರಕಿತು!
3 ಮಂದಮತಿಯಾದವನಿಗೆ ಎಷ್ಟೋ
ಬುದ್ಧಿಹೇಳಿರುವೆ
ಸುಜ್ಞಾನವನ್ನು ಬಹಳವಾಗಿ ಬೋಧನೆ
ಮಾಡಿರುವೆ!
4 ಆ ಮಾತುಗಳನ್ನು ನಿನಗೆ ಕಲಿಸಿದವರಾರು?
ಈ ನುಡಿಗಳಿಂದ ನಿನ್ನನು ಪ್ರೇರೇಪಿಸಿದ
ಪುಣ್ಯಾತ್ಮನಾರು?
5 **ಬಿಲ್ದದನು:** ಜಲಚರಗಳಿಂದ ತುಂಬಿದ
ಸಾಗರದ ಕೆಳಗಿನ ಲೋಕದೊಳು
(ದೇವರ ಭಯದಿಂದ) ಯಾತನೆಪಡುತ್ತಿವೆ
ಪ್ರೇತಗಳು.
6 ಪಾತಾಳ ತೆರೆದಿದೆ ದೇವರ ದೃಷ್ಟಿಗೆ
ಅಧೋಲೋಕ ಮರೆಯಾಗಿಲ್ಲ ಆತನಿಗೆ.
7 ಉತ್ತರದಿಕ್ಕನ್ನು ವಿಸ್ತರಿಸಿಹನು ಶೂನ್ಯದ ಮೇಲೆ
ಭೂಮಂಡಲವನ್ನು ತೂಗುಹಾಕಿಹನು ಏನೂ
ಇಲ್ಲದರ ಮೇಲೆ.
8 ಮೇಘಗಳನ್ನು ನೀರಿನಿಂದ ತುಂಬಿಸಿಹನು
ಮೋಡ ಅದರ ಭಾರದಿಂದ ಒಡೆದುಹೋಗದು.
9 ಪೂರ್ಣಚಂದ್ರನನ್ನು ಮರೆಮಾಡುತ್ತಾನೆ
ಅದರ ಮುಂದೆ ಮೋಡ ಕವಿಸುತ್ತಾನೆ.
10 ಬೆಳಕು–ಕತ್ತಲು ಸಂಧಿಸುವ ಸ್ಥಾನದಲಿ

ಮೇರೆಹಾಕಿದ್ದಾನೆ ಸಮುದ್ರದ ಸುತ್ತಲಲಿ.
11 ಆಕಾಶಮಂಡಲದ ಸ್ತಂಭಗಳು ಕದಲುವುವು
ಆತನ ಗದರಿಕೆಗೆ ಅವುಗಳು ಬೆರಗಾಗುವುವು.
12 ಸಮುದ್ರವನು ಭೇದಿಸುತ್ತಾನೆ ಪರಾಕ್ರಮದಿಂದ
ಘಟಸರ್ಪವನೂ ಹೊಡೆದು ಹಾಕುತ್ತಾನೆ
ವಿವೇಕಶಕ್ತಿಯಿಂದ.
13 ಆತನ ಶ್ವಾಸ ಶುಭ್ರವಾಗಿಸುತ್ತದೆ
ಆಕಾಶಮಂಡಲವನು
ಆತನ ಹಸ್ತ ಇರಿಯುತ್ತದೆ ಹರಿದೋಡುವ
ಸರ್ಪವನು.
14 ದೇವರ ಅದ್ಭುತಗಳಲ್ಲಿ ಇವು ಕೆಲವು ಮಾತ್ರ
ಆತನ ಬಗ್ಗೆ ನಾವು ಕೇಳಿರುವುದು ಕಿಂಚಿತ್ತು
ಮಾತ್ರ
ಆತನ ಘನ ಗರ್ಜನೆಯ ಪ್ರಾಬಲ್ಯವನ್ನು
ಗ್ರಹಿಸಲು ಯಾರಿಂದ ಸಾಧ್ಯ?”

**27** ಯೋಬನು ಮತ್ತೆ ಪ್ರಸ್ತಾಪವೆತ್ತಿ
ಹೀಗೆಂದನು:
2 “ನನಗೆ ನ್ಯಾಯ ದೊರಕಿಸದ
ಜೀವಂತ ದೇವರಾಣೆ,
ನನ್ನ ಮನಸ್ಸನು ಕಹಿಯಾಗಿಸಿದ ಸರ್ವಶಕ್ತನಾಣೆ,
3 ನನ್ನಲ್ಲಿ ಜೀವ ಉಸಿರಾಡುತ್ತಿರುವವರೆಗೆ,
ನನ್ನ ಮೂಗಲ್ಲಿ ದೇವರು ಊದಿದ
ಶ್ವಾಸವಿರುವವರೆಗೆ,
4 ನನ್ನ ತುಟಿ ಅನ್ಯಾಯವನು ನ್ಮಡಿಯದು
ನನ್ನ ನಾಲಿಗೆ ಎಷ್ಟುಮಾತ್ರಕ್ಕೂ ಮೋಸದ
ಮಾತನಾಡದು.
5 ನೀವು ನ್ಯಾಯವಂತರೆಂದು ನಾನು ಒಪ್ಪಿದರೆ
ನನಗಿರಲಿ ಧಿಕ್ಕಾರ!
ನಾನು ಸತ್ಯತೆಯನ್ನು ಕಳೆದುಕೊಳ್ಳಲಾರೆ
ಸಾಯುವ ತನಕ.
6 ನ್ಯಾಯನೀತಿಯನ್ನು ಬಿಡದೆ ಹಿಡಿವೆನು
ಭದ್ರವಾಗಿ
ನನ್ನ ಬಾಳಿನ ಯಾವ ದಿನದಂದೂ ನಿಂದಿಸಿದ್ದಿಲ್ಲ
ನನ್ನ ಮನಸ್ಸಾಕ್ಷಿ.
7 ನನ್ನ ಹಗೆಗೆ ದುಷ್ಟತನ ಗತಿಯಾಗಲಿ
ಅನೀತಿವಂತನ ಪಾಡು ನನ್ನ ವಿರೋಧಿಗೆ
ಒದಗಲಿ.
8 ದೇವರೇ ದುಷ್ಟನ ಪ್ರಾಣ ತೆಗೆವ ಕಾಲಕ್ಕೆ
ಅವನಿಗೆಲ್ಲಿಂದ ಬಂದೀತು ಭರವಸೆ!

9 ಅವನಿಗೆ ಕಷ್ಟದುಃಖ ಬಂದೊದಗಲು
ದೇವರು ಆಲೈಸುವನೆ ಅವನ ಮೊರೆಯನು?
10 ಅವನು ಆನಂದಿಸುವನೆ ಸರ್ವಶಕ್ತನಲಿ?
ಪ್ರಾರ್ಥನೆ ಮಾಡುವನೆ ಸರ್ವದಾ ಆತನಲಿ?
11 ದೇವರ ಹಸ್ತಬಲವನು ಕುರಿತು ಬೋಧಿಸುವೆನು
ಸರ್ವಶಕ್ತನ ಯೋಜನೆಯನು ನಿಮಗೆ
ಮರೆಮಾಚೆನು.
12 ಇಗೋ, ನೀವೆಲ್ಲರೂ ಇದನು ನೋಡಿದ್ದೀರಿ
ಖುದ್ದಾಗಿ
ಮತ್ತೆ ಏಕೆ ವಾದಿಸುತ್ತೀರಿ ವ್ಯರ್ಥವಾಗಿ?"
ಚೋಫರನು
13 "ಹೀಗಿರುತ್ತವೆ ದುಷ್ಟನಿಗೆ ದೇವರಿಂದ
ದೊರಕುವ ಪಾಲು
ಹಿಂಸಾಚಾರಿಗೆ ಸರ್ವಶಕ್ತನಿಂದ ಸಿಗುವ
ಸೊತ್ತು:
14 ಅವನಿಗೆ ಮಕ್ಕಳು ಹೆಚ್ಚಿದರೂ ಕತ್ತಿಗೆ
ತುತ್ತಾಗುವರು
ಅವನ ಸಂತತಿಯವರಿಗೆ ಊಟದ ಕೊರತೆ
ತಪ್ಪದು.
15 ಅವನ ಮನೆಯವರಲ್ಲಿ ಉಳಿದವರು
ಗುಳಿಸೇರುವರು ವ್ಯಾಧಿಯಿಂದ
ಅವನ ವಿಧವೆಯರು ಅವನಿಗೆ ನೆರವಾಗುವರು
ಉತ್ತರಕ್ರಿಯೆಗಳಿಂದ.
16 ಅವನು ಬೆಳ್ಳಿಯನ್ನು ಕೂಡಿಸಿಟ್ಟಿದ್ದರೂ
ಧೂಳಿನಷ್ಟು,
ವಸ್ತ್ರಗಳನು ಗುಡ್ಡೆ ಮಾಡಿಟ್ಟಿದ್ದರೂ
ಮಣ್ಣಿನಷ್ಟು.
17 ಸಜ್ಜನರು ಧರಿಸಿಕೊಳ್ಳುವರು
ಆ ವಸ್ತ್ರಗಳನು
ನಿರ್ದೋಷಿಗಳು ಹಂಚಿಕೊಳ್ಳುವರು ಆ
ಬೆಳ್ಳಿಯನು.
18 ಜೇಡರ ಹುಳದ ಗೂಡಿನಂತೆ
ಕವಲುಗಾರನ ಗುಡಿಸಿಲಂತೆ
ಬಡಕಲಾಗುವುದು ಅವನು ಕಟ್ಟಿಕೊಂಡ ಮನೆ.
19 ಅವನು ನಿದ್ರಿಸ ಹೋಗುತ್ತಾನೆ ಹಣವಂತನಾಗಿ
ಕಣ್ಣು ತೆರೆಯುತ್ತಲೆ ಇಲ್ಲವಾಗಿರುತ್ತದೆ ಆಸ್ತಿ!
ಮತ್ತೆ ಇರುತ್ತಾನೆ ನಿದ್ರೆಕಾಣದವನಾಗಿ.
20 ವಿಪತ್ತುಗಳು ಅವನನ್ನು ಹಿಂದಟ್ಟಿ ಹಿಡಿಯುವುವು
ಹೊಳೆಯಂತೆ
ಬಿರುಗಾಳಿ ಅವನನ್ನು ಅಪಹರಿಸುವುದು

ರಾತ್ರಿಯಲ್ಲೆ.
21 ಅವನು ತೂರಿಹೋಗದಿರನು ಮೂಡಣಗಾಳಿ
ಬಡಿಯುವುದರಿಂದ
ಅವನನ್ನು ಹೊಡೆದು ಹಾರಿಸಿಬಿಡುವುದು
ಅವನಿರುವ ಜಾಗದಿಂದ.
22 ಅವನ ಮೇಲೆ ಅದು ಬೀಸುತ್ತದೆ ನಿರ್ದಾಕ್ಷಿಣ್ಯ
ದಿಂದ
ತಪ್ಪಿಸಿಕೊಳ್ಳಲು ಅವನು ಯತ್ನಿಸುತ್ತಾನೆ ಅದರ
ಹೊಡೆತದಿಂದ.
23 ಜನರು ಹಾಸ್ಯಮಾಡುತ್ತಾರೆ ಚಪ್ಪಾಳೆ ತಟ್ಟಿ
ಅವನನ್ನು ಹೊರಗಟ್ಟುತ್ತಾರೆ ಛೀಮಾರಿ ಹಾಕಿ."

### ಸುಜ್ಞಾನದ ಸ್ತುತಿ

**28** "ಬೆಳ್ಳಿ ಸಿಕ್ಕುವ ಗಣಿಯುಂಟು
ಚಿನ್ನದ ಅದುರು ದೊರಕುವ
ಎಡೆಯುಂಟು.
2 ಕಬ್ಬಿಣವನ್ನು ತೆಗೆಯುತ್ತಾರೆ ಮಣ್ಣಿನಿಂದ
ತಾಮ್ರವನ್ನು ಕಡೆಯುತ್ತಾರೆ ಕಲ್ಲನ್ನು
ಕರಗಿಸುತಾ.
3 ಮಾನವರು ಹೊರದೂಡುತ್ತಾರೆ ಕತ್ತಲನು
ಕತ್ತಲು-ಕಾರ್ಗತ್ತಲಲ್ಲೂ ಹುಡುಕುತ್ತಾರೆ
ಲೋಹಗಳನು
ತೋಡುತ್ತಿರುತ್ತಾರೆ ಅವು ದೊರಕುವವರೆಗು.
4 ಗಣಿಯನ್ನು ತೋಡಿತೋಡಿ
ಜನನಿವಾಸಿಗಳಿಗೆ ದೂರವಾಗಿ
ಮೇಲ್ಗಡೆ ನಡೆದಾಡುವವರನ್ನು ಮರೆತುಹೋಗಿ
ಅತ್ತಿತ್ತ ಅಲೆದಾಡುತ್ತಾರೆ ನರಲೋಕಕ್ಕೆ
ಅನ್ಯರಾಗಿ.
5 ಭೂಮಿ ಕೊಡುತ್ತದೆ ಆಹಾರವನು
ಬೆಂಕಿಬಿದ್ದಂತೆ ಪಾಳಾಗಿರುತ್ತದೆ ಅದರ
ಅಡಿಭಾಗವು.
6 ನೀಲಿರತ್ನಗಳು ಸಿಗುತ್ತವೆ ಭುವಿಯ ಕಲ್ಲುಗಳಲಿ
ಚಿನ್ನಚಿಗುರು ದೊರಕುತ್ತದೆ ಅದರ ಧೂಳಿನಲಿ.
7 ಆ ದಾರಿ ತಿಳಿಯದು ಯಾವ ಹದ್ದಿಗೂ
ಅದು ಬಿದ್ದಿಲ್ಲ ಯಾವ ಗಿಡುಗದ ಕಣ್ಣಿಗೂ.
8 ಕಾಡುಮೃಗಗಳು ಅದನ್ನು ತುಳಿದಿಲ್ಲ
ಸಿಂಹವು ಆ ಮಾರ್ಗದಲ್ಲಿ ಸುಳಿದಿಲ್ಲ.
9 ಮಾನವನು ಕೈಮಾಡುತ್ತಾನೆ ಬಂಡೆಗಳ ಮೇಲೆ
ಬೆಟ್ಟಗಳನ್ನು ಕೆಡವಿಬಿಡುತ್ತಾನೆ ಬುಡಮಟ್ಟಕೆ.

10 ಸುರಂಗಗಳನ್ನು ಕೊರೆಯುತ್ತಾನೆ ಬಂಡೆಗಳಲಿ
ಅಮೂಲ್ಯವಾದ ವಸ್ತುಗಳನ್ನು ಕಾಣುತ್ತಾನಲ್ಲಿ.
11 ಕಂಡುಹಿಡಿಯುತ್ತಾನೆ ನದಿಗಳ ಮೂಲಗಳನು
ಬೆಳಕಿಗೆ ತರುತ್ತಾನೆ ಮರೆಯಾಗಿದ್ದ
ವಸ್ತುಗಳನು.
12 ಆದರೆ ಸುಜ್ಞಾನ ಸಿಕ್ಕುವುದೆಲ್ಲಿ?
ವಿವೇಕ ವಾಸಮಾಡುವುದೆಲ್ಲಿ?
13 ಸುಜ್ಞಾನದ ಕ್ರಯ ಯಾರಿಗೂ ಗೊತ್ತಿಲ್ಲ
ಜೀವಿತರಲ್ಲಿ ಅದನ್ನು ಕಂಡವರಿಲ್ಲ.
14 'ಅದು ನನ್ನಲ್ಲಿಲ್ಲ' ಎನ್ನುತ್ತದೆ ಪಾತಾಳ
'ನನ್ನ ಬಳಿಯಲ್ಲಿಲ್ಲ' ಎನ್ನುತ್ತದೆ ಸಮುದ್ರ.
15 ಚೊಕ್ಕ ಬಂಗಾರಕೊಟ್ಟು ಅದನು
ಕೊಂಡುಕೊಳ್ಳಲಾಗದು
ಅದರ ಬೆಲೆಗೆ ಬೆಳ್ಳಿಯನು ತೂಕಮಾಡಲಾಗದು.
16 ಓಫಿರ್ ದೇಶದ ಅಪರಂಜಿಯಿಂದಲೂ
ಅಮೂಲ್ಯ ಗೋಮೇಧಿಕ–
ಇಂದ್ರನೀಲದಿಂದಲೂ
ಸುಜ್ಞಾನದ ಮೌಲ್ಯವನ್ನು
ಗೊತ್ತು ಮಾಡಲಾಗದು.
17 ಹೊನ್ನಾಗಲಿ, ಗಾಜಾಗಲಿ ಅದಕ್ಕೆ
ಸಮವಾದೀತೆ?
ಚಿನ್ನಾಭರಣಗಳನ್ನು ಅದಕ್ಕೆ ಅದಲುಬದಲು
ಮಾಡಿಕೊಡಲಾದೀತೆ?
18 ಸುಜ್ಞಾನವಿರುವಲ್ಲಿ ಹವಳ–ಸ್ಫಟಿಕಗಳು
ನೆನಪಿಗೆ ಬಾರವು
ಮಾಣಿಕ್ಯಗಳ ಸಂಪಾದನೆಗಿಂತ ಅದರ
ಸಂಪಾದನೆ ಶ್ರೇಷ್ಠವು.
19 ಕೂಷ್ ದೇಶದ ಪುಷ್ಯರಾಗವು ಅದಕ್ಕೆ
ಸಾಟಿಯಲ್ಲ
ಶುದ್ಧ ಕನಕದೊಡನೆ ಅದನು
ತೂಕಮಾಡಲಾಗುವುದಿಲ್ಲ.
20 ಇಂತಿರಲು ಸುಜ್ಞಾನ ಬರುವುದು ಎಲ್ಲಿಂದ?
ವಿವೇಕ ದೊರಕುವುದು ಯಾವ ಸ್ಥಳದಿಂದ?
21 ಅದು ಎಲ್ಲ ಜೀವಿಗಳ ಕಣ್ಣಿಗೆ ಅಗೋಚರ
ಆಕಾಶದ ಪಕ್ಷಿಗಳಿಗೂ ಅದು ಅಪರಿಚಿತ.
22 'ನಮ್ಮ ಕಿವಿಗೆ ಬಿದ್ದಿದೆ ಅದರ ಸುದ್ದಿ ಮಾತ್ರ'
ಎನ್ನುತ್ತವೆ ಅಧೋಲೋಕ ಹಾಗು
ಮೃತ್ಯುಲೋಕ.
23 ಸುಜ್ಞಾನದ ಮಾರ್ಗ ಬಲ್ಲವನು ದೇವರೇ
ಅದರ ಸ್ಥಳಗೊತ್ತಿದೆ ಆತನೊಬ್ಬನಿಗೆ.

24 ಭೂಮಿಯ ಕಟ್ಟಕಡೆಯ ತನಕ
ದೃಷ್ಟಿಸಬಲ್ಲವನು ದೇವರೇ
ಆಕಾಶದ ಕೆಳಗಿನ ಸಮಸ್ತವನು ನೋಡ
ಬಲ್ಲವನು ಆತನೊಬ್ಬನೆ!
25 ಗಾಳಿಗೆ ತಕ್ಕ ವೇಗವನು ನೇಮಿಸಿದಾಗ
ಜಲಕ್ಕೆ ತಕ್ಕ ಜಾಗವನು ನಿರ್ಣಯಿಸಿದಾಗ,
26 ಮಳೆಗೆ ಕಟ್ಟಳೆಯನು ವಿಧಿಸಿದಾಗ
ಗುಡುಗು ಮಿಂಚಿಗೆ ಮಾರ್ಗವನ್ನೇರ್ಪಡಿಸಿದಾಗ,
27 ದೇವರು ಆ ಜ್ಞಾನವನು ಕಂಡು ಪರಿಗಣಿಸಿದನು
ಅದನು ಪರಿಶೋಧಿಸಿ ಪ್ರತಿಷ್ಠಾಪಿಸಿದನು.
28 ಬಳಿಕ ಮಾನವನಿಗೆ ಇಂತೆಂದನು:
'ಸರ್ವೇಶ್ವರನಲ್ಲಿ ಭಯಭಕ್ತಿ ಇಡುವುದೇ
ಸುಜ್ಞಾನ
ದುಷ್ಟತನವನ್ನು ಬಿಟ್ಟುಬಿಡುವುದೇ ವಿವೇಕ'."

**29** ಯೋಬನು ಮತ್ತೆ ಪ್ರಸ್ತಾಪವೆತ್ತಿ
ಇಂತೆಂದನು:
2 "ಕಳೆದುಹೋದ ದಿನಗಳಲಿ ಇದ್ದಂತೆ
ಈಗಲೂ ಇದ್ದಿದ್ದರೆ ಎಷ್ಟೋ
ಚೆನ್ನಾಗಿರುತ್ತಿತ್ತಲ್ಲವೆ!
ಆಗ ದೇವರು ನನ್ನನ್ನು ಕಪಾಡುತ್ತಿದ್ದನಲ್ಲವೆ?
3 ಆಗ ಬೆಳಗುತ್ತಿತ್ತು ಆತನ ದೀಪ ತಲೆಯಮೇಲೆ
ಇರುಳಲ್ಲೂ ಸಂಚರಿಸುತ್ತಿದ್ದೆ ಆತನ ಬೆಳಕಿನಲೇ.
4 ಆ ದಿನಗಳು ನನ್ನ ಜೀವಮಾನದ
ಸುಗ್ಗಿಕಾಲವಾಗಿತ್ತು
ದೇವರ ಪ್ರೀತಿ ನನ್ನ ಗುಡಾರವನ್ನು ಆವರಿಸಿತ್ತು.
5 ಸರ್ವಶಕ್ತನು ಆಗ ನನ್ನ ಸಂಗಡವಿದ್ದನು
ನನ್ನ ಸುತ್ತಲೂ ನನ್ನ ಮಕ್ಕಳು ಇರುತ್ತಿದ್ದರು.
6 ಹಾಲುತುಪ್ಪದಲ್ಲಿ ಪಾದ ತೊಳೆಯುತ್ತಿದ್ದೆ
ಎಣ್ಣೆಯನು ನದಿಯಂತೆ ಹರಿಸುತ್ತಿತ್ತಾ ದಿಣ್ಣೆ.
7 ನಾನು ಊರ ಮುಂದಿನ ಜಾವಡಿಗೆ ಹೋದಾಗ
ಚೌಕದ ಪೀಠದಲ್ಲಿ ಕುಳಿತುಕೊಂಡಾಗ,
8 ಯುವಕರು ಸರಿಯುತ್ತಿದ್ದರು ಪಕ್ಕಕ್ಕೆ
ಮುದುಕರು ಎದ್ದು ನಿಲ್ಲುತ್ತಿದ್ದರು ತಟ್ಟನೆ;
9 ಮಂತ್ರಿಗಳೂ ಕೈಯಿಟ್ಟು ಬಾಯ ಮೇಲೆ
ಮೌನತಾಳುತ್ತಿದ್ದರು ಮಾತೆತ್ತದೆ;
10 ಗಣ್ಯ ವ್ಯಕ್ತಿಗಳೂ ನಿಶ್ಯಬ್ದವಾಗುತ್ತಿದ್ದರು
ಅವರ ನಾಲಿಗೆ ಅಂಗುಳಕ್ಕೆ ಅಂಟಿರುತ್ತಿತ್ತು.
11 ಕೇಳಿದ ಕಿವಿ ನನ್ನನು ಧನ್ಯನೆನ್ನುತ್ತಿತ್ತು

ನೋಡಿದ ಕಣ್ಣು ನನ್ನನು ಗೌರವಿಸುತ್ತಿತ್ತು.
12 ಏಕೆಂದರೆ ಮೊರೆಯಿಡುತ್ತಿದ್ದ ಬಡವನನು
ಗತಿಯಿಲ್ಲದ ಅನಾಥನನು
ಆದರಿಸುತ್ತಿದ್ದೆ ನಾನು.
13 ಸಾಯುತ್ತಿದ್ದವನು ಹರಸುತ್ತಿದ್ದುದು ನನ್ನನೇ
ವಿಧವೆಯ ಹೃದಯ ನಲಿಯುವಂತೆ
ಮಾಡುತ್ತಿದ್ದುದು ನಾನೇ.
14 ಧರ್ಮವನ್ನು ನಾನು ಧರಿಸಿಕೊಂಡೆ; ಅದು ನನಗೆ
ಅಂಬರವಾಗಿತ್ತು
ನ್ಯಾಯನೀತಿ ನನಗೆ ನಿಲುವಂಗಿಯೂ ಪೇಟವೂ
ಆಗಿತ್ತು.
15 ಕುರುಡನಿಗೆ ನಾನು ಕಣ್ಣಾಗಿದ್ದೆ
ಕುಂಟನಿಗೆ ನಾನು ಕಾಲಾಗಿದ್ದೆ.
16 ದರಿದ್ರನಿಗೆ ತಂದೆಯಾಗಿದ್ದೆ
ಅಪರಿಚಿತರ ವ್ಯಾಜ್ಯವನು ತೀರಿಸುತ್ತಿದ್ದೆ.
17 ದುರ್ಜನರ ದವಡೆಯನು ಮುರಿಯುತ್ತಿದ್ದೆ.
ಅವರ ಹಲ್ಲುಗಳಿಂದಲೂ ಬೇಟೆಯನು
ಬಿಡಿಸುತ್ತಿದ್ದೆ.
18 ಆಗ ನಾನಿಂತೆಂದೆ: 'ನನ್ನ ಗೂಡಿನಲ್ಲೇ
ಹಾಯಾಗಿ ಸಾಯುವೆ
ನನ್ನ ದಿನಗಳು ಮರಳಿನಂತೆ
ಅಸಂಖ್ಯಾತವಾಗಿರುತ್ತವೆ.'
19 'ನನ್ನ ಬೇರುಗಳು ನೀರಿನವರೆಗೆ
ವ್ಯಾಪಿಸಿಕೊಂಡಿವೆ
ನನ್ನ ರೆಂಬೆಗಳ ಮೇಲೆ ರಾತ್ರಿಯೆಲ್ಲ
ಇಬ್ಬನಿ ಬಿದ್ದಿರುತ್ತದೆ.
20 'ನನ್ನ ಪ್ರತಿಷ್ಠತೆ ಹೊಸಹೊಸದಾಗಿ ಇರುತ್ತದೆ
ನನ್ನ ಕೈಯಲ್ಲಿ ಬಿಲ್ಲು ಬಲಗೊಳ್ಳುತ್ತಾ
ಇರುತ್ತದೆ'
21 ಜನರು ನನ್ನ ಮಾತಿಗೆ ಕಿವಿಗೊಡಲು
ಕಾದಿರುತ್ತಿದ್ದರು
ನನ್ನಾಲೋಚನೆಯನು ಅರಿಯಲು
ನಿಶ್ಯಬ್ದವಾಗಿರುತ್ತಿದ್ದರು.
22 ನಾನು ಮಾತಾಡಿದ ಮೇಲೆ ಅವರು
ಮಾತೆತ್ತುತ್ತಿರಲಿಲ್ಲ
ನನ್ನ ಮಾತು ಹನಿಹನಿಯಾಗಿ ಅವರ ಕಿವಿಗೆ
ಬೀಳುತ್ತಿತ್ತು.
23 ನನ್ನನ್ನು ಮಳೆಯಂತೆ ಎದುರುನೋಡುತ್ತಿದ್ದರು
ಮುಂಗಾರಿಗೋ ಎಂಬಂತೆ
ಬಾಯ್ದೆರೆಯುತ್ತಿದ್ದರು.

24 ಅವರು ಎದೆಗೆಟ್ಟಾಗ ನಾನು ನಗೆಬೀರುತ್ತಿದ್ದೆ
ನನ್ನ ಮುಖಕಾಂತಿಯಿಂದ ಹುರಿದುಂಬಿಸುತ್ತಿದ್ದೆ.
25 ನಾನು ಅವರಿಗೆ ಮಾರ್ಗದರ್ಶಕನಾಗಿದ್ದೆ
ಸೇನೆಗಳ ಮಧ್ಯೆ ರಾಜನಂತೆ ಮಂಡಿಸಿದ್ದೆ
ದುಃಖಿತರನು ಸುಧಾರಕನಂತೆ ಸಂತೈಸುತ್ತಿದ್ದೆ.

**30** “ಈಗಲಾದರೊ ನನಗಿಂತ ಚಿಕ್ಕವರು
ನನ್ನನ್ನು ಪರಿಹಾಸ್ಯಮಾಡುತ್ತಾರೆ.
ಇವರ ಹೆತ್ತವರು ನನ್ನ ಮುಂದೆ
ನಾಯಿಗಳೊಡನೆ ಇರಲೂ ಅಯೋಗ್ಯರು
ಎಂದೆಣಿಸಿದ್ದೆ.
2 ಅವರ ಭುಜಬಲದಿಂದ ನನಗೇನಾಗುತ್ತಿತ್ತು?
ಆಗ ಅವರ ಪುಷ್ಠಿಯು ಕುಗ್ಗಿಹೋಗಿತ್ತು!
3 ಕೊರತೆಯಿಂದ, ಬರದಿಂದ ಅವರು ಸೊರಗಿ
ಹೋಗಿದ್ದರು
ನಿನ್ನೆಯವರೆಗೂ ಹಾಳುಬೀಳಾದ ನೆಲವನ್ನು
ನೆಕ್ಕುತ್ತಿದ್ದರು.
4 ಚಕ್ಕೋತ ಸೊಪ್ಪುಗಳನ್ನು ಪೊದೆಗಳಿಂದ
ಕಿತ್ತು ತಿನ್ನುತ್ತಿದ್ದರು
ಜಾಲಿಯ ಬೇರೇ ಅವರಿಗೆ ಆಹಾರವಾಗಿತ್ತು.
5 ಜನರು ಅವರನ್ನು ತಳ್ಳಿಬಿಟ್ಟಿದ್ದರು
ಕಳ್ಳರನ್ನೋ ಎಂಬಂತೆ ಕೂಗಿ ಅಟ್ಟಿಬಿಟ್ಟಿದ್ದರು.
6 ವಾಸಮಾಡುತ್ತಿದ್ದರವರು ಭೀಕರ
ಡೊಂಗರುಗಳಲಿ,
ನೆಲದ ಬಿಲಗಳಲಿ, ಬಂಡೆಗಳ ಸಂದುಗಳಲ್ಲಿ.
7 ಅರಚಿಕೊಳ್ಳುತ್ತಿದ್ದರು ಪೊದೆಗಳ ನಡುವೆ
ಕೂಡಿಕೊಳ್ಳುತ್ತಿದ್ದರು ಮುಳ್ಳುಗಿಡಗಳ ಕೆಳಗೆ.
8 ಮೂರ್ಖರ ಮಕ್ಕಳು, ನೀಚ ಜಾತಿಯವರು
ನಾಡಿನಿಂದ ಹೊರದೂಡಲ್ಪಟ್ಟವರು
ಅವರಾಗಿದ್ದರು.
9 ಅಂಥವರ ಪಾವಣಿಗೆ ನಾನೀಗ ಗುರಿಯಾದೆ
ಅವರ ಕಟ್ಟುಕತೆಗಳಿಗೆ ಅಡ್ಡಹೆಸರಾದೆ.
10 ನನಗೆ ಅಸಹ್ಯಪಟ್ಟು ದೂರಸರಿಯುತ್ತಾರೆ
ನನ್ನ ಮೇಲೆ ಉಗುಳುವುದಕ್ಕೂ
ಹಿಂಜರಿಯದಿದ್ದಾರೆ.
11 ದೇವರು ನನ್ನ ಬಿಲ್ಲನು ಸಡಿಲಗೊಳಿಸಿ
ಪೆಟ್ಟಿಗೀಡಾಗಿಸಿದ್ದಾರೆ
ಅವರೋ ಕಡಿವಾಣವಿಲ್ಲದ ಕುದುರೆಗಳಂತೆ
ನನ್ನ ಮುಂದಿದ್ದಾರೆ.

12 ಕಲಹಗಾರರು ಎದ್ದಿದ್ದಾರೆ ನನ್ನ ಬಲಗಡೆಗೆ
ನನ್ನ ಕಾಲುಗಳನು ನೂಕುತ್ತಿದ್ದರೆ ಹಿಂದಕೆ
ಸಂಚುಹೂಡುತ್ತಿದ್ದಾರೆ ನನ್ನನ್ನು
ನಾಶಮಾಡಲಿಕೆ.
13 ನನ್ನ ಹಾದಿಯನು ಕಡಿದು ಹಾಕಿದ್ದಾರೆ
ನನ್ನ ಉಪದ್ರವವನ್ನು ಹೆಚ್ಚಿಸಿದ್ದಾರೆ
ಅವರನ್ನು ತಡೆಯಲು ಯಾರೂ ಇಲ್ಲದಿದ್ದಾರೆ.
14 ಅಗಲವಾದ ಕೋಟೆಬಿರುಕುಗಳಲಿ ನುಗ್ಗಿ
ಬರುತ್ತಿದ್ದಾರೆ
ಹಾಳುಬೀಳಿನಲಿ ನಿಂತಿರುವ ನನ್ನ ಮೇಲೆ
ಉರುಳಿಬೀಳಲಿದ್ದಾರೆ.
15 ಅಡ್ಡಿ ಆತಂಕಗಳು ನನ್ನನು ಸುತ್ತುವರೆದಿವೆ
ನನ್ನ ಮಾನಮರ್ಯಾದೆ ತೂರಿಹೋಗುತ್ತಿದೆ
ಗಾಳಿಯಂತೆ
ನನ್ನ ಯೋಗಕ್ಷೇಮ ತೇಲಿಹೋಗುತ್ತಿದೆ
ಮೋಡದಂತೆ.
16 ನನ್ನ ಮನ ಕರಗಿ ನೀರಾಗಿದೆ
ಬಾಧೆಗಳು ನನ್ನನು ಬಿಗಿಹಿಡಿದಿವೆ.
17 ಇರುಳು ನನ್ನೆಲುಬುಗಳನು ಕೊರೆದು ಕೀಳುತ್ತಿದೆ
ಸಂಕಟಗಳು ನನ್ನನು ಎಡೆಬಿಡದೆ ತಿನ್ನುತ್ತಿವೆ.
18 ನನ್ನ ಬಟ್ಟೆಯನು ಗಟ್ಟಿಯಾಗಿ ಹಿಡಿದಿದ್ದಾರೆ
ಕೊರಳಪಟ್ಟಿಯಂತೆ ಹಿಸುಕಿ ಹಿಂಡುತ್ತಿದ್ದಾರೆ.
19 ನನ್ನನು ಕೆಸರಿನಲ್ಲಿ ಕೆಡವಿದ್ದಾರೆ
ನನ್ನನು ಭಸ್ಮಕ್ಕೆ ಸಮಾನನನ್ನಾಗಿಸಿದ್ದಾರೆ.
20 ದೇವರೇ, ನಾನು ಮೊರೆಯಿಟ್ಟರೂ
ಉತ್ತರಕೊಡದಿರುವೆ
ನಾನೆದ್ದು ನಿಂತರೂ ನೀನು ಸುಮ್ಮನೆ
ನೋಡುತ್ತಿರುವೆ.
21 ನನಗೆ ನೀನು ಕ್ರೂರನಾಗಿಬಿಟ್ಟಿರುವೆ
ನಿನ್ನ ಭುಜಬಲದಿಂದ ಹಿಂಸಿಸುತ್ತಿರುವೆ.
22 ನನ್ನನು ಎತ್ತಿ ತೂರಿಬಿಟ್ಟಿರುವೆ ಬಿರುಗಾಳಿಗೆ
ತೊಳಲಾಡುತ್ತಿರುವೆನು ತುಫಾನಿನ ಆರ್ಭಟಕ್ಕೆ.
23 ನನ್ನನು ಮರಣಕ್ಕೆ ಗುರಿಮಾಡುವೆಯೆಂದು
ತಿಳಿದಿದೆ
ಸಮಸ್ತಜೀವಿಗಳು ತೆರಳುವ ಮಂದಿರಕ್ಕೆ
ಸೇರಿಸುವೆಯೆಂದು ಗೊತ್ತೇ ಇದೆ.
24 ಆದರೂ ಕೇಡಿಗೆ ಈಡಾದವನು
ಕೈಚಾಚುವುದಿಲ್ಲವೆ ಸಹಾಯಕ್ಕಾಗಿ?
ಆಪತ್ತಿಗೆ ಗುರಿಯಾದವನು
ಕೂಗಿಕೊಳ್ಳುವುದಿಲ್ಲವೆ ನೆರವಿಗಾಗಿ?

25 ಕಷ್ಟಾನುಭವಿಯನು ಕಂಡು ನಾನು
ಕಣ್ಣೀರಿಡಲಿಲ್ಲವೆ?
ದಟ್ಟದರಿದ್ರರಿಗೋಸ್ಕರ ನಾನು
ದುಃಖಪಡಲಿಲ್ಲವೆ?
26 ನಾನು ಒಳಿತನು ನಿರೀಕ್ಷಿಸಿದಾಗ ಕೇಡು
ಬಂದೊದಗಿತು
ಬೆಳಕನು ಎದುರು ನೋಡುವಾಗ ಕತ್ತಲು
ಕವಿಯಿತು.
27 ಕರುಳು ಕುದಿಯುತ್ತಿದೆ ಅಶಾಂತಿಯಿಂದ
ಬಂದೊದಗಿದೆ ನನಗೆ ಬಾಧೆಯ ದಿನ.
28 ಸಂತೈಸುವ ಸೂರ್ಯನಿಲ್ಲದೆ ಅಲೆಯುತ್ತಿರುವೆ
ಮಂಕು ಕವಿದು
ಅಂಗಲಾಚುತ್ತಿರುವೆ ಸಭೆಯ ಮಧ್ಯೆ ನಿಂತು.
29 ನರಿಗಳಿಗೆ ಸಹೋದರನಾಗಿರುವೆ
ಗೂಬೆಗಳಿಗೆ ನಾನು ಗೆಳೆಯನಾಗಿರುವೆ.
30 ನನ್ನ ಚರ್ಮ ಉದುರುತ್ತಿದೆ ಕರ್ರಗಾಗಿ
ನನ್ನೆಲುಬು ಉರಿಯುತ್ತಿದೆ ತಾಪಕ್ಕೊಳಗಾಗಿ.
31 ಅಳುವ ಧ್ವನಿ ಕೇಳಿಸುತ್ತಿದೆ ನನ್ನ ಕೊಳಲಿನಲಿ
ಗೋಳಾಟದ ಸ್ವರವಿದೆ ನನ್ನ ಕಿನ್ನರಿಯಲಿ."

**31** "ಕನ್ನೆಯನು (ಕಾಮದೃಷ್ಟಿಯಿಂದ)
ನೋಡೆನೆಂದು
ಮಾಡಿಕೊಂಡಿರುವೆ ನನ್ನ
ಕಣ್ಣುಗಳೊಡನೆ ಒಪ್ಪಂದವನು.
2 ಎಂಥ ಪಾಲನ್ನು ವಿಧಿಸಬಲ್ಲನು ದೇವರು
ಮೇಲಣಲೋಕದಿಂದ?
ಎಂಥ ಬಾಧ್ಯತೆಯನು ನೀಡಬಲ್ಲನು
ಸರ್ವಶಕ್ತನು ಮಹೋನ್ನತದಿಂದ?
3 ದುರ್ಜನರಿಗೆ ವಿಪತ್ತು ಬರಮಾಡುತ್ತಾನಲ್ಲವೆ?
ಕೇಡಿಗರಿಗೆ ಉಪದ್ರವ ಕೊಡುತ್ತಾನಲ್ಲವೆ?
4 ಆತ ನನ್ನ ನಡತೆಯನ್ನೂ ನೋಡುತ್ತಾನೆ;
ನನ್ನ ಹೆಜ್ಜೆಗಳನ್ನೂ ಎಣಿಸುತ್ತಾನಲ್ಲವೆ?
5 ನಾನು ಕಪಟ ಮಾರ್ಗದಲಿ ನಡೆದಿದ್ದರೆ
ಮೋಸವನ್ನು ಹಿಂಬಾಲಿಸಿ ಓಡಿದ್ದರೆ.
6 ತೂಗಿನೋಡಲಿ ನನ್ನನು ನ್ಯಾಯದ ತಕ್ಕಡಿಯಲಿ
ಹೀಗೆ ನನ್ನ ಸತ್ಯತೆಯನು ದೇವರು
ತಿಳಿದುಕೊಳ್ಳಲಿ.
7 ದಾರಿತಪ್ಪಿ ನಾನು ನಡೆದಿದ್ದರೆ
ನನ್ನ ಹೃದಯ, ಕಣ್ಗಳನ್ನು ಹಿಂಬಾಲಿಸಿದ್ದರೆ
ಕಲ್ಮಷ ನನ್ನ ಕೈಗೆ ಅಂಟಿಕೊಂಡಿದ್ದರೆ,

8 ನಾನು ಬಿತ್ತಿದ್ದನ್ನು ಮತ್ತೊಬ್ಬ ಉಣ್ಣಲಿ
ನನ್ನ ಬೆಳೆಯು ಬುಡಮೇಲಾಗಲಿ.
9 ನನ್ನ ಹೃದಯ ಪರಸ್ತ್ರೀಗೆ ಮಾರು ಹೋಗಿದ್ದರೆ
ನೆರೆಯವಳ ಬಾಗಿಲ ಬಳಿ ನಾನು ಹೊಂಚು
ಹಾಕಿದ್ದರೆ,
10 ನನ್ನ ಸತಿ ಮತ್ತೊಬ್ಬನಿಗೆ ಧಾನ್ಯಬೀಸುವ
ದಾಸಿಯಾಗಲಿ
ಅಂಥ ನನ್ನ ಸತಿಯೊಡನೆ ಇತರರು ಸಂಗಮಿಸಲಿ.
11 ಏಕೆಂದರೆ ಅಂಥ ನಡತೆ
ಕಾಮುಕತನವಾಗುತ್ತಿತ್ತು
ನ್ಯಾಯಾಧಿಪತಿಗಳ ದಂಡನೆಗೆ ತಕ್ಕ
ಅಪರಾಧವಾಗುತ್ತಿತ್ತು.
12 ನರಕ ಕೂಪದವರೆಗೆ ಬೆಂಕಿಯಾಗುತ್ತಿತ್ತು
ನನ್ನ ಆದಾಯವನ್ನೆಲ್ಲ ನಿರ್ಮೂಲ
ಮಾಡುತ್ತಿತ್ತು.
13 ನನ್ನ ದಾಸದಾಸಿಯರು ನನ್ನ ಮೇಲೆ
ತಪ್ಪುಹೊರಿಸಿದ್ದರೆ
ನಾನು ಆ ತಪ್ಪನು ಅಸಡ್ಡೆ ಮಾಡಿದವನಾಗಿದ್ದರೆ,
14 ದೇವರು ನ್ಯಾಯಸ್ಥಾಪನೆಗೆ ನಿಂತಾಗ ನಾನೇನು
ಮಾಡುತ್ತಿದ್ದೆ?
ಆತ ವಿಚಾರಣೆಗೆ ಬಂದಾಗ ನಾನೇನು ಉತ್ತರ
ಕೊಡುತ್ತಿದ್ದೆ?
15 ತಾಯಗರ್ಭದಲ್ಲಿ ನನ್ನ ನಿರ್ಮಿಸಿದಾತನೆ
ಅವರನೂ ನಿರ್ಮಿಸಲಿಲ್ಲವೆ?
ತಾಯಗರ್ಭದಲ್ಲಿ ನಮ್ಮನು ರೂಪಿಸಿದಾತ
ಅದೇ ದೇವರಲ್ಲವೆ?
16 ಬಡವರ ಬಯಕೆಗಳನು ನಾನು
ಭಂಗಪಡಿಸಿದೆನೋ?
ವಿಧವೆಯ ಕಣ್ಣುಗಳನು ನಾನು
ಮಂಕಾಗಿಸಿದೆನೋ?
17 ಅನಾಥರೊಂದಿಗೆ ಅನ್ನವನು ಹಂಚಿಕೊಳ್ಳದೆ
ತುತ್ತನ್ನೆಲ್ಲಾ ನಾನೇ ಒಂಟಿಯಾಗಿ ಉಂಡೆನೆ?
18 ಇಲ್ಲ, ಬಾಲ್ಯದಲ್ಲಿ ಅನಾಥನನು
ತಂದೆಯೋಪಾದಿಯಲಿ ಸಾಕಿದೆ
ಹುಟ್ಟಿದಂದಿನಿಂದ ಅನಾಥಳಿಗೆ
ದಾರಿತೋರಿಸಿದೆ.
19 ಬಟ್ಟೆಯಿಲ್ಲದ ಬಡವನನು ನೋಡಿದಾಗಲೆಲ್ಲ
ಹೊದಿಕೆಯಿಲ್ಲದೆ ನಡುಗುವುದನು
ಕಂಡಾಗಲೆಲ್ಲಾ.
20 ಅವರನು ನಾನು ಬೆಚ್ಚಗಾಗಿಸದೆ ಹೋಗಿದ್ದರೆ

ನನ್ನ ಕುರಿ ಉಣ್ಣೆಯಿಂದ,
ಅವರು ನನ್ನನು ಹರಸದೇ ಹೋಗಿದ್ದರೆ ತಮ್ಮ
ಅಂತರಾಳದಿಂದ,
21 'ನ್ಯಾಯಸ್ಥಾನದಲ್ಲಿ ನನಗೆ ಬೆಂಬಲವಿದೆ'
ಎಂದು ತಬ್ಬಲಿಯರ ಮೇಲೆ ನಾನು ಕೈ
ಮಾಡಿದ್ದರೆ.
22 ನನ್ನ ಹೆಗಲಿನ ಕೀಲು ತಪ್ಪಿಹೋಗಲಿ
ನನ್ನ ತೋಳು ಅದರ ಸಂದಿನಿಂದ ಕಳಚಿ ಬೀಳಲಿ.
23 ದೇವರಿಂದ ಬರುವ ವಿಪತ್ತಿನ ಬಗ್ಗೆ ನನಗಿದೆ
ಭಯ
ಆತನ ಪ್ರಭಾವದ ನಿಮಿತ್ತ ಇಂಥ ಕೃತ್ಯ ನನಗೆ
ದುಸ್ಸಾಧ್ಯ.
24 ಬಂಗಾರದಲಿ ನಾನು ಭರವಸೆಯಿಟ್ಟಿದ್ದರೆ
ಅಪರಂಜಿಯನೇ ನಾನು ನೆಚ್ಚಿಕೊಂಡಿದ್ದರೆ,
25 ನನ್ನ ಆಸ್ತಿ ಅಪಾರವೆಂದು ಕೊಚ್ಚಿಕೊಂಡಿದ್ದರೆ
ನಾನೇ ಸಂಪಾದಿಸಿದ ಸಂಪತ್ತೆಂದು
ಹೆಚ್ಚಳಪಟ್ಟಿದ್ದರೆ,
26 ಪ್ರಕಾಶಮಯ ಸೂರ್ಯನನು ನೋಡಿ
ಕ್ರಾಂತಿಯುತ ಚಂದ್ರನ ಚಲನೆಯನು ದಿಟ್ಟಿಸಿ,
27 ನನ್ನ ಹೃದಯ ಅವಕ್ಕೆ ಮಾರುಹೋಗಿದ್ದರೆ
ಬಾಯ್ಮೇಲೆ ಕೈಯಿಟ್ಟು ಅವನ್ನು ಆರಾಧಿಸಿದ್ದರೆ,
28 ಇದು ಕೂಡ ನ್ಯಾಯಾಧಿಪತಿಗಳ ದಂಡನೆಗೆ
ಯೋಗ್ಯವಾಗುತ್ತಿತ್ತು
ಮೇಲಣ ಲೋಕದ ದೇವರಿಗೆ
ದ್ರೋಹವೆಸಗಿದಂತಾಗುತ್ತಿತ್ತು.
29 ನನ್ನ ವೈರಿಗೆ ಕೇಡು ಬಂದಾಗ ನಾನು
ಹಿಗ್ಗಿದೆನೋ?
ಅವನ ವಿನಾಶಕ್ಕಾಗಿ ನಾನು ಸಂತೋಷ
ಪಟ್ಟೆನೋ?
30 ಇಲ್ಲ, ಅವನು ಸಾಯಲಿ ಎಂದು ನನ್ನ ಬಾಯಿ
ಶಪಿಸಿಲ್ಲ
ಅಂಥ ಪಾಪ ಕಟ್ಟಿಕೊಳ್ಳಲು ನನ್ನ ಮನ
ಒಪ್ಪಲಿಲ್ಲ.
31 'ಆತ ಬಡಿಸಿದ ಭೋಜನದಿಂದ
ತೃಪ್ತರಾಗದವರು ಎಲ್ಲಾದರೂ ಉಂಟೆ?'
ಎಂದು ನನ್ನ ಗುಡಾರದ ಆಳುಗಳೇ
ಹೇಳಿಕೊಳ್ಳುತ್ತಿದ್ದರಲ್ಲವೆ?
32 ಪರದೇಶೀಯರು ಹೊರಬೀದಿಯಲ್ಲಿ
ತಂಗಬೇಕಾಗಿರಲಿಲ್ಲ
ಪ್ರಯಾಣಿಕರಿಗೆ ನನ್ನ ಬಾಗಿಲು ಸದಾ

ತೆರೆದಿತ್ತಲ್ಲಾ.
33 ಜನ ಸಮುದಾಯಕ್ಕೆ ನಾನು ಹೆದರಿದ್ದರೆ
ಕುಲೀನರ ತಿರಸ್ಕಾರಕ್ಕೆ ನಾನು ಬೆದರಿದ್ದರೆ,
34 ಬಾಗಿಲನ್ನೂ ದಾಟದೆ ಒಳಗೇ ನಾನು
ಮೌನವಿದ್ದಿದ್ದರೆ
ಜನಸಾಮಾನ್ಯರಂತೆ ಪಾಪವನು ಮನದಲೆ
ಬಚ್ಚಿಟ್ಟಿದ್ದರೆ,
35 ನನ್ನ ಕರೆಗೆ ಕಿವಿಗೊಡುವನೊಬ್ಬನು ಈಗಿದ್ದರೆ
ಲೇಸಾಗಿರುತ್ತಿತ್ತು
(ಇಗೋ ನೋಡಿ, ನನ್ನ ಕೈರುಜು; ನನಗುತ್ತರ
ಕೊಡಲಿ ಸರ್ವಶಕ್ತನು;)
ಬರೆದುಕೊಡಲಿ ವಿರೋಧಿ ನನ್ನ ಆಪಾದನಾ
ಪತ್ರವನು.
36 ಆ ಲಿಖಿತವನ್ನು ಹೆಗಲ ಮೇಲೆ ಹೊತ್ತು
ನಡೆಯುತ್ತಿದ್ದೆ
ಅದನ್ನು ಪೇಟವಾಗಿ ತಲೆಗೆ ಸುತ್ತಿಕೊಳ್ಳುತ್ತಿದ್ದೆ.
37 ಅಧಿಪತಿಯಂತೆ ಆತನ ಸಾನಿಧ್ಯವನು ಸೇರುತ್ತಿದ್ದೆ
ಒಂದೊಂದು ಹೆಜ್ಜೆಯ ಲೆಕ್ಕವನು ಒಪ್ಪಿಸುತ್ತಿದ್ದೆ.
38 ನನ್ನ ಭೂಮಿ ನನಗೆ ವಿರುದ್ಧ ಪ್ರತಿಭಟಿಸಿದ್ದರೆ
ನೇಗಿಲ ಗೆರೆಗಳೆಲ್ಲ ನನ್ನನು ದೂರಿ
ರೋದಿಸಿದ್ದರೆ,
39 ಕೂಲಿಕೊಡದೆ ಆ ಭೂಮಿಯ ಫಲವನು ನಾನು
ಸವಿದಿದ್ದರೆ
ಅದರ ದಣಿಗಳ ಪ್ರಾಣಹಾನಿಗೆ ನಾನು
ಕಾರಣನಾಗಿದ್ದರೆ,
40 ಅದು ಬೆಳೆಯಲಿ ಮುಳ್ಳುಗಳನ್ನು ಗೋದಿಗೆ
ಬದಲಾಗಿ
ಹಣಜಿಹುಲ್ಲನು ಜವೆಗೋದಿಗೆ ಪ್ರತಿಯಾಗಿ."
ಇತಿ, ಯೋಬನ ಮಾತುಗಳು ಮುಗಿದವು.

**ಎಲೀಹುವನ ಭಾಷಣ**
(32.1 – 37.24)

**32** ಯೋಬನು ತಾನು ಸತ್ಯವಂತನೆಂದು ಸಾಧಿಸಿದ್ದನು. ಇದನ್ನು ಕೇಳಿದ ಅವನ ಮೂವರು ಮಿತ್ರರು
ವಾದಿಸುವುದನ್ನು ನಿಲ್ಲಿಸಿ ಬಿಟ್ಟರು. 2ಆಗ ಬೂಜ್‍ನವನಾದ ಬರಕೇಲನ ಮಗ ಎಲೀಹುವನಿಗೆ ಸಿಟ್ಟೇರಿತು.
ಇವನು ರಾಮ್ ಗೋತ್ರಕ್ಕೆ ಸೇರಿದವನು. ಯೋಬನು ತಾನು ದೇವರಿಗಿಂತ ನ್ಯಾಯವಂತನೆಂದು
ಎಣಿಸಿಕೊಂಡ ಕಾರಣ ಎಲೀಹುವನಿಗೆ ಸಿಟ್ಟು ಹತ್ತಿತ್ತು. 3ಯೋಬನ ಆ ಮೂವರು ಮಿತ್ರರ ಮೇಲೂ ಅವನು
ಕೋಪಗೊಂಡನು. ಏಕೆಂದರೆ ಯೋಬನಿಗೆ ತಕ್ಕ ಉತ್ತರ ಕೊಡಲಾಗದೆ ದೇವರನ್ನೇ ತಪ್ಪಿತಸ್ಥರನ್ನಾಗಿಸಿದ್ದರು.
4ಆ ಮಿತ್ರರು ತನಗಿಂತ ಹಿರಿಯವರಾಗಿದ್ದುದರಿಂದ ಎಲೀಹುವನು ಮೊದಲೇ ಮಾತನಾಡದೆ ಈವರೆಗೂ
ಕಾದುಕೊಂಡಿದ್ದನು. 5ಆ ಮೂವರ ಬಾಯಿಯಲ್ಲಿ ಉತ್ತರವೇ ಇಲ್ಲದುದನ್ನು ಕಂಡು ಕಿಡಿಕಿಡಿಯಾದನು.

6 ಆಗ ಬೂಜಿನವನಾದ ಬರಕೇಲನ ಮಗ
ಎಲೀಹುವನು ಕೊಟ್ಟ ಉತ್ತರ:
"ನಾನು ಕಿರಿಯವನು, ನೀವು ಎಷ್ಟೋ
ಹಿರಿಯವರು
ಎಂದೇ ಸಂಕೋಚಪಟ್ಟೆನು
ನನ್ನ ಅಭಿಪ್ರಾಯ ತಿಳಿಸಲು ಅಂಜಿದೆನು.
7 ದೊಡ್ಡವರು ಮಾತಾಡಲಿ ಎಂದುಕೊಂಡೆನು
ವಯೋವೃದ್ಧರು ಸುಜ್ಞಾನವನು ಬೋಧಿಸಲಿ
ಎಂದೆನು.
8 ಆದರೆ ಮಾನವರಿಗುಂಟು ಒಂದು ಆತ್ಮ
ಸರ್ವಶಕ್ತ ಸ್ವಾಮಿಯ ಉಸಿರಿನ ಮೂಲಕ
ಅವರಿಗೆ ದೊರಕುತ್ತದೆ ವಿವೇಕ.
9 ವಯೋವೃದ್ಧರು ಮಾತ್ರ ಜ್ಞಾನಿಗಳಲ್ಲ
ಮುದುಕರು ಮಾತ್ರ ನ್ಯಾಯಬಲ್ಲವರಲ್ಲ.
10 ಆದ ಕಾರಣ ನನ್ನ ಕಡೆಗೂ ಕಿವಿಗೊಡಿ
ನನ್ನ ಅಭಿಪ್ರಾಯ ತಿಳಿಸುತ್ತೇನೆ, ಕೇಳಿ:
11 ನೀವು ಆಡುತ್ತಿದ್ದ ಮಾತುಗಳನು, ಮಾಡುತ್ತಿದ್ದ
ಆಲೋಚನೆಗಳನು
ಮುಂದಿಡುತ್ತಿದ್ದ ವಾದಗಳನು ನಾನು ಕಾದು
ಕೇಳುತ್ತಿದ್ದೆನು.
12 ಯೋಬನನು ಖಂಡಿಸಬಲ್ಲವನು, ಅವನಿಗೆ ತಕ್ಕ
ಉತ್ತರಕೊಡಬಲ್ಲವನು
ನಿಮ್ಮಲ್ಲಿ ಯಾರೂ ಇಲ್ಲದಿರುವುದನು ನಾನು
ಗಮನಿಸಿದೆನು.
13 'ನಿಮಗೆ ಬುದ್ಧಿ ಬಂದಿದೆ' ಎಂದುಕೊಳ್ಳಬೇಡಿ
'ದೇವರೇ ಅವನನು ಖಂಡಿಸಲಿ,
ನರನಿಂದಾಗದು,' ಎನ್ನದಿರಿ.
14 ಯೋಬನು ನನ್ನೊಡನೆ ವಾದಮಾಡಲಿಲ್ಲ
ನಿಮ್ಮ ಹಾಗೆ ಅವನಿಗೆ ನಾನು
ಉತ್ತರಿಸುವುದಿಲ್ಲ.
15 "ಯೋಬನೇ, ಇವರು ಉತ್ತರಿಸದೆ
ನಿಬ್ಬೆರಗಾಗಿರುವರು
ಇವರ ಸೊಲ್ಲೇ ಅಡಗಿಹೋಗಿರುವುದು.
16 ಉತ್ತರ ಕೊಡಲಾಗದೆ ಇವರು
ಮೌನದಿಂದಿರಲು
ನಾನಿನ್ನೂ ಸುಮ್ಮನೆ ಕಾದುಕೊಂಡಿರಲಾಗದು.
17 ನಾನು ನನ್ನ ಪಾಲಿನ ಉತ್ತರವನು ಹೇಳುವೆನು
ನಿನಗೆ ನನ್ನ ಅಭಿಪ್ರಾಯವನು ತಿಳಿಸುವೆನು.
18 ಹೇಳಬೇಕಾದವು ನನ್ನಲ್ಲಿ ತುಂಬಿವೆ
ಹೇಳಲು ನನ್ನ ಅಂತರಾತ್ಮ ಒತ್ತಾಯ

ಪಡಿಸುತ್ತಿದೆ.
19 ದ್ರಾಕ್ಷಾರಸ ತುಂಬಿ ಬಾಯಿಕಟ್ಟಿದ
ಹೊಸಬುದ್ದಲಿಯಂತೆ
ನನ್ನ ಅಂತರಂಗವು ಬಿರಿದು ಒಡೆದುಹೋಗುವ
ಹಾಗಿದೆ.
20 ತುಟಿತೆರೆದು ನಾನು ಉತ್ತರಿಸಲೇಬೇಕು
ನೆಮ್ಮದಿಯಿಂದಿರಲು ನಾನು ಮಾತಾಡಲೇ
ಬೇಕು.
21 ನಾನಾರಿಗೂ ಮುಖದಾಕ್ಷಿಣ್ಯ ತೋರುವುದಿಲ್ಲ
ಯಾವ ಮಾನವನಿಗೂ ಮುಖಸ್ತುತಿ
ಸಲ್ಲಿಸುವುದಿಲ್ಲ.
22 ಮುಖಸ್ತುತಿ ಮಾಡಲು ನನ್ನಿಂದಾಗುವುದಿಲ್ಲ
ಮಾಡಿದರೆ ಸೃಷ್ಟಿಕರ್ತ ನನ್ನನು ಬೇಗ ನಿರ್ಮೂಲ
ಮಾಡಬಲ್ಲ."

**33** "ಇಂತಿರಲು, ಯೋಬನೇ, ನನ್ನ
ಮಾತುಗಳಿಗೆ ಕಿವಿಗೊಡು:
ನಾನು ಹೇಳುವುದನ್ನೆಲ್ಲಾ ಗಮನವಿಟ್ಟು ಕೇಳು.
2 ಇಗೋ, ಮಾತಾಡಲು ತೊಡಗಿದ್ದೇನೆ
ನನ್ನ ನಾಲಿಗೆ ಬಾಯಲ್ಲಿ ತುಡುಕುತ್ತಿದೆ.
3 ನನ್ನ ನುಡಿ ವ್ಯಕ್ತಪಡಿಸುತ್ತದೆ ಹೃದಯದ
ಯಥಾರ್ಥತೆಯನು
ನನ್ನ ತುಟಿ ನುಡಿಯುತ್ತದೆ ಸತ್ಯವೆಂದು
ಅರಿತವುಗಳನು.
4 ನಾನು ನಿರ್ಮಿತನಾಗಿದ್ದೇನೆ ದೇವರಾತ್ಮನಿಂದ
ನನಗೆ ಜೀವ ಉಂಟಾಗಿದೆ ಸರ್ವಶಕ್ತನ
ಶ್ವಾಸದಿಂದ.
5 ನಿನಗೆ ಸಾಮರ್ಥ್ಯವಿದ್ದರೆ ನನಗೆ ಉತ್ತರ ಕೊಡು
ನನ್ನ ಎದುರಿನಲ್ಲೇ ನಿಂತು ವಾದಮಾಡು.
6 ನೋಡು, ನಾನು ಕೂಡ ಜೇಡಿಮಣ್ಣಿನಿಂದ
ರೂಪಿತನು
ದೇವರ ದೃಷ್ಟಿಯಲ್ಲಿ ನಿನ್ನ ಹಾಗೆಯೇ
ಇರುವವನು.
7 ಆದ್ದರಿಂದ ನೀನು ನನಗೆ ಅಂಜಬೇಕಾಗಿಲ್ಲ
ನನ್ನ ಕೈ ಬಲ ನಿನಗೆ ಹೊರೆಯಾಗಿರುವುದಿಲ್ಲ
8 ನನಗೆ ಸ್ಪಷ್ಟವಾಗಿ ಕೇಳಿಸುವಂತೆ ನೀನು
ಮಾತಾಡಿರುವೆ
ನನ್ನ ಕಿವಿಗೆ ಬಿದ್ದ ಈ ಮಾತುಗಳು ನಿನ್ನವೇ
ಆಗಿವೆ.

9 'ನಾನು ಪರಿಶುದ್ಧನು, ನಿರ್ದೋಷಿ
ನಾನು ನಿರ್ಮಲನು, ನಿರಪರಾಧಿ.
10 'ಆದರೂ ನನ್ನಲ್ಲಿ ದೇವರು
ತಪ್ಪುಕಂಡು ಹಿಡಿಯಬೇಕೆಂದಿದ್ದಾನೆ
ನನ್ನನ್ನು ತನ್ನ ಶತ್ರುವೆಂದೇ ಭಾವಿಸಿದ್ದಾನೆ.
11 'ನನ್ನ ಕಾಲುಗಳಿಗೆ ಕೋಳತೊಡಿಸಿದ್ದಾನೆ
ನನ್ನ ಎಲ್ಲ ಹಾದಿಗಳನ್ನು ಕಂಡುಕೊಂಡಿದ್ದಾನೆ.'
12 ಹೀಗೆ ನೀನು ನುಡಿದದ್ದು ಸರಿಯಲ್ಲವೆಂಬುದೇ
ನನ್ನ ಉತ್ತರ;
ದೇವರು ಮನುಷ್ಯರಿಗಿಂತ ದೊಡ್ಡವನು
ಎಂಬುದೇ ಇದಕ್ಕೆ ಆಧಾರ.
13 ಆತ ನಿನ್ನ ಯಾವ ಮಾತಿಗೂ ಉತ್ತರ ಕೊಡಲಿಲ್ಲ
ಎಂದ ಮಾತ್ರಕ್ಕೆ ನೀನು ಆತನೊಡನೆ
ವ್ಯಾಜ್ಯವಾಡುವುದು ಸರಿಯಲ್ಲ.
14 ದೇವರು ಪದೇ ಪದೇ ಮಾತನಾಡಿದರೂ
ನರಮಾನವನು ಗ್ರಹಿಸಿಕೊಳ್ಳುವುದಿಲ್ಲ.
15 ಮಾನವನಿಗೆ ಗಾಢನಿದ್ರೆ ಬಂದಾಗ
ಹಾಸಿಗೆಮೇಲೆ ಮಲಗಿರುವಾಗ
ಸ್ವಪ್ನಬಿದ್ದಾಗ, ಕನಸುಕಾಣುವಾಗ,
16 ದೇವರು ಅವನ ಕಿವಿಗಳನ್ನು ತೆರೆಯುತ್ತಾನೆ
ಉಪದೇಶಮಾಡಿ ಎಚ್ಚರಿಕೆ ನೀಡುತ್ತಾನೆ.
17 ಹೀಗೆ ದುಷ್ಕಾರ್ಯದಿಂದ ಮನುಷ್ಯನನ್ನು
ತಪ್ಪಿಸುತ್ತಾನೆ
ಅವನ ಅಹಂಕಾರ ಗರ್ವವನು ಅಡಗಿಸುತ್ತಾನೆ.
18 ಅವನ ಆತ್ಮ ಅಧೋಲೋಕಕ್ಕಿಳಿಯದಂತೆ
ತಡೆಯುತ್ತಾನೆ
ಅವನ ಪ್ರಾಣ ಕತ್ತಿಗೆ ತುತ್ತಾಗದಂತೆ
ಕಾಪಾಡುತ್ತಾನೆ.
19 ಇದಲ್ಲದೆ, ಮಾನವ ವ್ಯಾಧಿಯಿಂದ ಹಾಸಿಗೆ
ಹಿಡಿದಿರುವಾಗ
ಅವನನ್ನು ತಿದ್ದುತ್ತಾನೆ ಅವನ ದೇಹ
ನರಳುತ್ತಿರುವಾಗ.
20 ಅವನಿಗೆ ಆಹಾರವೂ ಬೇಸರವಾಗುವುದು
ಮೃಷ್ಟಾನ್ನವೂ ಅಸಹ್ಯವಾಗುವುದು.
21 ಅವನ ಮಾಂಸಖಂಡ ಕರಗಿಹೋಗುವುದು
ಅವನ ಅಸ್ಥಿಪಂಜರ ಎದ್ದು ಕಾಣುವುದು.
22 ಅವನ ಆತ್ಮ ಅಧೋಲೋಕವನ್ನು
ಸಮೀಪಿಸುವುದು
ಅವನ ಪ್ರಾಣ ಮೃತ್ಯುದೂತರಿಗೆ
ಹತ್ತಿರವಾಗುವುದು.

23 ಆದರೆ ಸಹಸ್ರ ದೂತರಲ್ಲೊಬ್ಬ ಮಧ್ಯಸ್ಥನಾಗಿ
ಅವನ ಪಕ್ಕದಲ್ಲಿ ನಿಂತು ಅವನ
ಕರ್ತವ್ಯವೇನೆಂದು ತಿಳಿಸಿ,
24 'ಇವನನ್ನು ಕಾಪಾಡಿ; ಅಧೋಲೋಕಕ್ಕೆ
ತಳ್ಳಬೇಡಿ,
ಬಿಡುಗಡೆ ಬೇಕಾದ ಈಡು ಇದೋ ಇಲ್ಲಿ!'
ಎಂದು ಹೇಳಿದರೆ,
25 ಅವನ ದೇಹ ಬಾಲ್ಯಕಿಂತಲೂ
ಕೋಮಲವಾಗುವುದು
ಎಳೆತನದ ಚೈತನ್ಯವನ್ನು ಮತ್ತೆ
ಅನುಭವಿಸುವನು.
26 ಆಗ ಅವನು ದೇವರಿಗೆ ಪ್ರಾರ್ಥನೆ ಮಾಡುವನು
ಆತನ ಒಲುಮೆಗೆ ಪಾತ್ರನಾಗುವನು.
ಹರ್ಷೋದ್ಗಾರದಿಂದ ಆತನ ಸನ್ನಿಧಿಗೆ
ಬರುವನು
ಮತ್ತೆ ಆತನಿಂದ ಸತ್ಯಂತ ಎನಿಸಿಕೊಳ್ಳುವನು.
27 ಆಗ ಅವನು ಜನರ ಮುಂದೆ ಈ ಪರಿ
ಹಾಡುವನು:
'ಪಾಪ ಮಾಡಿದೆ; ಸನ್ಮಾರ್ಗ ಬಿಟ್ಟು ನಡೆದೆ
ಆದರೂ ದಂಡಿಸಲಿಲ್ಲ ದೇವರು ನನ್ನ ಪಾಪಕ್ಕೆ
ತಕ್ಕಂತೆ.
28 ವಿಮೋಚಿಸಿದ್ದಾನೆ ನನ್ನ ಆತ್ಮ ಅಧೋಲೋಕ
ಸೇರದಂತೆ
ನನ್ನ ಜೀವವು ಜ್ಯೋತಿಯನು ಕಾಣುವಂತೆ.'
29 ಇದನ್ನೆಲ್ಲ ನೀಡುವವನು ಆ ದೇವರೇ
ಇಮ್ಮಡಿ ಮುಮ್ಮಡಿಯಾಗಿ ನೀಡುವನು
ಮನುಜನಿಗೆ.
30 ಅವನ ಆತ್ಮವನು ಅಧೋಲೋಕದಿಂದ
ಹಿಂದಿರುಗಿಸುವನು
ಜೀವಲೋಕದ ಬೆಳಕನು ಅನುಭವಿಸುವಂತೆ
ಮಾಡುವನು.
31 ಯೋಬನೇ, ನನ್ನ ಮಾತಿಗೆ ಕಿವಿಗೊಡು,
ಮೌನದಿಂದ ಕೇಳು, ನಾನೇ ಮಾತಾಡಲಿರುವೆ:
32 ಏನಾದರೂ ಹೇಳಬೇಕೆಂದಿದ್ದರೆ ಹೇಳು,
ಉತ್ತರಕೊಡು ನನಗೆ,
ನೀನು ಸತ್ಯವಂತನೆಂದು ಸ್ಥಾಪಿಸಬೇಕೆಂಬುದೇ
ನನ್ನ ಬಯಕೆ.
33 ಇಲ್ಲವಾದರೆ ಸುಮ್ಮನಿದ್ದು ಕಿವಿಗೊಡು
ನಿನಗೆ ಬೋಧಿಸುವೆನು ಸುಜ್ಞಾನವನು."

## ಎಲೀಹುವನ ಎರಡನೆಯ ಭಾಷಣ

**34** ಎಲೀಹುವನು ಮತ್ತೆ ಹೀಗೆಂದನು:

2 “ಜ್ಞಾನಿಗಳೇ, ನನ್ನ ಮಾತನ್ನು
ಗಮನಿಸಿ:
ಮೇಧಾವಿಗಳೇ, ನನಗೆ ಕಿವಿಗೊಡಿ:
3 ನಾಲಿಗೆ ಆಹಾರವನು ರುಚಿನೋಡುವಂತೆ
ಕಿವಿ ನುಡಿಮಾತುಗಳನು ವಿವೇಚಿಸುತ್ತದೆ.
4 ಸರಿಯಾದುದನ್ನೇ ಆಯ್ದುಕೊಳ್ಳೋಣ
ಒಳಿತಾದುದನ್ನು ನಮ್ಮ ನಮ್ಮಲ್ಲೇ
ನಿಶ್ಚಯಿಸಿಕೊಳ್ಳೋಣ.
5 ಇಂತಿದೆ ಯೋಬನ ವಾದ – ‘ನಾನು ಸತ್ಯವಂತ
ನನಗೆ ದೇವರಿಂದ ನ್ಯಾಯದೊರೆತಿಲ್ಲ.
6 ನನ್ನಲ್ಲಿ ನ್ಯಾಯವಿದ್ದರೂ
ಸುಳ್ಳುಗಾರನೆನಿಸಿಕೊಂಡಿದ್ದೇನೆ
ನಿರ್ದೋಷಿಯಾಗಿದ್ದರೂ ನನಗೆ ದೇವರ ಪೆಟ್ಟು
ಬಾಣಬಿಟ್ಟಂತಿದೆ.’
7 ಈ ಯೋಬನಂಥ ಮನುಜನು ಯಾರಿದ್ದಾನೆ?
ಇಗೋ, ದೇವದೂಷಣೆಯನು ನೀರಿನಂತೆ
ಕುಡಿಯುತ್ತಿದ್ದಾನೆ!
8 ಇವನು ದುರ್ಜನರ ಸಂಗಡ ಸಂಚರಿಸುವವನು
ಕೆಡುಕರ ಸಂಗಡ ನಡೆದಾಡುವವನು.
9 ದೇವರನು ಪ್ರೀತಿಸಿ ಬಾಳುವುದರಿಂದ
ಪ್ರಯೋಜನವಿಲ್ಲವೆಂಬುದು ಇವನ ವಾದ.
10 ಹೀಗಿರಲು ಬುದ್ಧಿವಂತರೇ, ನನ್ನ ಮಾತುಗಳಿಗೆ
ಕಿವಿಗೊಡಿ
ದೇವರು ಕೆಟ್ಟದ್ದನು ಮಾಡಿಯಾನೆಂಬ
ಯೋಚನೆ ದೂರವಿರಲಿ
ಸರ್ವಶಕ್ತನು ಅನ್ಯಾಯವನು ಎಸಗಿಯಾನೆಂಬ
ಭಾವನೆ ಬಾರದಿರಲಿ.
11 ದೇವರು ನರನಿಗೆ ಅವನ ಕೃತ್ಯಗಳಿಗೆ ತಕ್ಕಂತೆ
ಪ್ರತಿಫಲವನ್ನೀಯುತ್ತಾನೆ
ಪ್ರತಿಯೊಬ್ಬನು ಅವನವನ ಕರ್ಮಕ್ಕೆ ತಕ್ಕಂತೆ
ಅನುಭವಿಸಮಾಡುತ್ತಾನೆ.
12 ಹೌದು, ದೇವರು ಎಂದಿಗೂ ಕೆಡುಕನು ಮಾಡನು
ಸರ್ವಶಕ್ತನು ಎಂದಿಗೂ ನೇರವಾದುದನು
ಡೊಂಕುಮಾಡನು.
13 ಭೂಲೋಕವನು ಆತನ ವಶಕ್ಕೆ ಕೊಟ್ಟವನುಂಟೆ?
ಆತನಲ್ಲದೆ ಭೂಮಂಡಲವನು
ಕ್ರಮಪಡಿಸಿದವನುಂಟೆ?

14 ದೇವರು ಮನಸ್ಸುಮಾಡಿ ತನ್ನ ಆತ್ಮವನ್ನು
ಹಿಂದಕ್ಕೆ ತೆಗೆದುಕೊಂಡನಾದರೆ
ತನ್ನ ಶ್ವಾಸವನ್ನು ಹಿಂದಕ್ಕೆ
ಎಳೆದುಕೊಂಡನಾದರೆ,
15 ಸಮಸ್ತ ಜನರು ಒಟ್ಟಾಗಿ ಅಳಿದು ಹೋಗುವರು
ಮರಳಿ ಮನುಷ್ಯರೆಲ್ಲರೂ ಮಣ್ಣಾಗಿ
ಮಾರ್ಪಡುವರು.
16 ಬುದ್ಧಿಯಿದ್ದರೆ ಇದನು ಕೇಳಿ
ನನ್ನ ಮಾತಿನ ದನಿಗೆ ಕಿವಿಗೊಡಿ.
17 ನ್ಯಾಯವನ್ನು ದ್ವೇಷಿಸುವವನು, ಶಿಸ್ತನು
ಪಾಲಿಸುವನೋ?
ಸತ್ಯಸ್ವರೂಪಿ, ಸರ್ವಶಕ್ತ ಆದ ದೇವರನು
ಕೆಟ್ಟವನೆನ್ನುವಿಯೋ?
18 ದೇವರು ರಾಜನಿಗೆ "ಮೂರ್ಖ" ಎಂದು
ಹೇಳಬಲ್ಲನು
ಪ್ರಭುಗಳನ್ನು "ದುಷ್ಟರು" ಎಂದು
ಕರೆಯಬಲ್ಲನು.
19 ಅಧಿಪತಿಗಳಿಗೆ ಮುಖದಾಕ್ಷಿಣ್ಯವನ್ನು
ತೋರಿಸನು
ಬಡವ-ಬಲ್ಲಿದನೆಂಬ ಭೇದವನ್ನು ಮಾಡನು.
ಏಕೆಂದರೆ ಅವರೆಲ್ಲರು ಆ ದೇವನಿಂದಲೇ
ಸೃಷ್ಟಿಯಾದವರು.
20 ಕ್ಷಣಮಾತ್ರದೊಳು, ನಡುರಾತ್ರಿಯೊಳು
ಸತ್ತುಹೋಗುವರು
ನಾಡಿನ ಪ್ರಜೆಗಳು ತಲ್ಲಣಗೊಂಡು ಇಲ್ಲದೆ
ಹೋಗುವರು
ಮನುಷ್ಯರ ಕೈಸೋಂಕದೆಯೆ ಪರಾಕ್ರಮಿಗಳು
ಮಾಯವಾಗುವರು.
21 ದೇವರ ಕಣ್ಣು ಮನುಷ್ಯನ ಮಾರ್ಗಗಳ ಮೇಲೆ
ಅವನ ಹೆಜ್ಜೆಗಳೆಲ್ಲ ಗೋಚರವಾಗಿವೆ ಆತನಿಗೆ.
22 ಆತನ ದೃಷ್ಟಿಯಿಂದ ದುರುಳರು
ಅಡಗಿಕೊಳ್ಳುವಂತಿಲ್ಲ
ಅಂಥವರನ್ನು ಅಡಗಿಸಬಲ್ಲ ಇರುಳಿಲ್ಲ,
ಕಾರಿರುಳೂ ಇಲ್ಲ.
23 ದೇವರು ಮನುಷ್ಯನ ಮೇಲೆ ಹೆಚ್ಚು ಗಮನ
ಇಡಬೇಕಾಗಿಲ್ಲ
ಅವನನ್ನು ನ್ಯಾಯವಿಚಾರಣೆಗೆ ಕರೆಯುವ
ಅವಶ್ಯಕತೆ ಇಲ್ಲ.
24 ವಿಚಾರಣೆ ಇಲ್ಲದೆಯೆ ಪರಾಕ್ರಮಿಗಳನು
ಸದೆಬಡಿಯುವನು

ಅವರ ಸ್ಥಾನದಲ್ಲಿ ಇತರರನ್ನು ನಿಲ್ಲಿಸಬಲ್ಲನು.
25 ದುಷ್ಕಾರ್ಯಗಳು ಆತನಿಗೆ ತಿಳಿದಿರುವ ಕಾರಣ
ಇರುಳಲ್ಲೇ ದುರುಳರನು ಕೆಡವಿ ನಾಶಕ್ಕೆ
ಗುರಿಮಾಡುವನು.
26 ಅಪರಾಧಿಗಳಂತೆ ಅವರನು ದಂಡಿಸುವನು
ಎಲ್ಲರು ನೋಡುವಂತೆ ಅವರನು
ಖಂಡಿಸುವನು.
27 ದೇವರ ಮಾರ್ಗಗಳೆಲ್ಲವನು ಅವರು ಅಲಕ್ಷ್ಯ
ಮಾಡಿದರು
ಆತನಿಗೆ ವಿಧೇಯರಾಗದೆ ತಿರುಗಿಬಿದ್ದರು.
28 ಬಡವರ ಗೋಳಾಟ ದೇವರಿಗೆ ಮುಟ್ಟುವಂತೆ
ಮಾಡಿದ್ದರು
ದಿಕ್ಕಿಲ್ಲದವರ ಗೋಗರೆತ ಆತನ ಕಿವಿಗೆ
ಬೀಳುವಂತೆ ಮಾಡಿದ್ದರು.
29 ವ್ಯಕ್ತಿಯಾಗಿರಲಿ, ರಾಷ್ಟ್ರವಾಗಿರಲಿ,
ಯಾರಾಗಿದ್ದರೇನು?
ದೇವರು ಸುಮ್ಮನಿದ್ದರೆ ತಪ್ಪು
ಹೊರಿಸುವವರಾರು?
ವಿಮುಖನಾದರೆ ಆತನ ದರ್ಶನ
ಪಡೆಯಬಲ್ಲವರಾರು?
30 ಭಕ್ತಿಹೀನನು ಜನರನು ಆಳಬಾರದು
ಅಂಥವನು ಜನರಿಗೆ ಉರುಲಾಗಬಾರದು.
31 ಅಂಥ ಮನುಷ್ಯನು ದೇವರಿಗೆ:
'ಪ್ರಾಯಶ್ಚಿತ್ತ ಮಾಡಿರುವೆ, ಇನ್ನು ಮುಂದೆ
ಪಾಪಮಾಡೆ.
32 ಕಾಣದಿರುವ ಮಾರ್ಗವನ್ನು ತೋರೆನತೆ
ತಪ್ಪುಮಾಡಿದ್ದರೂ ಮತ್ತೆ ಮಾಡೆ' ಎಂದು
ಹೇಳಿದ್ದಾದರೆ,
33 ದೇವರು ಅಂಥವರನ್ನು
ದಂಡಿಸಬೇಕೆನ್ನುತ್ತೀಯೋ?
ಆತನ ತೀರ್ಪನ್ನು ನೀನೇ
ಅಲ್ಲಗಳೆದಿರುವೆಯಲ್ಲವೆ?
ಈಗ ನಾನು ಹೇಳಲಾರೆ, ನೀನೇ ಹೇಳು,
ನಿನ್ನ ಅಭಿಪ್ರಾಯವನು ನಮಗೆ ತಿಳಿಸು.
34 ಬುದ್ಧಿವಂತರು, ನನ್ನನಾಲಿಸಿದ ಜ್ಞಾನಿಗಳು
ನಿನ್ನ ವಿಷಯವಾಗಿ ಹೇಳುವ ಮಾತುಗಳಿವು:
35 'ಯೋಬನು ತಿಳುವಳಿಕೆಯಿಲ್ಲದೆ ನುಡಿ
ದಿದ್ದಾನೆ
ಅವನ ಮಾತುಗಳಲ್ಲಿ ಬುದ್ಧಿವಂತಿಕೆ ಇಲ್ಲ.
36 ಅವನ ಪರಿಶೋಧನೆ ಇನ್ನೂ ಮುಂದುವರೆದರೆ

ಒಳಿತು
ಅವನು ಕೊಟ್ಟ ಉತ್ತರ ದುರುಳರಿಗೆ
ತಕ್ಕುದಾದುದು.
37 ಅವನು ಅಪರಾಧಿ ಮಾತ್ರವಲ್ಲ,
ದೇವದ್ರೋಹವೆಸಗಿದ್ದಾನೆ
ನಮ್ಮ ಮಧ್ಯೆ ಸಂದೇಹವನು ಎಬ್ಬಿಸಿದ್ದಾನೆ
ದೇವರಿಗೆ ವಿರುದ್ಧವಾಗಿ ಅಧಿಕ
ಪ್ರಸಂಗಮಾಡುತ್ತಾನೆ'."

## ಎಲೀಹುವನ ಮೂರನೇ ಭಾಷಣ

**35** ಎಲೀಹುವನು ಮತ್ತೆ ಹೀಗೆಂದು
ಹೇಳಿದನು:
2 " 'ಸಜ್ಜನನಾಗಿ ಬಾಳಿ ನನಗಾದ
ಪ್ರಯೋಜನವೇನು?
ಪಾಪರಹಿತನಾಗಿ ಜೀವಿಸಿ ನನಗೆ ಬಂದ
ಲಾಭವೇನು'
3 ಈ ರೀತಿ ನೀನು ನುಡಿಯುವುದು ನ್ಯಾಯವೆಂದು
ಊಹಿಸುತ್ತೀಯೋ?
ನಿನ್ನ ನೀತಿ ದೇವರ ನೀತಿಗಿಂತ
ಮಿಗಿಲಾದುದೆನ್ನುತ್ತೀಯೋ?
4 ನಾನು ನಿನಗೆ ಉತ್ತರ ಕೊಡುತ್ತೇನೆ
ನಿನ್ನ ಮಿತ್ರರಿಗೂ ಪ್ರತ್ಯುತ್ತರ ನೀಡುತ್ತೇನೆ.
5 ಗಗನ ಮಂಡಲವನು ಕಣ್ಣೆತ್ತಿ ನೋಡು
ನಿನಗೂ ಎಷ್ಟೋ ಎತ್ತರವಾದ ಮೇಘ
ಮಾರ್ಗವನು ದಿಟ್ಟಿಸಿ ನೋಡು.
6 ನೀನು ಪಾಪಮಾಡದಿದ್ದರೆ ದೇವರಿಗೇನು
ಮಾಡಿದಂತಾಯಿತು?
ನಿನ್ನ ದ್ರೋಹಗಳು ಹೆಚ್ಚಿದರೆ ಅವರಿಗಾದ
ನಷ್ಟವೇನು?
7 ನೀನು ಸಜ್ಜನನಾಗಿದ್ದರೆ ಅವರಿಗೇನು
ಕೊಟ್ಟಂತಾಯಿತು?
ನಿನ್ನ ಕೈಯಿಂದ ಅವರಿಗೆ ದೊರಕಿದ
ಲಾಭ ಯಾವುದು?
8 ನಿನ್ನ ನೀಚತನದಿಂದ ನಿನ್ನಂಥವನಿಗೇ ನಷ್ಟ
ನಿನ್ನ ಸಜ್ಜನಿಕೆಯಿಂದ ನರಜನ್ಮದವನಿಗೇ ಲಾಭ.
9 ಅಪಾರ ಹಿಂಸೆಗಳಿಗೆ ಒಳಪಟ್ಟವರು
ಮೊರೆಯಿಡುತ್ತಾರೆ.
ಬಲಿಷ್ಠರ ಭುಜಬಲದಿಂದ ಪೀಡಿತರು
ಕಿರಿಚಿಕೊಳ್ಳುತ್ತಾರೆ.

10 ಆದರೆ ‘ನಮ್ಮನ್ನು ಸೃಷ್ಟಿಸಿದ ಕರ್ತನೆಲ್ಲಿ?
ಕತ್ತಲಲ್ಲೂ ಕೀರ್ತನೆ ಹಾಡಬಲ್ಲವನೆಲ್ಲಿ?
11 ಕಾಡುಮೃಗಗಳಿಗಿಂತ ನಮಗೆ ಹೆಚ್ಚು
ಜ್ಞಾನವನ್ನೀಯುವವನೆಲ್ಲಿ?
ಆಕಾಶದ ಪಕ್ಷಿಗಳಿಗಿಂತ ನಮಗೆ ಹೆಚ್ಚು
ಬುದ್ಧಿಕಲಿಸುವನೆಲ್ಲಿ?’
ಎನ್ನುವುದೇ ಇಲ್ಲ.
12 ಎಂತಲೆ ದುರುಳರ ಸೊಕ್ಕನ್ನು ಮುಂದಿಟ್ಟು
ಗೋಳಿಟ್ಟರೂ
ದೇವರು ಅವರಿಗೆ ಉತ್ತರ ಕೊಡುವುದಿಲ್ಲ.
13 ದೇವರು ಪೊಳ್ಳುಮಾತಿಗೆ ಕಿವಿಗೊಡನು
ಸರ್ವಶಕ್ತನು ಅದಕ್ಕೆ ಎಂದಿಗೂ ಲಕ್ಷ್ಯಕೊಡನು.
14 ಇಂತಿರಲು ನೀನು, ‘ಆತ ಕಾಣನು, ನನ್ನ
ವ್ಯಾಜ್ಯ ಆತನ ಮುಂದಿದೆ
ಆತನಿಗಾಗಿ ಕಾದಿರುವೆ’ ಎಂದುಕೊಂಡರೂ
ಆತ ಕೇಳಿಯಾನೆ?
15 ‘ದೇವರು ಸಿಟ್ಟುಗೊಂಡು ಶಿಕ್ಷಿಸುವುದಿಲ್ಲ
ದ್ರೋಹಗಳನ್ನು ಅಷ್ಟಾಗಿ ಗಣನೆಗೆ
ತಂದುಕೊಳ್ಳುವುದಿಲ್ಲ’
16 ಎಂದು ಹೇಳುತ್ತಾ ಯೋಬನು
ಬಾಯಿತೆರೆಯುತ್ತಾನೆ ವ್ಯರ್ಥವಾಗಿ
ತಿಳುವಳಿಕೆಯಿಲ್ಲದೆ ಮಾತಾಡುತ್ತಾನೆ
ಬಹಳವಾಗಿ.”

### ಎಲೀಹುವನ ನಾಲ್ಕನೆಯ ಭಾಷಣ

**36** ಬಳಿಕ ಎಲೀಹುವನು ಮುಂದು
ವರೆದು:
2 “ತಾಳು, ನಾನು ಹೇಳುವುದನು
ಇನ್ನೂ ಸ್ವಲ್ಪ ಕೇಳು
ದೇವರ ಪರವಾಗಿ ಹೇಳತಕ್ಕವು ಇನ್ನು
ಕೆಲವುಂಟು:
3 ನನ್ನ ಸೃಷ್ಟಿಕರ್ತನು ಸತ್ಯಸ್ವರೂಪನೆಂದು
ತೋರಲು
ನನ್ನ ವಾದಗಳನ್ನು ಸವಿಸ್ತಾರಗೊಳಿಸುವೆನು:
4 ನನ್ನ ಮಾತು ಸುಳ್ಳಲ್ಲವೆಂಬುದು ನಿಶ್ಚಯ
ನಿನ್ನ ಬಳಿಯಿರುವನು ಜ್ಞಾನಪೂರ್ಣನೋರ್ವ.
5 ದೇವರು ಸರ್ವಶಕ್ತನು, ಯಾರನ್ನೂ
ತುಚ್ಛೀಕರಿಸನು
ಆತನ ಬುದ್ಧಿಸಾಮರ್ಥ್ಯ ಅಪಾರವಾದುದು.

6 ದುರುಳರ ಪ್ರಾಣವನ್ನು ಆತ ಉಳಿಸನು
ನಿರ್ಗತಿಕರ ನ್ಯಾಯವನು ಸ್ಥಾಪಿಸುವನು.
7 ತನ್ನ ಕಟಾಕ್ಷವನ್ನು ಸಜ್ಜನರ ಮೇಲೆ
ಅಚಲವಾಗಿರಿಸುವನು
ರಾಜರಂತೆ ಸಿಂಹಾಸನದ ಮೇಲೆ ಅವರನು
ಕುಳ್ಳಿರಿಸುವನು
ಅಮರವಾದ ಉನ್ನತ ಪದವಿಗೆ ಅವರನು
ಏರಿಸುವನು.
8 ಆದರೆ ಅವರು ಬಂಧನಕ್ಕೊಳಗಾದರೆ
ಸಂಕಟ ಸಂಕೋಲೆಗಳಿಗೆ ಸಿಕ್ಕಿಕೊಂಡರೆ,
9 ದೇವರು ಅವರ ದುಷ್ಕೃತ್ಯಗಳನು ತೋರಿಸುವನು
ಸೊಕ್ಕಿನ ದ್ರೋಹಗಳನು ಸೂಚಿಸುವನು.
10 ಶಿಕ್ಷಣ ಕೇಳುವಂತೆ ಅವರ ಕಿವಿಯನ್ನು
ತರೆಯುವನು
ಅಧರ್ಮವನ್ನು ಬಿಟ್ಟು ಬಿಡುವಂತೆ
ಆಜ್ಞಾಪಿಸುವನು.
11 ಅದನ್ನು ಕೇಳಿ ಆತನ ಸೇವಾಸಕ್ತರಾದಲ್ಲಿ
ತಮ್ಮ ದಿವಸಗಳನ್ನು ಕಳೆವರು ಸುಖದಲ್ಲಿ
ತಮ್ಮ ವರುಷಗಳನು ಹರ್ಷಾನಂದದಲ್ಲಿ.
12 ಕೇಳದಿದ್ದರೆ ಸಾಗರದಲ್ಲಿ ಮುಳುಗಿ
ಹೋಗುವರು
ಜ್ಞಾನಹೀನರಾಗಿಯೇ ಪ್ರಾಣ
ಕಳೆದುಕೊಳ್ಳುವರು.
13 ಕಪಟ ಹೃದಯಿಗಳು ಕೋಪಿಷ್ಠರಾಗುವರು
ತಮ್ಮನ್ನು ಬಂಧಿಸುವಾಗಲು ಮೊರೆಯಿಡರು.
14 ಯೌವನ ಪ್ರಾಯದಲ್ಲೇ ಸಾಯುವರು
ಪುರುಷಗಾಮಿಗಳ ಮಧ್ಯೆಯಲ್ಲೇ
ಗತಿಸಿಹೋಗುವರು.
15 ಬಾಧೆಪಡುವವರನ್ನು ಅವರ ಬಾಧೆಗಳ
ಮೂಲಕವೇ ರಕ್ಷಿಸುವನು
ಕಷ್ಟಾನುಭವಗಳ ಮೂಲಕವೆ ದೇವರು ಅವರ
ಕಿವಿಯನ್ನು ತೆರೆಯುವನು.
16 ಅಂತೆಯೆ, ಕಷ್ಟದಿಂದ ನಿನ್ನನ್ನು
ತಪ್ಪಿಸಬೇಕೆಂಬುದು
ಇಕ್ಕಟ್ಟಿಲ್ಲದ ಬಯಲಿಗೆ ನಿನ್ನನ್ನು
ತರಬೇಕೆಂಬುದು
ನಿನ್ನ ಊಟದ ಮೇಜು ಸಮೃದ್ಧಿಯಾಗಿರ
ಬೇಕೆಂಬುದು
ದೇವರ ಉದ್ದೇಶವಾಗಿರುವುದು.
17 ನೀನೋ, ದುಷ್ಟ ನಿರ್ಣಯಗಳಿಂದ

ಭರಿತನಾಗಿರುವೆ
ನ್ಯಾಯವಿಚಾರಣೆಗೂ ತೀರ್ಪಿಗೂ
ಒಳಪಟ್ಟಿರುವೆ.
18 ಸಿರಿಸಂಪತ್ತು ನಿನ್ನನು ಕುಚೋದ್ಯಕ್ಕೆ ನೂಕೀತು,
ಎಚ್ಚರಿಕೆ!
ಹೆಚ್ಚು ಲಂಚಕೋರತನದಿಂದ
ವಂಚಿತನಾಗಬೇಡ.
19 ಐಶ್ವರ್ಯವಾಗಲಿ, ಧನಸಾಮರ್ಥ್ಯವಾಗಲಿ
ಕಷ್ಟಾನುಭವವಿಲ್ಲದೆ ನಿನಗೆ ಈಡಾಗವಿಲ್ಲಿ.
20 ತಟ್ಟನೆ ಜನಾಂಗಗಳು ನಿರ್ಮೂಲವಾಗುವಂಥ
ರಾತ್ರಿಯನು ಬಯಸಬೇಡ.
21 ಅಕ್ರಮದ ಕರೆಗೆ ಕಾಲಿಡಬೇಡ, ಎಚ್ಚರಿಕೆ!
ನಿನ್ನ ಕಷ್ಟಾನುಭವ ಅದನು ತಡೆಗಟ್ಟುತ್ತದೆ.
22 ದೇವರ ಶಕ್ತಿ ಉನ್ನತೋನ್ನತ
ಯಾರಿಹನು ಅವನಂಥ ಬೋಧಕ?
23 ದೇವರಿಗೆ ಮಾರ್ಗತೋರಿಸಬಲ್ಲವನಾರು?
ಆತನಿಗೆ ‘ನೀನು ಮಾಡಿರುವುದು ಅನ್ಯಾಯ’,
ಎನ್ನಬಲ್ಲವನಾರು?
24 ಮಾನವರು ಸ್ತುತಿಸಿರುವ ಆತನ ಕಾರ್ಯಗಳನ್ನ
ನೀನೂ ಕೂಡ ಹೊಗಳಲು ಮರೆಯಬೇಡ.
25 ಮಾನವರೆಲ್ಲರು ಅದನ್ನು ಕಂಡಿರುವರು
ನರರಾದ ನಾವು ದೂರದಿಂದ ನೋಡಬಹುದು.
26 ದೇವರೆನಿತೋ ಮಹೋನ್ನತನು
ನಮ್ಮ ಅರಿವಿಗಾತನು ಎಟುಕನು
ಅಸಂಖ್ಯಾತ ಆತನ ವರುಷಗಳು.
27 ನೀರಿನ ಹನಿಗಳನು ಹೀರಿಕೊಳ್ಳುತ್ತಾನೆ
ಮಂಜಿನಿಂದ ತಿಳಿಮಳೆಯನು ಸುರಿಸುತ್ತಾನೆ.
28 ಮೋಡಗಳು ಮಳೆಗರೆಯುತ್ತವೆ,
ಹಲವಾರು ಜನರ ಮೇಲೆ ಅದನ್ನು
ಚಿಮುಕಿಸುತ್ತವೆ.
29 ಗ್ರಹಿಸುವವರಾರು ಮೇಘಗಳ ಹಬ್ಬುಗೆಯನು?
ದೇವರ ಗುಡಾರದಲ್ಲಿನಾ ಗರ್ಜನೆಯನು?
30 ಇಗೋ, ಪಸರಿಸುತ್ತಾನೆ ಸುತ್ತಲು ತನ್ನ ಬೆಳಕನ್ನು
ಮುಚ್ಚಿಡುತ್ತಾನೆ ಕಡಲಿನ ಅಡಿಭಾಗವನು.
31 ಹೀಗೆ ಜನಾಂಗಗಳನ್ನು ಪೋಷಣೆ ಮಾಡುತ್ತಾನೆ
ಆಹಾರವನ್ನು ಧಾರಾಳವಾಗಿ
ದಯಪಾಲಿಸುತ್ತಾನೆ.
32 ಸಿಡಿಲನ್ನೇ ಕೈತುಂಬ ಹಿಡಿದು
ಗುರಿಮುಟ್ಟಲೆಂದು ಆಜ್ಞೆಯಿಡುತ್ತಾನೆ.
33 ಅದರ ಆರ್ಭಟವು ಆತನನ್ನು ಪ್ರಕಟಿಸುತ್ತದೆ

ಆತನ ಆಗಮನವನು ದನಕರುಗಳಿಗೂ
ತಿಳಿಸುತ್ತದೆ.”

**37** “ಇದನ್ನು ನೋಡಿದಾಗ ನನ್ನ ಎದೆ
ತತ್ತರಗೊಳ್ಳುತ್ತದೆ.
ನನ್ನ ಗುಂಡಿಗೆ ಎದೆಬಿಟ್ಟು ಮಿಡಿಯುತ್ತದೆ.
2 ದೇವರ ಧ್ವನಿಯ ಗರ್ಜನೆಯನು ಕಿವಿಗೊಟ್ಟು
ಕೇಳು
ಆತನ ಬಾಯಿಂದ ಹೊರಡುವ ಮಾತನು
ಆಲಿಸು.
3 ಅದನ್ನು ಗಗನಮಂಡಲದೊಳು ಹರಡುತ್ತಾನೆ
ಜಗದ ಅಂಚಿನ ತನಕ ಮಿಂಚು
ಹೊಳೆಯುವಂತೆ ಮಾಡುತ್ತಾನೆ.
4 ಮಿಂಚಿನ ಬಳಿಕ ಕೇಳಿಬರುವುದು ಗರ್ಜನೆಯ
ಶಬ್ದ
ಗುಡುಗಿನಂಥ ಗಂಭೀರವಾದ ಆತನ ಕಂಠನಾದ
ಆತನ ಸ್ವರ ಕೇಳುವಾಗ ನಿಲ್ಲದು ಮಿಂಚಿನ
ಹೊಳೆತ.
5 ದೇವರಕಂಠ ತನ್ನ ಅದ್ಭುತಕಾರ್ಯಗಳನು
ಘೋಷಿಸುತ್ತದೆ
ನಮ್ಮಿಂದರಿಯಲಾಗದ ಮಹಾಕಾರ್ಯಗಳನು
ಎಸಗುತ್ತಾನೆ.
6 ಹಿಮಕ್ಕೆ, ‘ಹದವಾಗಿ ಭೂಮಿಗೆ ಬೀಳು’
ಎನ್ನುತ್ತಾನೆ
ಭಾರಿಮಳೆಗೆ, ‘ರಭಸದಿಂದ ಸುರಿ’ ಎನ್ನುತ್ತಾನೆ.
7 ಹೀಗೆ ಜನರೆಲ್ಲರು ಕೆಲಸ ನಿಲ್ಲುವಂತೆ
ಮಾಡುತ್ತಾನೆ
ತನ್ನ ಕಾರ್ಯವನ ಅರಿಯುವಂತೆ
ಮಾಡುತ್ತಾನೆ.
8 ಆತ ಮೃಗಗಳು ಗುಹೆ ಸೇರುತ್ತವೆ
ಪ್ರಾಣಿಗಳು ಬಿಲಗಳಲೇ ತಂಗುತ್ತವೆ.
9 ದೇವರ ಭಂಡಾರದಿಂದ ಬಿರುಗಾಳಿ ಬೀಸುತ್ತದೆ
ಉತ್ತರ ದಿಕ್ಕಿನಿಂದ ಚಳಿ ಹೊರಬರುತ್ತದೆ.
10 ದೇವರ ಉಸಿರಿನಿಂದ ನೀರು
ಹಿಮಗಡ್ಡೆಯಾಗುತ್ತದೆ
ಸವಿಸ್ತಾರದ ಜಲವು ಕೂಡ
ಮಂಜುಗಡ್ಡೆಯಾಗುತ್ತದೆ.
11 ಮೋಡಗಳ ಮೇಲೆ ಮಂಜನು ಹೇರುತ್ತಾನೆ
ಮೇಘಮಂಡಲವು ಆತನ ಮಿಂಚನು

ಹರಡುತ್ತದೆ.
12 ಜಗದೊಳೆಲ್ಲ ಆತ ವಿಧಿಸಿದಂತೆ
ಜರುಗಬೇಕೆಂದು
ಸುತ್ತಮುತ್ತಲು ಸಿಡಿಲುಗಳು ಸಂಚರಿಸುವಂತೆ
ಮಾಡುತ್ತಾನೆ.
13 ಜನರ ಶಿಕ್ಷಣಕ್ಕೆ, ಧರೆಯ ಹಿತಕೆ
ತಮ್ಮ ಪ್ರೀತಿಯನ್ನು ತೋರುವುದಕೆ
ಇದೆಲ್ಲ ಆಗುವಂತೆ ಮಾಡುತ್ತಾನೆ.
14 ಯೋಬನೇ, ಈ ಮಾತುಗಳನು ಕೇಳು
ದೇವರ ಅದ್ಭುತಗಳನು ಮೌನದಿಂದ ಧ್ಯಾನಿಸು:
15 ದೇವರು ಹೇಗೆ ಮೋಡಗಳನು
ನಿಯಂತ್ರಿಸುತ್ತಾನೆಂದು ಅರಿತಿರುವೆಯಾ?
ಅವುಗಳಿಂದ ಸಿಡಿಲು ಹೇಗೆ ಹೊಳೆದು
ಬರುತ್ತದೆಂದು ತಿಳಿದಿರುವೆಯಾ?
16 ಮೋಡಗಳ ತೇಲಾಟವನು ಬಲ್ಲೆಯಾ?
ಜ್ಞಾನಪೂರ್ಣನಾ ಅದ್ಭುತಕಾರ್ಯಗಳನು
ಗ್ರಹಿಸಿರುವೆಯಾ?
17 ತೆಂಕಣಗಾಳಿಯಿಂದ ಪೊಡವಿ ತಪಿಸಿ
ಸ್ತಬ್ಧವಿರುವಾಗಲೆ
ನಿನ್ನ ಬಟ್ಟೆಬರೆ ಬಿಸಿಯಿರುವಾಗಲೆ ಆ ಅರಿವು
ನಿನಗಿರುತ್ತದೆಯೇ?
18 ದೇವರಂತೆ ಆಕಾಶಮಂಡಲವನು ನಿನ್ನಿಂದ
ನಿರ್ಮಿಸಲಾದೀತೆ?
ಎರಕ ಹೊಯ್ದ ಕನ್ನಡಿಯಂತೆ ಅದನು
ಗಟ್ಟಿಮಾಡಲಾದೀತೆ?
19 ಆತನಿಗೆ ಹೇಳಬೇಕಾದ ಉತ್ತರವನು ನಮಗೆ
ತಿಳಿಸು
ಅಂಧಕಾರದಲ್ಲಿರುವ ನಮ್ಮಿಂದ ಏನೊಂದನೂ
ಹೇಳಲಾಗದು.
20 ನಾನು ಮಾತಾಡಬೇಕೆಂದು ದೇವರಿಗೆ
ಹೇಳಿಕಳಿಸಲಾದೀತೆ?
ಹಾಗೆ ಮಾಡುವವನು ತನ್ನನ್ನೆ ನಿರ್ಮೂಲ
ಮಾಡಿಕೊಂಡಂತೆ!
21 ಗಾಳಿಬೀಸಿ ಗಗನವನು ಶುಭ್ರಗೊಳಿಸಲು
ಅಲ್ಲಿ ಪ್ರಜ್ವಲಿಸುವ ಬೆಳಕನು ದೃಷ್ಟಿಸಲಾಗದು.
22 ಉತ್ತರದಿಂದ ಹೊನ್ನಿನ ಹೊಳಪು
ಹೊರಡುವುದು
ದೇವರು ವಿಸ್ಮಯಕರ ತೇಜಸ್ಸನು
ಧರಿಸಿರುವನು.
23 ಕಂಡುಹಿಡಿಯಲಾಗದು ಇಂಥ ಸರ್ವಶಕ್ತನನು

ನಮ್ಮಿಂದ
ಶಕ್ತಿಯಲೂ ಸತ್ಯದಲೂ ಪರಮ ಪರಾಕ್ರಮಿ
ಆತ
ನ್ಯಾಯಪೂರ್ಣನಾದ ಆತ ದಬ್ಬಾಳಿಕೆ
ನಡೆಸುವವನಲ್ಲ
ನ್ಯಾಯಕ್ಕಾಗಲೀ ಧರ್ಮಕ್ಕಾಗಲೀ ಆತ ಧಕ್ಕೆ
ತರುವವನಲ್ಲ.
24 ಎಂತಲೇ ಜನರಿಗೆ ಆತನಲ್ಲಿದೆ ಭಯಭಕ್ತಿ
ತಾವೇ ಜ್ಞಾನಿಗಳೆಂದುಕೊಳ್ಳುವವರಲಿ
ದೇವರಿಗಿಲ್ಲ ಲಕ್ಷ್ಯ."

## ಯೋಬನಿಗೂ ದೇವರಿಗೂ ಸಂವಾದ–
## ದೈವಾಜ್ಞೆಗೆ ತಲೆಬಾಗು

**38** ಬಿರುಗಾಳಿಯೊಳಗಿಂದ ಸರ್ವೇಶ್ವರ
ಯೋಬನಿಗೆ ಕೊಟ್ಟ
ಪ್ರತ್ಯುತ್ತರ ಇದು:
2 "ಅಜ್ಞಾನದ ಮಾತುಗಳನ್ನಾಡಿ
ಸತ್ಯಾಲೋಚನೆಯನು ಮಂಕುಮಾಡುವ
ನೀನಾರು?
3 ಶೂರನಂತೆ ನಡುಕಟ್ಟಿ ನಿಲ್ಲು
ನಾನು ಹಾಕುವ ಪ್ರಶ್ನೆಗೆ ಉತ್ತರ ನೀಡು:
4 ನಾನು ಭೂಮಿಗೆ ಅಸ್ತಿವಾರ ಹಾಕಿದಾಗ
ನೀನೆಲ್ಲಿದ್ದೆ?
ಉತ್ತರ ಕೊಡು, ನೀನು ಅಷ್ಟು
ಜ್ಞಾನಿಯಾಗಿದ್ದರೆ.
5 ಅದರಳತೆಯನ್ನು ಗೊತ್ತುಮಾಡಿದವನಾರೆಂದು
ನಿನಗೆ ತಿಳಿದಿದೆಯೆ?
ಅದರ ಮೇಲೆ ನೂಲು ಹಿಡಿದವನಾರೆಂದು ನಿನಗೆ
ಗೊತ್ತಿದೆಯೆ?
6 ಉದಯ ನಕ್ಷತ್ರಗಳ ಜಯಕಾರದ ನಡುವೆ
ದೇವದೂತರೆಲ್ಲರ ಆನಂದಘೋಷಣೆಯ
ಮಧ್ಯೆ.
7 ಭೂಮಿಗೆ ಮೂಲೆಗಲ್ಲನು ಹಾಕಿದವನಾರು?
ಅದರ ಅಡಿಗಲ್ಲು ಯಾವುದರ ಮೇಲೆ
ನಿಂತಿದೆ?"

## ದೇವರು ಸಮುದ್ರ ಸಾಗರಕ್ಕೆ ಪ್ರಭು

8 "ಭೂಗರ್ಭವನ್ನು ಭೇದಿಸಿಕೊಂಡು ಬಂದ
ಸಮುದ್ರವನು

ದ್ವಾರಗಳಿಂದ ಬಂಧಿಸಿ ಮುಚ್ಚಿದವನಾರು?
9 ಅದಕ್ಕೆ ಮೋಡಗಳನು ತೊಡಿಸಿ,
ಕಾರ್ಗತ್ತಲನು ಉಡಿಸಿದವನು ಯಾರು?
10 ಅದಕ್ಕೆ ಸರಹದ್ದನು ನಿಯಮಿಸಿ
ಕದಗಳನೂ ಅಗುಳಿಗಳನೂ ಇಟ್ಟವನಾರು?
11 'ಇಲ್ಲಿಯತನಕ ಬರಬಹುದು, ಇದನು ಮೀರಿ
ಬರಕೂಡದು'
'ಮೊರೆವ ನಿನ್ನ ತೆರೆಗೆ ಇಲ್ಲಿಗೇ ತಡೆ' ಎಂದು
ವಿಧಿಸಿದವನು ನಾನು.
12 ನಿನ್ನ ಜೀವಮಾನದಲಿ ಎಂದಾದರೂ
'ಅರುಣೋದಯವಾಗಲಿ' ಎಂದು
ಆಜ್ಞಾಪಿಸಿರುವೆಯಾ?
13 'ಧರಣಿಯ ಅಂಚುಗಳನು ಹಿಡಿದು ದುರುಳರನ್ನು
ಅದರೊಳಗಿಂದ ಒದರಿಬಿಡು' ಎಂದು ಅದಕ್ಕೆ
ಅಪ್ಪಣೆಮಾಡಿದೆಯಾ?
14 ಮುದ್ರೆಒತ್ತಿದ ಜೇಡಿಮಣ್ಣಿನಂತೆ ಭೂಮಿ
ರೂಪತಾಳುತ್ತದೆ
ಅದು ನೆರಿಗೆ ಕಟ್ಟಿದ ಉಡಿಗೆಯಂತೆ
ಕಾಣಿಸುತ್ತದೆ.
15 ದುರುಳರಿಂದ ಬೆಳಕನು
ಹಿಂತೆಗೆದುಕೊಳ್ಳಲಾಗುವುದು
ಅವರು ಎತ್ತಿದ ಕೈಯನು ಮುರಿಯಲಾಗುವುದು.
16 ನೀನೆಂದಾದರು ಸಮುದ್ರದ ಬುಗ್ಗೆಗಳೊಳಗೆ
ಸೇರಿದ್ದೆಯೋ?
ಸಾಗರದ ತಳಹದಿಯಲ್ಲಿ
ತಿರುಗಾಡಿರುವೆಯೋ?
17 ಮರಣದ ದ್ವಾರಗಳು ನಿನಗೆ
ಗೋಚರವಾಗಿರುವುವೋ?
ಘೋರಾಂಧಕಾರದ ಕದಗಳನ್ನು ನೀನು
ಕಂಡಿರುವೆಯೋ?
18 ಭೂವಿಸ್ತಾರವನ್ನು ಗ್ರಹಿಸಿರುವೆಯೋ?
ಇದೆಲ್ಲವು ನಿನಗೆ ತಿಳಿದಿದ್ದರೆ ಹೇಳು,
ನೋಡೋಣ!
19 ಬೆಳಕಿನ ನಿವಾಸಕ್ಕೆ ಹೋಗುವ ಮಾರ್ಗವೆಲ್ಲಿ?
ಕತ್ತಲು ವಾಸಮಾಡುವ ಸ್ಥಳವೆಲ್ಲಿ?
20 ನೀನು ಅವುಗಳನು ಅವುಗಳ ಪ್ರಾಂತ್ಯಕ್ಕೆ
ಕರೆದೊಯ್ಯಬಲ್ಲೆಯಾ?
ಅವುಗಳ ನಿವಾಸಕೆ ಹಾದಿಯನು
ಕಂಡುಹಿಡಿಯಬಲ್ಲೆಯಾ?
21 ಇದನ್ನು ಬಲ್ಲೆಯಾದರೆ ನೀನು ಆಗಲೇ

ಹುಟ್ಟಿದ್ದಿರಬೇಕು
ಮತ್ತು ಈಗ ಬಹಳ ವೃದ್ಧನಾಗಿರಬೇಕು!
22 ಹಿಮದ ಭಂಡಾರವನು ಹೊಕ್ಕಿರುವೆಯಾ?
ಕಲ್ಮಳೆಯ ಬೊಕ್ಕಸವನು ನೋಡಿರುವೆಯಾ?
23 ಇಕ್ಕಟ್ಟಿನ ಕಾಲಕ್ಕಾಗಿ ಅವುಗಳನು ನಾನು
ಇಟ್ಟಿರುವೆನು
ಯುದ್ಧಕದನಗಳ ದಿನಗಳಿಗಾಗಿ ಅವುಗಳನು
ಕಾದಿಟ್ಟಿರುವೆನು.
24 ಬೆಳಕು ಏರಿಬರುವ ಜಾಗವೆಲ್ಲಿ
ಬಿಸಿಗಾಳಿ ಬೀಸಿಬರುವ ಮಾರ್ಗವೆಲ್ಲಿ?
25 ಮನುಜರಿಲ್ಲದ ಕಾಡಿನಲ್ಲೂ ನಿರ್ಜನ
ಪ್ರದೇಶದಲ್ಲೂ
ಮಳೆಯನು ಹೊಯ್ದು,
26 ಹಾಳುಬೀಳಾದ ಭೂಮಿಯನು
ತೋಯಿಸಲೆಂದು
ಪಚ್ಚೆಪಸಿರಾದ ಹುಲ್ಲನು ಬೆಳೆಯಿಸಲೆಂದು,
27 ವೃಷ್ಟಿಯ ಪ್ರವಾಹಕ್ಕೆ ಕಾಲುವೆಯನು
ಕಡಿದವರಾರು?
ಗರ್ಜಿಸುವ ಸಿಡಿಲಿಗೆ ದಾರಿಯನು
ಮಾಡಿದವರಾರು?
28 ಮಳೆಗೆ ತಂದೆಯೊಬ್ಬನಿದ್ದಾನೆಯೆ?
ಮಂಜಿನ ಹನಿಗೆ ಹೆತ್ತವಳಿದ್ದಾಳೆಯೆ?
29 ಹಿಮಗಡ್ಡೆ ಹೊರಡುವುದು ಯಾರ ಗರ್ಭದಿಂದ?
ಆಕಾಶದ ಇಬ್ಬನಿ ಜನಿಸುವುದು ಯಾವ
ತಾಯಿಂದ?
30 ಕಲ್ಲಿನಂತೆ ನೀರು ಗಟ್ಟಿಯಾಗುತ್ತದೆ
ಸಾಗರದ ಮೇಲ್ಭಾಗ ಹೆಪ್ಪುಗಟ್ಟುತ್ತದೆ.
31 ಕೃತ್ತಿಕೆಯ ಸರಪಣಿಯನು ನೀನು ಬಿಗಿಯ
ಬಲ್ಲೆಯಾ?
ಮೃಗಶಿರದ ಸಂಕೋಲೆಯನು ಬಿಚ್ಚಬಲ್ಲೆಯಾ?
32 ಆಯಾಯ ಕಾಲಕ್ಕೆ ನಕ್ಷತ್ರರಾಶಿಗಳನು
ಬರಮಾಡುವೆಯಾ?
ಸಪ್ತರ್ಷಿತಾರೆಗಳನು ಪರಿವಾರದೊಡನೆ
ನಡೆಸುವೆಯಾ?
33 ಖಗೋಳದ ನಿಯಮಗಳನ್ನು ತಿಳಿದಿರುವೆಯಾ?
ಅದರ ಆಳ್ವಿಕೆಯನು ಇಳೆಯೊಳು
ಸ್ಥಾಪಿಸಿರುವೆಯಾ?
34 ನಿನ್ನಾಜ್ಞೆ ಮೋಡ ಮುಟ್ಟಿದ ಮಾತ್ರಕೆ
ಹೇರಳವಾದ ನೀರು ನಿನ್ನನು ಆವರಿಸುವುದೊ?
35 ನಿನ್ನ ಅಪ್ಪಣೆಯಂತೆ ಸಿಡಿಲುಗಳು ಹೋಗಿಬಂದು

‘ಇದೋ ಬಂದಿದ್ದೇವೆ’ ಎಂದು ನಿನಗೆ
ಹೇಳುತ್ತವೆಯೊ?
36 ಜ್ಞಾನವನು ದಯಪಾಲಿಸಿದವನಾರು ಇಬಿಸ್
ಪಕ್ಷಿಗೆ?
ವಿವೇಕವನು ಅನುಗ್ರಹಿಸಿದವನಾರು
ಕೋಳಿಹುಂಜಕ್ಕೆ
37 ಯಾರಿಗಿದೆ ಮೋಡಗಳನು ಲೆಕ್ಕಿಸುವ ಶಕ್ತಿ?
ಆಕಾಶದಲ್ಲಿನ ಬುದ್ದಲಿಗಳನು
ಮೊಗಚಿಹಾಕುವ ಬುದ್ಧಿಶಕ್ತಿ?
38 ದೂಳುಮಣ್ಣನು ಒತ್ತಟ್ಟಿಗೆ
ಸೇರಿಸಬಲ್ಲವನಾರು?
ಹೆಂಟೆಗಳು ಒಂದಕ್ಕೊಂದು ಅಂಟಿಕೊಳ್ಳುವಂತೆ
ಮಾಡಬಲ್ಲವನಾರು?
39 ಗುಹೆಯಲ್ಲಿ ಮಲಗಿರುವ ಸಿಂಹಕೆ
ಬೇಟೆಯಾಡಿ ಊಟ ಒದಗಿಸಬಲ್ಲೆಯಾ ನೀನು?
40 ಪೊದೆಯಲ್ಲಿ ಹೊಂಚುಕೂತಿರುವ
ಯುವಸಿಂಹಕೆ
ಹಸಿವನು ನೀಗಿಸಬಲ್ಲೆಯಾ ನೀನು?
41 ಆಹಾರವನು ಒದಗಿಸುವವರಾರು ತಾಯಿ
ಕಾಗೆಗೆ
ಅದರ ಹಸಿದ ಮರಿಗಳು ಕೊಕ್ಕೆತ್ತಿ
ದೇವರಿಗೆ ಮೊರೆಯಿಡುವಾಗ?

**39** “ಕಾಡುಮೇಕೆ ಈಯುವ ವೇಳೆಯನು
ತಿಳಿದಿರುವೆಯಾ?
ಹುಲ್ಲೆಗಳ ಹೆರಿಗೆಯನು ಗ್ರಹಿಸಿರುವೆಯಾ?
2 ಎಣಿಸಿರುವೆಯಾ ಅವು ಗರ್ಭ ಹೊರುವ
ತಿಂಗಳನು?
ಗೊತ್ತುಹಚ್ಚಿರುವೆಯಾ ಅವು ಈಯುವ
ವೇಳೆಯನು?
3 ಅವು ಬಗ್ಗಿ ಮರಿಹಾಕುತ್ತವೆ
ಒಡನೆಯೆ ವೇದನೆಯನು ಮರೆತುಬಿಡುತ್ತವೆ.
4 ಅವುಗಳ ಮರಿಗಳು ಪುಷ್ಟಿಯಾಗಿ ಬಯಲಿನಲ್ಲಿ
ಬೆಳೆಯುತ್ತವೆ
ತಾಯಿಯನ್ನು ಅಗಲಿದ ಬಳಿಕ ಅವು ಮರಳಿ
ಬರುವುದಿಲ್ಲ.
5 ಕಾಡುಕತ್ತೆಗೆ ಸ್ವಾತಂತ್ರ್ಯವನು ಕೊಟ್ಟವರಾರು?
ಅದರ ಕಟ್ಟನು ಬಿಚ್ಚಿದವರಾರು?
6 ಅದಕ್ಕೆ ಅಡವಿಯನೆ ಮನೆಯನ್ನಾಗಿಸಿದವನು

ನಾನು
ಸವಳುಬಯಲನೇ ಅದರ ನಿವಾಸವಾಗಿಸಿದವನು
ನಾನು.
7 ಅದು ಧಿಕ್ಕರಿಸುತ್ತದೆ ಊರಗದ್ದಲವನು
ಅದು ಕೇಳಿದ್ದಿಲ್ಲ ಓಡಿಸುವವನ ಕೂಗನು.
8 ಎತ್ತರವಾದ ಬೆಟ್ಟಗಳೇ ಅದರ ಕಾವಲು
ಹಸಿರೆಲ್ಲಿದ್ದರೂ ಅದುವೆ ಅದರಸುವ ಮೇವು.
9 ಕಾಡುಕೋಣ ಒಪ್ಪಿದೆಯೇ ನಿನಗೆ
ಸೇವೆಮಾಡಲು?
ನಿನ್ನ ಗೋದಲಿಯ ಹತ್ತಿರವೇ ತಂಗಿರಲು?
10 ಕಟ್ಟಬಲ್ಲೆಯಾ ಅದನು ಹಗ್ಗದಿಂದ ನೇಗಿಲ
ಸಾಲಿಗೆ
ಕುಂಟೆ ಎಳೆಯಲು ಅದು ನಿನ್ನ ಹಿಂದೆ?
11 ಬಲವಿದೆಯೆಂದು ಅದರಲಿ
ನಂಬಿಕೆಯಿಡುವೆಯಾ?
ಬಲಿಷ್ಠಕಾರ್ಯಗಳನು ಅದಕ್ಕೆ
ಒಪ್ಪಿಸಿಬಿಡುವೆಯಾ?
12 ಬೆಳೆಯನು ಅದು ನಿನಗೆ ಹೊತ್ತು ತರುವುದೆಂದು
ನಂಬುವೆಯಾ?
ಕಣದಲಿ ನಿನಗೆ ಕಾಳನು ಕೂಡಿಸುವುದೆಂಬ
ನಂಬಿಕೆ ನಿನತಿದೆಯಾ?
13 ಉಷ್ಟ್ರಪಕ್ಷಿ ಲವಲವಿಕೆಯಿಂದ ರೆಕ್ಕೆ
ಬಡಿಯುತ್ತದೆ.
ಆದರೆ ಪ್ರೀತಿವ್ಯಾಮೋಹವಿದೆಯೆ ಅದರ ರೆಕ್ಕೆ
ಗರಿಗಳಿಗೆ?
14 ಮೊಟ್ಟೆಗಳನು ಭೂಮಿಯಮೇಲೆ
ಬಿಟ್ಟುಬಿಡುವಾ ಪಕ್ಷಿ,
ಕೇವಲ ದೂಳಿನಿಂದ ಅವಕ್ಕೆ ಕಾವು ಕೊಡುತ್ತದೆ,
ಅಲ್ಲವೆ?
15 ಆ ಮೊಟ್ಟೆಗಳನು ಜನರು ಕಾಲಿನಿಂದ
ಮೆಟ್ಟಿಯಾರು
ಕಾಡುಮೃಗ ಅವುಗಳನು ತುಳಿದೀತು
ಎಂಬ ಯೋಚನೆ ಅದನು ಕಾಡದು.
16 ತನ್ನ ಮರಿ ತನ್ನದೇ ಅಲ್ಲ ಎಂಬಷ್ಟು ಕ್ರೂರತೆ
ಅದರದು
ತನ್ನ ಹೆರಿಗೆ ನಿಷ್ಫಲವಾಯಿತೆಂಬ ಸಂಕಟ
ಅದಕ್ಕಿರದು.
17 ಅದಕ್ಕೆ ನಾನು ಕೊಡಲಿಲ್ಲ ಜ್ಞಾನವನು
ದಯಪಾಲಿಸಲಿಲ್ಲ ಗ್ರಹಿಕೆಯನು.
18 ಆದರೂ ಅದು ರೆಕ್ಕೆ ಬಡಿದು

ದೌಡಾಯಿಸುವಾಗಲಂತು
ಕುದುರೆ ರಾಹುತರನೂ ಅಣಕಿಸಬಲ್ಲದು.
19 ಕುದುರೆಗೆ ಶಕ್ತಿಕೊಟ್ಟವನು ನೀನೋ?
ಅದರ ಕೊರಳಿಗೆ ಜುಟ್ಟುಗುಡುಗನ್ನು
ಕಟ್ಟಿದವನು ನೀನೋ?
20 ಮಿಡತೆಯ ಹಾಗೆ ಅದು ಜಿಗಿಯಮಾಡಿದವನು
ನೀನೋ?
ಅದರ ಕೆನೆತದ ಪ್ರಭಾವ ಭೀತಿಯನು ತರುತ್ತದೆ,
ನೋಡು!
21 ನೆಲವನು ಕೆರೆಯುತ್ತಾ, ತನ್ನ ಶಕ್ತಿಗಾಗಿ
ಹಿಗ್ಗುತ್ತಾ
ಸನ್ನದ್ಧ ಸೈನ್ಯವನು ಇದಿರಿಸುತ್ತಾ ನುಗ್ಗುತ್ತದೆ
ನೋಡು!
22 ಖಡ್ಗಕ್ಕೆ ಹಿಂದೆಗೆಯದೆ, ಕಳವಳಗೊಳ್ಳದೆ
ಭಯಭೀತಿಗೆ ಹೆದರದೆ ನಗುತ್ತದೆ!
23 ಅದರ ಮೇಲಿನ ಬತ್ತಳಿಕೆ ಜಣಜಣಿಸುತ್ತದೆ
ಈಟಿ ಭರ್ಜಿಗಳು ಥಳಥಳಿಸುತ್ತವೆ.
24 ಕಹಳೆಯ ನಾದಕೇಳಿ ನಿಲ್ಲದದು ಸುಮ್ಮನೆ
ಉದ್ರೇಕಗೊಂಡು ದೌಡಾಯಿಸುತ್ತದೆ
ವೇಗವನೇ ನುಂಗುವಂತೆ.
26 ರಣಕಹಳೆ ಮೊಳಗಿದಾಗಲೆ ಕೆನೆಯುತ್ತದೆ
ಕಾಳಗ, ಆರ್ಭಟ, ದಳಪತಿಗಳ ಗರ್ಜನೆ
ಇವುಗಳನ್ನೆಲ್ಲಾ ದೂರದಿಂದಲೆ ಮೂಸುತ್ತದೆ.
26 ಗಿಡುಗವು ರೆಕ್ಕೆ ಹರಡುವುದನು
ದಕ್ಷಿಣದಿಕ್ಕಿಗೆ ಹಾರಿ ವಸಲೆ ಹೋಗುವುದನು
ನಿನ್ನಿಂದ ಕಲಿತದೆಂತು?
27 ರಣಹದ್ದಿಗೆ ನಿನ್ನಪ್ಪಣೆ ಬೇಕೋ ಮೇಲೆ
ಹಾರುವುದಕೆ?
ನಿನ್ನ ಸಮ್ಮತಿ ಬೇಕೋ ಉನ್ನತ ಸ್ಥಳದಲ್ಲಿ
ಗೂಡು ಕಟ್ಟುವುದಕೆ?
28 ಅದು ವಾಸಮಾಡುತ್ತದೆ ಕಲ್ಲು ಬಂಡೆಮೇಲೆ
ಅದು ತಂಗುತ್ತದೆ ಶಿಲಾಶಿಖರದ ದುರ್ಗ
ದೊಳಗೆ.
29 ಬೇಟೆಯನು ನೋಡುತ್ತದೆ ಅಲ್ಲಿಂದಲೆ
ಅದನ್ನು ಕಂಡು ಹಿಡಿಯುತ್ತದೆ ದೂರದಿಂದಲೆ.
30 ಹಣ ಬಿದ್ದಲ್ಲಿ ರಣಹದ್ದು
ಅದರ ಮರಿಗಳೂ ಹೀರುತ್ತವೆ ರಕ್ತವನು."

**40** ಯೋಬನಿಗೆ ಸರ್ವೇಶ್ವರ ಮತ್ತೆ
ಇಂತೆಂದರು:
2 “ಸರ್ವಶಕ್ತನೊಡನೆ ವ್ಯಾಜ್ಯವಾಡುವುದನು
ಈಗಲಾದರು ನಿಲ್ಲಿಸುವೆಯಾ?
ದೇವರೊಡನೆ ತರ್ಕಮಾಡುವಂಥ ನೀನು ಉತ್ತರ
ಕೊಡುವೆಯಾ?”
3 ಆಗ ಯೋಬನು ಸರ್ವೇಶ್ವರಸ್ವಾಮಿಗೆ
ಇಂತೆಂದನು:
4 “ಅಯ್ಯೋ, ನಾನು ಅಲ್ಪನೇ ಸರಿ
ತಮಗೇನು ಪ್ರತ್ಯುತ್ತರ ಹೇಳಲಿ?
ಬಾಯ ಮೇಲೆ ಕೈಯಿಡುವೆ ಮೌನತಾಳಿ.
5 ಒಮ್ಮೆ ಮಾತಾಡಿದೆ, ಮತ್ತೆ ಮಾತಾಡೆನು
ಹೌದು, ಇನ್ನೊಮ್ಮೆ ಮಾತಾಡಿದೆ, ಹೆಚ್ಚು
ಮಾತಾಡೆನು.”
6 ಸರ್ವೇಶ್ವರ ಬಿರುಗಾಳಿಯೊಳಗಿಂದ
ಯೋಬನಿಗೆ ಕೊಟ್ಟ ಪ್ರತ್ಯುತ್ತರವಿದು:
7 “ಶೂರನಂತೆ ನಡುಕಟ್ಟಿಕೊಂಡು
ನನ್ನ ಪ್ರಶ್ನೆಗೆ ಉತ್ತರ ಕೊಡು:
8 ಏನು, ನನ್ನ ನಿರ್ಣಯವನ್ನು ನೀನು
ಖಂಡಿಸುತ್ತೀಯೋ?
ನೀನು ನಿರ್ದೋಷಿಯೆನಿಸಿಕೊಳ್ಳಲು
ನನ್ನನ್ನು ದೋಷಿಯನ್ನಾಗಿಸುತ್ತೀಯೋ?
9 ದೇವರಾದ ನನಗಿರುವಂಥ ಭುಜಬಲ
ನಿನಗಿದೆಯೋ?
ನನ್ನ ಧ್ವನಿಗೆ ಸಮನಾಗಿ ನೀನು
ಗುಡುಗಬಲ್ಲೆಯೋ?
10 ಮಹಿಮೆ ಘನತೆಗಳಿಂದ ಅಲಂಕರಿಸಿಕೊ!
ಗೌರವ ಪ್ರಭಾವಗಳನು ಧರಿಸಿಕೊ!
11 ನಿನ್ನ ಕಡುಕೋಪವನು ಎಲ್ಲೆಡೆಯೂ ಹರಡಿಸು
ಕಣ್ಣಿಟ್ಟು ಗರ್ವಿಷ್ಠರೆಲ್ಲರನು ತಗ್ಗಿಸು.
12 ಹೌದು, ಕಣ್ಣಿಟ್ಟು ಗರ್ವಿಷ್ಠರೆಲ್ಲರನು ಕುಗ್ಗಿಸು
ದುಷ್ಟರನು ನಿಂತಲ್ಲೇ ತುಳಿದುಬಿಡು.
13 ಅವರೆಲ್ಲರನು ದೂಳಿನಲ್ಲಿ ಒಟ್ಟಿಗೆ ಅಡಗಿಸಿಬಿಡು
ಅವರ ಮುಖಕ್ಕೆ ಅಧೋಲೋಕದಲಿ
ಮುಸುಕುಹಾಕು.
14 ಆಗ ನಿನ್ನ ಬಲ ನಿನ್ನನ್ನು ರಕ್ಷಿಸಬಲ್ಲದೆಂದು
ನಾನೇ ಒಪ್ಪಿಕೊಳ್ಳುವೆನು.
15 ಸೃಷ್ಟಿಮಾಡಿದೆನು ನೀರಾನೆಯನು ನಿನ್ನ ಹಾಗೆ
ಅದು ಹುಲ್ಲನು ಮೇಯುತ್ತದೆ ಎತ್ತಿನ ಹಾಗೆ.

16 ಅದರ ಬಲ ಇರುವುದು ಸೊಂಟದಲಿ
ಅದರ ತ್ರಾಣ ಹೊಟ್ಟೆಯ ನರಗಳಲಿ.
17 ಬಾಲವನ್ನು ಬಾಗಿಸುತ್ತದೆ ದೇವದಾರು
ಮರದಂತೆ
ಅದರ ನರಗಳೋ ಹೆಣೆದುಕೊಂಡಿವೆ.
18 ಅದರ ಮೂಳೆಗಳಿವೆ ಕಂಚಿನ ನಳಿಕೆಗಳಂತೆ
ಅದರ ಎಲುಬುಗಳಿವೆ ಕಬ್ಬಿಣದ ಹಾರೆಗಳಂತೆ.
19 ದೈವ ಸೃಷ್ಟಿಗಳಲ್ಲಿ ಅದು ಮುಖ್ಯವಾದುದು
ಸೃಷ್ಟಿಕರ್ತನು ಅದಕ್ಕೆ
ಕೊಟ್ಟಿರುವನು ಕೋರೆಹಲ್ಲಿನ ಖಡ್ಗವನ್ನು.
20 ಅದಕ್ಕೆ ಮೇವು ಕೊಡುತ್ತವೆ ಬೆಟ್ಟಗುಡ್ಡಗಳು
ಅಲ್ಲಿ ಅಲೆದಾಡುತ್ತಿರುತ್ತವೆ ಕಾಡು ಮೃಗಗಳು.
21 ಅದು ಮಲಗುತ್ತದೆ ತಾವರೆ ಗಿಡಗಳಡಿಯಲಿ
ವಿಶ್ರಮಿಸುತ್ತದೆ ಆಪಿನ ಮರೆಯಲಿ,
ಕೆಸರು ಭೂಮಿಯಲಿ.
22 ಅದಕ್ಕೆ ನೆರಳನ್ನೀಯುತ್ತವೆ ತಾವರೆ ಎಲೆಗಳು
ಅದರ ಸುತ್ತಲಿರುತ್ತವೆ ನದಿಯ
ನೀರವಂಜಿಗಳು.
23 ಹೊಳೆ ಉಕ್ಕಿ ಬಂದರೂ ಅದು ಹೆದರುವುದಿಲ್ಲ
ನೋಡು
ಜೋರ್ಡನ್ ನದಿ ಅದರ ಬಾಯೊಳಗೆ
ನುಗ್ಗಿದರೂ ಧೈರ್ಯದಿಂದಿರುವುದು!
24 ಅದು ನೋಡುವಾಗ ಯಾವನಾದರು ಅದನು
ಹಿಡಿಯಬಲ್ಲನೆ?
ಗಾಳದಿಂದ ಯಾವನಾದರು ಅದರ ಮೂಗನು
ಚುಚ್ಚಬಲ್ಲನೆ?"

**41** " 'ಲಿವ್ಯತಾನ್' ಮೊಸಳೆಯನು
ಗಾಳದಿಂದ ಎಳೆಯಬಲ್ಲೆಯಾ?
ಅದರ ನಾಲಿಗೆಯನು ಹಗ್ಗದಿಂದ
ಬಿಗಿಯಬಲ್ಲೆಯಾ?
2 ಅದರ ಮೂಗಿಗೆ ಆಪನು ಪೋಣಿಸಬಲ್ಲೆಯಾ?
ಅದರ ದವಡೆಗೆ ಮುಳ್ಳನು ಚುಚ್ಚಬಲ್ಲೆಯಾ?
3 ಅದು ನಿನ್ನ ಸಂಗಡ ಸವಿ ಮಾತಾಡೀತೆ?
ನಿನಗೆ ವಿನಮ್ರ ವಿಜ್ಞಾಪನೆ ಮಾಡೀತೆ?
4 ನೀನದನ್ನು ನಿನ್ನ ಚಿರದಾಸನನ್ನಾಗಿಸಿ
ಕೊಳ್ಳುವಂತೆ
ನಿನ್ನೊಡನೆ ಅದು ಒಪ್ಪಂದ ಮಾಡಿಕೊಂಡೀತೆ?
5 ಅದನು ಹಕ್ಕಿಯಂತೆ ಆಡಿಸಬಲ್ಲೆಯಾ?

ಆಟಕ್ಕೆಂದು ಹುಡುಗಿಯರಿಗೆ
ಹಿಡಿದುಕೊಡಬಲ್ಲೆಯಾ?
6 ಬೆಸ್ತರು ಅದನು ವ್ಯಾಪಾರಕ್ಕೆ ಇಡುವರೇ?
ಪಾಲುಮಾಡಿಕೊಂಡು ಅದನು ವರ್ತಕರಿಗೆ
ಮಾರುವರೆ?
7 ಅದರ ಚರ್ಮವನು ಕೊಂಡಿಗಳಿಂದ
ಚುಚ್ಚಬಲ್ಲೆಯಾ?
ಅದರ ತಲೆಯನು ಮೀನು ಹಿಡಿಯುವ
ಭರ್ಜಿಯಿಂದ ತಿವಿಯಬಲ್ಲೆಯಾ?
8 ಅದರ ಮೇಲೆ ಒಮ್ಮೆ ಕೈಹಾಕಿ ನೋಡು!
ಆಗ ನಡೆಯಬಹುದಾದ ಕದನವನು
ನೆನೆಸಿಕೊಂಡರೆ ಸಾಕು!
ನೀನು ಮತ್ತೆ ಮುಟ್ಟಹೋಗಲಾರೆ ಅದನು.
9 ಅದನು ಹಿಡಿಯಬಹುದೆಂಬ ನಂಬಿಕೆ ವ್ಯರ್ಥ
ಹಿಡಿಯಬಂದವನು ನೋಡಿದ್ದೇ
ಬಿದ್ದುಹೋದ.
10 ಅದನು ಕೆಣಕಲು ಧೈರ್ಯಗೊಂಡಾಗ ಅದು
ಉಗ್ರವಾಗುತ್ತದೆ
'ನನ್ನ ಮುಂದೆ ನಿಲ್ಲಬಲ್ಲವರಾರು?' ಎನ್ನುತ್ತದೆ.
11 ಅದನ್ನೆದುರಿಸಿ ಸುರಕ್ಷಿತವಾಗಿ
ಇರಬಲ್ಲವನಾರು?
ಗಗನದ ಕೆಳಗಿರುವ ಯಾರಿಂದಲೂ ಅದಾಗದು.
12 ಅದರ ಅಂಗಗಳನು, ಶಕ್ತಿಯನು, ಸೊಬಗನು
ನಾನು ವರ್ಣಿಸದೆ ಮುಚ್ಚಿಡಲಾಗದು.
13 ಅದರ ಹೊರ ಕವಚವನು ಬಿಚ್ಚಬಲ್ಲವರಾರು?
ಅದರ ಜೊಡುದವಡೆಗಳಲಿ
ನುಗ್ಗಬಲ್ಲವರಾರು?
14 ಅದರ ಮುಖದ ಕದಗಳನು ತೆರೆಯ
ಬಲ್ಲವರಾರು?
ಅದರ ಹಲ್ಲುಗಳ ಸುತ್ತಲೂ ಭಯಭೀತಿ
ಆವರಿಸಿರುವುದು.
15 ಬೆನ್ನಿನ ಅಡ್ಡಣಗಳು ಅದಕ್ಕೆ ಕೊಟ್ಟಿವೆ ಕೆಚ್ಚನು
ಒತ್ತಿದ ಮುದ್ರೆಯಂತೆ ಬಿಗಿದಿವೆ ಅದನು.
16 ಗಾಳಿ ಕೂಡ ನುಗ್ಗದಂತೆ ಆ ಅಡ್ಡಣಗಳು
ಹೊಂದಿಕೊಂಡಿವೆ ಒಂದಕ್ಕೊಂದು.
17 ಪ್ರತ್ಯೇಕಿಸಲಾಗದಂತೆ ಅಂಟಿಕೊಂಡಿವೆ
ವಿಂಗಡಿಸಲಾಗದಂತೆ ಹಿಡಿದುಕೊಂಡಿವೆ.
18 ಅದರ ಸೀನಿನ ತುಂತುರುಗಳು ಥಳಥಳಿಸುತ್ತವೆ
ಅದರ ಕಣ್ಣುಗಳು ಅರುಣನೇತ್ರಕ್ಕೆ
ಸಮಾನವಾಗಿವೆ.

19 ಅದರ ಬಾಯಿಯೊಳಗಿಂದ ಕೊಳ್ಳಿಗಳು ಹೊರ
ಬರುತ್ತವೆ
ಅದರಿಂದ ಬೆಂಕಿಕಿಡಿಗಳು ಹಾರಿ ಬರುತ್ತವೆ.
20 ಹುಲ್ಲುಹಾಕಿ ಕಾಸಿದ ಕೊಪ್ಪರಿಗೆಯಿಂದಲೋ
ಎಂಬಂತೆ
ಅದರ ಮೂಗಿನ ಹೊಳ್ಳೆಗಳಿಂದ ಹೊಗೆ
ಹಾಯುತ್ತದೆ.
21 ಇದ್ದಿಲನು ಹೊತ್ತಿಸಲು ಅದರ ಉಸಿರೇ ಸಾಕು
ಅದರ ಬಾಯಿಂದ ಹೊರಹೊಮ್ಮುವುದು
ಜ್ವಾಲೆಯು.
22 ಅದರ ಬಲ ನೆಲೆಗೊಂಡಿದೆ ಕುತ್ತಿಗೆಯಲಿ
ಭಯವು ತಾಂಡವಾಡುತ್ತದೆ ಅದರ
ಮುಂಗಡೆಯಲಿ.
23 ಅಂಟಿಕೊಂಡಿದೆ ಅದರ ಮಾಂಸದ ಮಡಿಕೆಗಳು
ಗಟ್ಟಿಯಾಗಿ
ಅದರ ಮಾಂಸಖಂಡ ನಿಬಿಡವಾಗಿ.
24 ಅದರ ಹೃದಯ ಬಂಡೆಯಂತೆ
ಅದು ಗಟ್ಟಿ, ಬೀಸುವ ಕೆಳಗಲ್ಲಿನಂತೆ.
25 ಬಲಿಷ್ಠರೂ ಭಯಪಡುತ್ತಾರೆ ಅದು ಎದ್ದರೆ
ಭಯಭ್ರಾಂತರಾಗಿ ತತ್ತರಿಸುತ್ತಾರೆ ಅದು
ಬಡಿದರೆ.
26 ಕತ್ತಿಯಿಂದ ಹೊಡೆದರೆ ಅದಕ್ಕೇನೂ ಆಗದು
ಭರ್ಜಿ, ಬಾಣ, ಈಟಿಗಳಿಂದ ಏನೂ ಆಗದು.
27 ಕಬ್ಬಿಣ ಅದಕ್ಕೆ ಒಣ ಹುಲ್ಲಿನಂತೆ
ಕಂಚು ಅದಕ್ಕೆ ಟೊಳ್ಳು ಮರದಂತೆ.
28 ಅದನು ಬಿಲ್ಲು ಬಾಣಗಳಿಂದ ಓಡಿಸಲು
ಅಸಾಧ್ಯ
ಕಣಿವೆಯ ಕಲ್ಲು ಅದಕ್ಕೆ ಹೊಟ್ಟಿಗೆ ಸಮಾನ.
29 ದೊಣ್ಣೆಗಳು ಅದಕ್ಕೆ ಹುಲ್ಲುಕಡ್ಡಿಯ ಹಾಗೆ
ಅದು ನಗುತ್ತದೆ ಸರ್ರನೆ ಬರುವ ಈಟಿಗೆ.
30 ಅದರ ಹೊಟ್ಟೆಯ ಅಡಿಭಾಗವು
ಬೋಕಿಬಿಲ್ಲೆಗಳಂತೆ ಚೂಪು
ಹಲಿವೆಯ ಹಾಗೆ ಕೆಸರಿನ ಮೇಲೆ ಮೈ
ಚಾಚಿಕೊಂಡಿರುವುದು.
31 ಜಲನಿಧಿಯನು ಅದು ಕುದಿಸುತ್ತದೆ ಹಂಡೆಯ
ನೀರಿನಂತೆ
ಸಮುದ್ರವನು ಕಲಕಿಸುತ್ತದೆ ತೈಲದ
ಕುಡಿಕೆಯಂತೆ.
32 ಸಾಗರಕ್ಕೆ ನೆರೆಬಂತೋ ಎಂಬ ಹಾಗೆ
ಶುಭ್ರಗೊಳಿಸುತ್ತದೆ ತಾನು ಬಂದ

ಹಾದಿಯನ್ನೇ.
33 ಜಗದಲ್ಲೆಲ್ಲೂ ಸಿಗದು ಇದಕ್ಕೆ ಸಾಟಿ
ಭಯಭೀತಿಯಿಲ್ಲದ್ದು ಈ ಸೃಷ್ಟಿ
34 ದಿಟ್ಟಿಸಿ ನೋಡುತ್ತದೆ ಘನಪ್ರಾಣಿಗಳನ್ನೆಲ್ಲಾ
ರಾಜನಾಗಿರುತ್ತದೆ ಸೊಕ್ಕಿನ ಮೃಗಗಳಿಗೆಲ್ಲಾ!

**42** ಆಗ ಯೋಬನು ಸರ್ವೇಶ್ವರ
ಸ್ವಾಮಿಗೆ ಕೊಟ್ಟ ಉತ್ತರ ಇದು:
2 "ತಾವು ಎಲ್ಲಾ ಕಾರ್ಯಗಳನು ನಡೆಸಲು
ಶಕ್ತರೆಂದು ನಾನು ಬಲ್ಲೆ
ಯಾವ ಯೋಜನೆಯು ನಿಮಗೆ
ಅಸಾಧ್ಯವಿಲ್ಲವೆಂದು ನಾನು ಅರಿತಿರುವೆ.
2 'ಅಜ್ಞಾನದ ಮಾತುಗಳನ್ನಾಡುವ ನೀನು
ಯಾರು?'
'ಸತ್ಯಾಲೋಚನೆಗಳನು ಮಂಕುಮಾಡುವ
ನೀನಾರು?'
ಈ ನಿಮ್ಮ ನುಡಿಯಂತೆ ಅರ್ಥಹೀನ
ಮಾತುಗಳನು ನಾನಾಡಿದೆ
ನನ್ನ ಬುದ್ಧಿಗೆಟುಕದ ಪವಾಡಗಳನ್ನು ಟೀಕಿಸಿದೆ.
4 'ನಾನಾಡುವುದನು ಕಿವಿಗೊಟ್ಟು ಕೇಳು
ನನ್ನ ಪ್ರಶ್ನೆಗೆ ಉತ್ತರ ನೀಡು'
ಎಂದು ನೀವು ಕೊಟ್ಟಿರಿ ಅಪ್ಪಣೆಯನು.
5 ಈವರೆಗೆ ನಿಮ್ಮನು ಕುರಿತು ನಾನು ಕೇಳಿದ್ದು
ಬೇರೆಯವರಿಂದ
ಈಗಲಾದರೊ ನಿಮ್ಮನು ಕಂಡಿದ್ದೇನೆ ನನ್ನ
ಕಣ್ಣುಗಳಿಂದ.
6 ಆದುದರಿಂದ ನಾನು ಹೇಳಿದ್ದೆಲ್ಲಕ್ಕಾಗಿ
ವಿಷಾದಿಸುತ್ತೇನೆ
ಬೂದಿಯಲು, ದೂಳಿನಲು ಕುಳಿತು ಪಶ್ಚಾತ್ತಾಪ
ಪಡುತ್ತೇನೆ."

**ಸಮಾಪ್ತಿ**

7 ಸರ್ವೇಶ್ವರಸ್ವಾಮಿ ಈ ಮಾತುಗಳನ್ನು ಯೋಬನಿಗೆ ಹೇಳಿದ ಮೇಲೆ ತೇಮಾನ್ಯನಾದ ಎಲೀಫಜನಿಗೆ, "ನಿನ್ನ ಮೇಲೂ ನಿನ್ನ ಗೆಳೆಯರಿಬ್ಬರ ಮೇಲೂ ನನಗೆ ಕೋಪವಿದೆ! ನನ್ನ ದಾಸ ಯೋಬನಂತೆ ನೀವು ನನ್ನ ವಿಷಯವಾಗಿ ಸರಿಯಾದುದನ್ನು ಆಡಲಿಲ್ಲ. 8ಆದುದರಿಂದ ನೀವು ಏಳು ಹೋರಿಗಳನ್ನೂ ಏಳು ಟಗರುಗಳನ್ನೂ ತೆಗೆದುಕೊಂಡು ನನ್ನ ದಾಸ ಯೋಬನ ಬಳಿಗೆ ಬನ್ನಿರಿ; ನಿಮ್ಮ ದೋಷಪರಿಹಾರಕ್ಕಾಗಿ ದಹನಬಲಿಯನ್ನು ಅರ್ಪಿಸಿರಿ. ನನ್ನ ದಾಸ ಯೋಬ ನಿಮ್ಮ ಪರವಾಗಿ ಪ್ರಾರ್ಥನೆ ಮಾಡುವನು; ನಾನು ಅವನ ವಿಜ್ಞಾಪನೆಯನ್ನು ಆಲಿಸಿ ನಿಮ್ಮ ನಿಮ್ಮ ಮೂರ್ಖತನಕ್ಕೆ ತಕ್ಕ ದಂಡನೆಯನ್ನು ವಿಧಿಸುವುದಿಲ್ಲ. ನನ್ನ ದಾಸ ಯೋಬನು ನನ್ನ ವಿಷಯದಲ್ಲಿ ಸತ್ಯವನ್ನು ನುಡಿದಂತೆ ನೀವು ನುಡಿಯಲಿಲ್ಲ,"

ಎಂದರು. 9ಆಗ ತೇಮಾನ್ಯನಾದ ಎಲೀಫಜನು, ಶೂಹ್ಯನಾದ ಬಿಲ್ದದನು ಮತ್ತು ನಾಮಾಥ್ಯನಾದ ಚೋಫರನು ಹೋಗಿ ಸರ್ವೇಶ್ವರ ತಮಗೆ ಆಜ್ಞಾಪಿಸಿದಂತೆ ಮಾಡಿದರು. ಸರ್ವೇಶ್ವರ ಯೋಬನ ವಿಜ್ಞಾಪನೆಯನ್ನು ಆಲಿಸಿದರು.

10 ಯೋಬನು ತನ್ನ ಮಿತ್ರರಿಗೋಸ್ಕರ ಪ್ರಾರ್ಥಿಸಿದ ಬಳಿಕ ಸರ್ವೇಶ್ವರಸ್ವಾಮಿ ಅವನ ದುಸ್ಥಿತಿಯನ್ನು ಹೋಗಲಾಡಿಸಿದರು. ಅವನ ಆಸ್ತಿ ಪಾಸ್ತಿಯನ್ನು ಮೊದಲಿಗಿಂತ ಇಮ್ಮಡಿಯಾಗಿಸಿದರು. 11ಅವನ ಎಲ್ಲಾ ಅಣ್ಣತಮ್ಮಂದಿರು, ಅಕ್ಕತಂಗಿಯರು, ಹಿಂದಿನ ಪರಿಚಿತರು ಅವನನ್ನು ಕಾಣಬಂದು ಔತಣದಲ್ಲಿ ಭಾಗವಹಿಸಿದರು. ಅವನಿಗೆ ಸರ್ವೇಶ್ವರನಿಂದ ಒದಗಿದ್ದ ಆಪತ್ತಿಗಾಗಿ ಅನುತಾಪ ವ್ಯಕ್ತಪಡಿಸಿ, ಸಂತೈಸಿದರು. ಪ್ರತಿಯೊಬ್ಬರೂ ಒಂದೊಂದು ಬೆಳ್ಳಿ ನಾಣ್ಯವನ್ನೂ ಒಂದೊಂದು ಚಿನ್ನದ ಉಂಗುರವನ್ನೂ ಅವನಿಗೆ ಕೊಟ್ಟರು. 12ಸರ್ವೇಶ್ವರ ಯೋಬನ ಮೊದಲನೆಯ ಸ್ಥಿತಿಗಿಂತಲೂ ಅವನ ಕಡೆಯ ಸ್ಥಿತಿಯನ್ನು ಹೀಗೆ ಅಧಿಕಗೊಳಿಸಿ ಆಶೀರ್ವದಿಸಿದರು. 13ಅವನಿಗೆ ಹದಿನಾಲ್ಕು ಸಾವಿರ ಕುರಿಗಳು, ಆರು ಸಾವಿರ ಒಂಟೆಗಳು, ಒಂದು ಸಾವಿರ ಜೋಡಿ ಎತ್ತುಗಳು, ಒಂದು ಸಾವಿರ ಕತ್ತೆಗಳು ದೊರಕಿದವು. 14ಅಲ್ಲದೆ ಏಳು ಮಂದಿ ಗಂಡು ಮಕ್ಕಳು, ಮೂರು ಮಂದಿ ಹೆಣ್ಣು ಮಕ್ಕಳು ಹುಟ್ಟಿದರು. ಮೊದಲನೆಯವಳಿಗೆ ಯೆಮೀಮ, ಎರಡನೆಯವಳಿಗೆ ಕೆಚೀಯ, ಮೂರನೆಯವಳಿಗೆ ಕೆರೆನ್ಹಪ್ಪೂಕ್ ಎಂದು ಹೆಸರಿಟ್ಟನು. 15ಯೋಬನ ಮಕ್ಕಳಷ್ಟು ಸುಂದರವಾದ ಹೆಣ್ಣುಗಳು ಆ ನಾಡಿನಲ್ಲೆಲ್ಲೂ ಸಿಕ್ಕುತ್ತಿರಲಿಲ್ಲ. ಅವರ ತಂದೆ, ಅವರ ಅಣ್ಣತಮ್ಮಂದಿರಿಗೆ ಕೊಟ್ಟ ಹಾಗೆ ಅವರಿಗೂ ಸೊತ್ತನ್ನು ಹಂಚಿದನು. 16ತರುವಾಯ ಯೋಬನು ನೂರನಾಲ್ವತ್ತು ವರ್ಷಬಾಳಿದನು. ನಾಲ್ಕು ತಲೆಮಾರು ತನಕ ಮಕ್ಕಳನ್ನೂ ಮೊಮ್ಮಕ್ಕಳನ್ನೂ ಕಂಡನು. 17ಹಣ್ಣು ಹಣ್ಣು ಮುದುಕನಾಗಿ ಸತ್ತನು.